ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದ ಸರ್ವೆ ನಂ. 106 (ಹೊಸ ಸರ್ವೆ ನಂ. 239)ರ 1-28 ಗುಂಟೆ ಜಮೀನಿನ ಭೂ ಮಾಲೀಕರು ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ರಾಮನಗರ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿದ್ದ ಭೂಸ್ವಾಧೀನ ಪ್ರಕರಣ ಎಲ್.ಎ.ಸಿ. ಸಂಖ್ಯೆ : 4/06ರ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ್ದು, ಸದರಿ ತೀರ್ಪಿನ ಆಧಾರದ ಮೇಲೆ ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನದ ಮೂಲ ಐತೀರ್ಪಿನಲ್ಲಿ ಸೇರಿದ್ದ ಕೆಳಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ) ರಡಿ ಐತೀರ್ಪು ಘೋಷಿಸಿದ್ದಾರೆ.

ಕ್ರ. ಸಂ.	ಸರ್ವೆ ನಂ :	ವಿಸ್ತೀರ್ಣ ಎ-ಗುಂ	ಗ್ರಾಮ	ಪರಿಹಾರ ಮೊತ್ತ ರೂ.ಗಳಲ್ಲಿ
1	240	1-39	ದೊಡ್ಡಮರಳವಾಡಿ	831798
2	242	1-06	ದೊಡ್ಡಮರಳವಾಡಿ	
3	242	2-31	ದೊಡ್ಡಮರಳವಾಡಿ	738636
4	238	2-17	ದೊಡ್ಡಮರಳವಾಡಿ	645474
5	2	0-12	ಭೀಮಸಂದ್ರ	79852
6	241	0-31	ದೊಡ್ಡಮರಳವಾಡಿ	206284
7	128	0-05	ಹುಯಲಪ್ಪನಹಳ್ಳಿ	33272
8	128	0-15	ಹುಯಲಪ್ಪನಹಳ್ಳಿ	99815
9	22/2ಎ	0-14	ಕಲ್ಲನಕುಪ್ಪೆ	93161
10	114/1	0-38	ಕಲ್ಲನಕುಪ್ಪೆ	252863
11	114/4	0-30	ಕಲ್ಲನಕುಪ್ಪೆ	199629
12	114/2	1-10	ಕಲ್ಲನಕುಪ್ಪೆ	365987
13	393	0-10	ಕಲ್ಲನಕುಪ್ಪೆ	186320
14	392	0-02	ಕಲ್ಲನಕುಪ್ಪೆ	46581
15	397	0-05	ಕಲ್ಲನಕುಪ್ಪೆ	
16	397	0-30	ಕಲ್ಲನಕುಪ್ಪೆ	199629
17	398	0-10	ಕಲ್ಲನಕುಪ್ಪೆ	66543
18	168	0-20	ಎಲಚವಾಡಿ	133086
19	172/2	0-25	ಎಲಚವಾಡಿ	166358
20	53/2	1-24	ಎಲಚವಾಡಿ	425875
21	53/2	0-04	ಎಲಚವಾಡಿ	219592
22	24/7	0-02	ಕಲ್ಲನಕುಪ್ಪೆ	
23	24/8	0-15	ಕಲ್ಲನಕುಪ್ಪೆ	
24	25/8	0-15	ಕಲ್ಲನಕುಪ್ಪೆ	
25	76/2	1-10	ಎಲಚವಾಡಿ	332715
26	79	0-20	ಎಲಚವಾಡಿ	133086
			ಒಟ್ಟು	**5456556**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂ : ಸನೀಇ 34 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ : 05-05-2010

ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು ರಾವುತನಹಳ್ಳ ಸಣ್ಣ ನೀರಾವರಿ ಕೆರೆ ನಿರ್ಮಾಣ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಳ್ಳಲಾದ (ಹೆಚ್ಚುವರಿ ವಿಸ್ತೀರ್ಣ) ದೊಡ್ಡಮರಳವಾಡಿ, ಎಲಚವಾಡಿ, ಕಲ್ಲನಕುಪ್ಪೆ, ಹುಯಲಪ್ಪಹಳ್ಳಿ ಮತ್ತು ಭೀಮಸಂದ್ರ ಗ್ರಾಮಗಳಿಗೆ ಸೇರಿದ ಪ್ರಸ್ತಾವನೆಯಲ್ಲಿ ತಿಳಿಸಿರುವ ಸರ್ವೆ ನಂಬರ್‌ಗಳ ಜಮೀನುಗಳಿಗೆ ನ್ಯಾಯಾಲಯವು ನೀಡಿರುವ ತೀರ್ಪಿನ ಆಧಾರದ ಮೇಲೆ ಭೂಸ್ವಾಧೀನಾಧಿಕಾರಿಗಳು ಭೂಸ್ವಾಧೀನ ಕಾಯ್ದೆ ಕಲಂ 28 (ಎ) ರಡಿ ರಚಿಸಿರುವ ಐತೀರ್ಪಿನಂತೆ ಪರಿಹಾರ ಧನ ಮೊತ್ತ ರೂ.54,56,556-00 ಗಳನ್ನು (ಐವತ್ತನಾಲ್ಕು ಲಕ್ಷದ ಐವತ್ತಾರು ಸಾವಿರದ ಐದುನೂರ ಐವತ್ತಾರು ರೂಪಾಯಿಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00-ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್.ಡಿ. 1 ಟಿಎಫ್‌ಪಿ 2008, ದಿನಾಂಕ 16-05-2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ),
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 1209

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಂತರ್ಜಲ ವಿಭಾಗಕ್ಕೆ ಸಂಬಂಧಪಟ್ಟ ಯೋಜನೆಗಳನ್ನು 2010-11 ನೇ ಸಾಲಿನಲ್ಲಿ ಮುಂದುವರಿಸುವ ಬಗ್ಗೆ.

ಓದಲಾಗಿದೆ : ಪತ್ರ ಸಂಖ್ಯೆ : ಗಭೂಇ/ಅಜವಿ/ಮು.ಯೋ/2009-10/268, ದಿನಾಂಕ 12-04-2010.

ಪ್ರಸ್ತಾವನೆ :

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಂತರ್ಜಲ ವಿಭಾಗಕ್ಕೆ ಸಂಬಂಧಪಟ್ಟ ಯೋಜನೆಗಳನ್ನು 2010-11 ನೇ ಸಾಲಿನಲ್ಲಿ ಮುಂದುವರಿಸಲು ಸರ್ಕಾರದ ಅನುಮೋದನೆಯನ್ನು ನೀಡುವಂತೆ ಮೇಲೆ ಓದಲಾದ ಪತ್ರದಲ್ಲಿ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂ : ಸನೀಇ 14 ಅಜಅ 2010, ಬೆಂಗಳೂರು, ದಿನಾಂಕ : 04-05-2010

ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಂತರ್ಜಲ ವಿಭಾಗದಲ್ಲಿನ ಈ ಕೆಳಕಂಡ ಯೋಜನೆಗಳನ್ನು 2010-11ನೇ ಸಾಲಿಗೆ ಮುಂದುವರಿಸಲು ಸರ್ಕಾರವು ಅನುಮೋದನೆ ನೀಡಿದೆ.

ಕ್ರ.ಸಂ.	ಯೋಜನೆ ಮತ್ತು ಶೀರ್ಷಿಕೆ	2010-11 ನೇ ಸಾಲಿನ ಅನುದಾನ (ಲಕ್ಷ ರೂ.ಗಳಲ್ಲಿ)
1	ನಿರ್ದೇಶನ ಮತ್ತು ಆಡಳಿತ 2702-02-001-0-01	0.00
2	ದೂರ ಸಂವೇದನಾ ತಾಂತ್ರಿಕತೆಯಿಂದ ಅಂತರ್ಜಲ ಅಭಿವೃದ್ಧಿ 2707-02-005-0-11	12.70
3	ಸಮೀಕ್ಷೆ ಮೇಲ್ಮೈ ಜಲ ಮತ್ತು ಅಂತರ್ಜಲದ ಸಂಸ್ಥೆಯ ಬಲವರ್ಧನೆ 2702-02-005-0-15	248.81
4	ರಾಷ್ಟ್ರೀಯ ಜಲ ಶಾಸ್ತ್ರ ಯೋಜನೆ 2702-02-005-0-80 ಯೋಜನೆ	168.49
	ಒಟ್ಟು	**430.00**

2) ಮುಂದುವರಿದ ಕಾರ್ಯಕ್ರಮಗಳಿಗೆ ಯಾವುದೇ ಹೊಸ ಘಟಕಗಳ ಪ್ರಸ್ತಾವನೆ ಇದ್ದಲ್ಲಿ ಸರ್ಕಾರದ ಪ್ರತ್ಯೇಕ ಮಂಜೂರಾತಿಯನ್ನು ಪಡೆದು ಅನುಷ್ಠಾನಗೊಳಿಸುವುದು.

3) ಮುಂದುವರಿದ ಯೋಜನೆಗಳಡಿಯಲ್ಲಿ ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

4) ಈ ಆದೇಶವನ್ನು ಯೋಜನಾ ಇಲಾಖೆಯ ಆದೇಶ ಸಂಖ್ಯೆ : ಪಿಡಿ 17 ಐಎಂಎಂ 2005 : ದಿನಾಂಕ 10.08.2005 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಕೆ. ಸುಧಾಕರ ಶೆಟ್ಟಿ),

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1210 ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ತೋಟಗಾರಿಕೆ ಸಚಿವಾಲಯ

ವಿಷಯ : ತಾಳೆಬೆಳೆ ಅಭಿವೃದ್ಧಿ ಯೋಜನೆಯಡಿ ತಾಳೆಬೆಳೆ ಬೆಲೆ ನಿಗದಿ ಸಮಿತಿಯ ಪುನರ್ ರಚನೆ ಕುರಿತು.

ಓದಲಾಗಿದೆ : 1) ಆದೇಶ ಸಂಖ್ಯೆ : ಕೃತೋಇ 306 ತೋಯೋಕಾ 2005, ದಿನಾಂಕ 19-02-2007.

2) ತೋಟಗಾರಿಕಾ ನಿರ್ದೇಶಕರ ಪತ್ರ ಸಂಖ್ಯೆ : ತೋಇ/ತೋಜಂನಿ/ತಾಬೆಯೋ/ಸತೋಅ-1/8/2009-10, ದಿ : 17/20-02-2010.

ಪ್ರಸ್ತಾವನೆ :

ಭಾರತ ಸರ್ಕಾರದ ಟೆಕ್ನಾಲಜಿ ಮಿಷನ್ ಆನ್ ಆಯಿಲ್ ಸೀಡ್ಸ್, ಪಲ್ಸಸ್ ಅಂಡ್ ಮೇಜ್ ಯೋಜನೆಯಡಿ ಎಣ್ಣೆ ತಾಳೆ ಅಭಿವೃದ್ಧಿ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ತಾಳೆಬೆಳೆಯ ಪ್ರದೇಶ ವಿಸ್ತರಣೆ ಮತ್ತು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ವಹಿಸಲಾಗಿರುವ ಖಾಸಗಿ ಸಂಸ್ಥೆಗಳು ತಾಳೆ ಹಣ್ಣುಗಳನ್ನು ರೈತರಿಂದ ನೇರವಾಗಿ ಖರೀದಿಸುತ್ತಿವೆ. ರೈತರ ಹಿತದೃಷ್ಟಿಯಿಂದ ತಾಳೆ ಹಣ್ಣುಗಳ ಖರೀದಿ ಬೆಲೆಯನ್ನು ನಿಗದಿಪಡಿಸಲು ದಿ. 17-07-1993 ರಂದು ತಾಳೆ ಹಣ್ಣುಗಳ ಬೆಲೆ ನಿಗದಿ ಸಮಿತಿಯನ್ನು ರಚಿಸಲಾಗಿದ್ದು ಈ ಸಮಿತಿಯ ಪುನರ್ ರಚನೆಯನ್ನು ಆಗಿಂದಾಗ್ಗೆ ಮಾಡಲಾಗುತ್ತಿದೆ.

ತಾಳೆಬೆಳೆ ಅಭಿವೃದ್ಧಿ ಯೋಜನೆಯಡಿ ತಾಳೆಬೆಳೆ ಬೆಲೆ ನಿಗದಿ ಸಮಿತಿಯನ್ನು ಮೇಲೆ ಓದಲಾದ (1)ರ ಸರ್ಕಾರಿ ಆದೇಶದನ್ವಯ ದಿನಾಂಕ 18-02-2010 ರವರೆಗೆ ಪುನರ್ ರಚಿಸಿದ್ದು, ಅದರ ಅವಧಿ ಮುಗಿದಿರುವುದರಿಂದ ತೋಟಗಾರಿಕೆ ನಿರ್ದೇಶಕರು ಮೇಲೆ ಓದಲಾದ (2)ರ ಪತ್ರದನ್ವಯ ಸದರಿ ಸಮಿತಿಯ ಪುನರ್ ರಚನೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರವು ಈ ವಿಷಯವನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ತೋಇ 37 ತೋಯೋಕಾ 2010, ಬೆಂಗಳೂರು, ದಿನಾಂಕ : 05-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತಾಳೆ ಹಣ್ಣುಗಳ ಖರೀದಿ ಬೆಲೆಯನ್ನು ನಿಗದಿಪಡಿಸಲು ದಿನಾಂಕ 19-02-2007ರ ಸರ್ಕಾರಿ ಆದೇಶದಲ್ಲಿ ಪುನರ್ ರಚಿಸಲಾಗಿದ್ದ ಸಮಿತಿಯನ್ನು ರದ್ದುಗೊಳಿಸಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

1. **ಅಧಿಕಾರಿ ಸದಸ್ಯರುಗಳು :**

ಅ)	ಸರ್ಕಾರದ ಕಾರ್ಯದರ್ಶಿಗಳು ತೋಟಗಾರಿಕಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.	ಅಧ್ಯಕ್ಷರು
ಆ)	ತೋಟಗಾರಿಕಾ ನಿರ್ದೇಶಕರು, ಲಾಲ್‌ಬಾಗ್, ಬೆಂಗಳೂರು.	ಸದಸ್ಯರು
	ನಿರ್ದೇಶಕರು, ರಾಷ್ಟ್ರೀಯ ತಾಳೆ ಸಂಶೋಧನಾ ಕೇಂದ್ರ ಪೆಡವಗಿ, ಆಂಧ್ರ ಪ್ರದೇಶ	ಸದಸ್ಯರು
ಈ)	ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ., ಬೆಂಗಳೂರು.	ಸದಸ್ಯರು
ಉ)	ತೋಟಗಾರಿಕಾ ಅಪರ ನಿರ್ದೇಶಕರು (ತಾಳೆಬೆಳೆ) ಲಾಲ್‌ಬಾಗ್, ಬೆಂಗಳೂರು.	ಸದಸ್ಯ-ಕಾರ್ಯದರ್ಶಿ

2. ರೈತ ಸದಸ್ಯರು :

ಕ್ರ. ಸಂ.	ವಲಯ ಹಾಗೂ ಸಂಸ್ಥೆಯ ಹೆಸರು	ರೈತ ಸದಸ್ಯರು
1.	ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಕೊಡಗು ಮೆ : ಪಾಮ್‌ಟೆಕ್ ಇಂಡಿಯಾ ಲಿ., ಮೈಸೂರು	1) ಶ್ರೀಮತಿ ಸ್ವಾತಿ ಕುಟ್ಟಯ್ಯ, ಬಾಲೆಲೆ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ, (ಮಹಿಳೆ)
		2) ಶ್ರೀ ಮಹೇಶ್. ವೈ.ಟಿ. ಹೆಚ್.ಡಿ. ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.
2.	ಶಿವಮೊಗ್ಗ, ಚಿಕ್ಕಮಗಳೂರು, ಬಾಗಲಕೋಟೆ, ಬಿಜಾಪುರ ಮತ್ತು ಗುಲ್ಬರ್ಗಾ ಮೆ: ಭದ್ರಾವತಿ ಬಾಲಾಜಿ ಆಯಿಲ್ ಪಾಮ್ಸ್ ಲಿ.	1) ಶ್ರೀ ಕೆ.ಪಿ. ಪರಮೇಶ್ವರಪ್ಪ, ಕಡೇಕಲ್, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
		2) ಶ್ರೀ ರಮೇಶ್ ಮುರಿಗಪ್ಪ ಕೋರಿ, ಬಸವನ ಬಾಗೇವಾಡಿ ತಾಲ್ಲೂಕು, ಬಿಜಾಪುರ ಜಿಲ್ಲೆ.
3.	ದಾವಣಗೆರೆ, ಹಾವೇರಿ ಮತ್ತು ಬಳ್ಳಾರಿ ಮೆ. ಸಿಂಹಪುರಿ ಅಗ್ರಿಟೆಕ್ ಲಿ.	1) ಶ್ರೀ ಕೆ.ಇ. ನಾಗರಾಜ್, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
		2) ಶ್ರೀ ಜಿ. ರಾಘವೇಂದ್ರ ಶೆಟ್ಟಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
4.	ಕೊಪ್ಪಳ, ರಾಯಚೂರು ಮತ್ತು ಗದಗ ಮೆ : ಫೂಡ್ಸ್ ಫ್ಯಾಟ್ಸ್ ಅಂಡ್ ಫರ್ಟಿಲೈಜರ್ಸ್ ಲಿ.	1) ಶ್ರೀ ಸಂಗಣ್ಣಗೌಡ. ಜಿ. ಕರೀಗೌಡ, ಸಾ : ಮುಂಡರಗಿ, ಮುಂಡರಗಿ ತಾಲ್ಲೂಕು, ಗದಗ ಜಿಲ್ಲೆ.
		2) ಶ್ರೀಮತಿ ಜಯಶ್ರೀ ಮಲ್ಲನಗೌಡ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ (ಮಹಿಳೆ)
5.	ಬೆಳಗಾವಿ ಮತ್ತು ಉತ್ತರ ಕನ್ನಡ ಮೆ : ಗೋದ್ರೇಜ್ ಅಗ್ರೋವೆಟ್ ಲಿ.	1) ಶ್ರೀ ಅರವಿಂದ್ ಬಾಲಪ್ಪ ಯನ್ನಗಿ, ಸೌದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
		2) ಶ್ರೀ ಸ್ವರೂಪ್ ಧನಂಜಯ್, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ (ಅಲ್ಪಸಂಖ್ಯಾತರು)

3. ಕಂಪನಿ ಪ್ರತಿನಿಧಿಗಳು :

1.	ವ್ಯವಸ್ಥಾಪಕ ನಿರ್ದೇಶಕರು, ಮೆ: ಭದ್ರಾವತಿ ಬಾಲಾಜಿ ಆಯಿಲ್ ಪಾಮ್ಸ್ ಲಿ., ನಂ.8, ಬಿ.ಹೆಚ್. ರಸ್ತೆ, ಕಾರೇಹಳ್ಳಿ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
2.	ಡೆಪ್ಯೂಟಿ ಜನರಲ್ ಮ್ಯಾನೇಜರ್, ಮೆ : ಪಾಮ್‌ಟೆಕ್ ಇಂಡಿಯಾ ಲಿ. ನಂ. 501 ಚಿತ್ರಭಾನು ರಸ್ತೆ, ಎ ಮತ್ತು ಬಿ ಬ್ಲಾಕ್, ಕುವೆಂಪು ನಗರ, ಮೈಸೂರು ಜಿಲ್ಲೆ.
3.	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಮೆ. ಸಿಂಹಪುರಿ ಅಗ್ರಿಟೆಕ್ ಲಿ. ನಂ. 134, 1ನೇ ಕ್ರಾಸ್, ದೇವರಾಜ್ ಅರಸ್ ಲೇಔಟ್, ದಾವಣಗೆರೆ ಜಿಲ್ಲೆ.
4.	ಮ್ಯಾನೇಜರ್, ಮೆ : ಫೂಡ್ಸ್ ಫ್ಯಾಟ್ಸ್ ಅಂಡ್ ಫರ್ಟಿಲೈಜರ್ಸ್ ಲಿ., ಮನೆ ನಂ.9-7-680/528, ಪಂಪಾ ನಿಲಯ, ರಿಲಯನ್ಸ್ ಪೆಟ್ರೋಲ್ ಬಂಕ್ ಹತ್ತಿರ, ಹೊಸಪೇಟೆ ರಸ್ತೆ, ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ.
5.	ಮ್ಯಾನೇಜರ್, ಮೆ : ಗೋದ್ರೇಜ್ ಅಗ್ರೋವೆಟ್ ಲಿ. ತಾಳಿಬೆಳೆ ಶಾಖೆ, ಮೊದಲ ಮಹಡಿ, ಎಂ.ಎಸ್. ಕಾಂಪ್ಲೆಕ್ಸ್, ಮೊದಲನೇ ಕ್ರಾಸ್, ಕಾಲಿಅಂಬ್ರಾಯಿ, ಬೆಳಗಾವಿ.

ಸದರಿ ಸಮಿತಿಯು ಕಾಲಕಾಲಕ್ಕೆ ಸಭೆ ಸೇರಿ ಕೂಲಂಕಷವಾಗಿ ಚರ್ಚಿಸಿ ತಾಳೆ ಹಣ್ಣುಗಳ ಖರೀದಿ ಬೆಲೆ ನಿಗದಿಪಡಿಸಿ ಸೂಕ್ತ ಆದೇಶ ನೀಡುವುದು. ಈ ಸಮಿತಿಯಲ್ಲಿರುವ ರೈತ ಸದಸ್ಯರ ಅವಧಿಯನ್ನು ಈ ಆದೇಶದ ದಿನಾಂಕದಿಂದ ಮೂರು ವರ್ಷಗಳವರೆಗೆ ಎಂದರೆ, ದಿ : 05-05-2010 ರಿಂದ ದಿ : 04-05-2013 ರವರೆಗೆ ನಿಗದಿಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಸ್. ರಾಜು),
ಸರ್ಕಾರದ ಅಧೀನ ಕಾರ್ಯದರ್ಶಿ,
ಪಿ.ಆರ್. 1211 ತೋಟಗಾರಿಕೆ ಇಲಾಖೆ.

ವಸತಿ ಸಚಿವಾಲಯ

ವಿಷಯ : ಹುಬ್ಬಳ್ಳಿ-ಧಾರವಾಡ ಪಶ್ಚಿಮ ನಗರ ಆಶ್ರಯ ಸಮಿತಿಗೆ ಅಧ್ಯಕ್ಷರ ಮತ್ತು ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂ. ವಇ 42 ಹೆಚ್ಎಎಂ 1999 ದಿನಾಂಕ 10-5-2000.
2. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಪತ್ರ ಸಂ. ಕಗಪ್ರಅಪ್ರಾ/109/2010 ದಿನಾಂಕ 12.3.2010

ಪ್ರಸ್ತಾವನೆ :

ಸರ್ಕಾರವು ನಗರ, ಆಶ್ರಯ ಸಮಿತಿಗಳನ್ನು ಮೇಲೆ ಓದಲಾದ ಸರ್ಕಾರದ ಆದೇಶದನ್ವಯ ವಿಧಾನಸಭಾ ಕ್ಷೇತ್ರವಾರು ಪುನರ್‌ರಚಿಸಲು ತೀರ್ಮಾನಿಸಿದೆ. ಹುಬ್ಬಳ್ಳಿ-ಧಾರವಾಡ ಪಶ್ಚಿಮ ಮತಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಮಾನ್ಯ ಅಧ್ಯಕ್ಷರಾದ ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ ಇವರು ಶ್ರೀ ಬಸವರಾಜ ಫಕೀರಪ್ಪ ವಿಭೂತಿ, ಕಲ್ಯಾಣನಗರ, ಧಾರವಾಡ ಇವರನ್ನು ಹುಬ್ಬಳ್ಳಿ-ಧಾರವಾಡ ಪಶ್ಚಿಮ ನಗರ ಆಶ್ರಯ ಸಮಿತಿಯ ಅಧ್ಯಕ್ಷರ ಹುದ್ದೆಗೆ ನೇಮಿಸುವಂತೆ ಸೂಚಿಸಿದ್ದು, ಹುಬ್ಬಳ್ಳಿ-ಧಾರವಾಡ ಪಶ್ಚಿಮ ನಗರ ಆಶ್ರಯ ಸಮಿತಿಗೆ ಅಧ್ಯಕ್ಷರನ್ನು ಮತ್ತು ಅಧಿಕಾರೇತರ ಸದಸ್ಯರನ್ನು ನೇಮಿಸುತ್ತ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ. ವಇ 18 ಹೆಚ್ಎಎಸ್ 2010, ಬೆಂಗಳೂರು, ದಿನಾಂಕ: 4ನೇ ಮೇ 2010

ಶ್ರೀ ಬಸವರಾಜ ಫಕೀರಪ್ಪ ವಿಭೂತಿ 'ಶಶಿ', 3ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಕಲ್ಯಾಣನಗರ, ಧಾರವಾಡ ಇವರನ್ನು ಹುಬ್ಬಳ್ಳಿ-ಧಾರವಾಡ ಪಶ್ಚಿಮ ನಗರ ಆಶ್ರಯ ಸಮಿತಿಯ ಅಧ್ಯಕ್ಷರ ಹುದ್ದೆಗೆ ಮತ್ತು ಈ ಕೆಳಕಂಡವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಆಶ್ರಯ ಸಮಿತಿಯನ್ನು ಪುನರ್‌ರಚಿಸಲಾಗಿದೆ:

ಕ್ರ.ಸಂ.	ಅಭ್ಯರ್ಥಿಯ ಹೆಸರು	ವರ್ಗ
1	ಶ್ರೀಮತಿ ಗೀತಾ ಗೌಡಪ್ಪ ಪಾಟೀಲ್, 2ನೇ ಅಡ್ಡರಸ್ತೆ, ಹನಮಂತದೇವರ ಗುಡಿ ಹತ್ತಿರ, ಲಕ್ಷ್ಮೀಸಿಂಗನಕೆರೆ, ಸಾರಸ್ವತಪುರ, ಧಾರವಾಡ.	ಪ.ಜಾತಿ/ಪ.ವರ್ಗ (ಮಹಿಳೆ)
2	ಶ್ರೀ ಮಹದೇವಪ್ಪ ಕಲ್ಲಪ್ಪ ಹೊಸಮನಿ, ಗೋಕುಲ ಬಸ್ ನಿಲ್ದಾಣದ ಹತ್ತಿರ, ಹುಬ್ಬಳ್ಳಿ	ಹಿಂದುಳಿದ ವರ್ಗ
3	ಶ್ರೀ ಲಲಿತ್ ಮೋಹನ್ ಬಂಡಾರಿ, 'ಮೋಹನ ಸ್ಮೃತಿ', ಲಕ್ಷ್ಮೀನಾರಾಯಣ ಗುಡಿ ರಸ್ತೆ, ರವಿವಾರಪೇಟೆ, ಧಾರವಾಡ.	ಅಲ್ಪಸಂಖ್ಯಾತರು
4	ಶ್ರೀ ಎಂ. ಬಸವಣ್ಣ, ಮನೆ ನಂ. 361, ಆಶ್ರಯ ಕಾಲನಿ, ಸತ್ತೂರ, ತಾ. ಧಾರಾವಾಡ	ಸಾಮಾನ್ಯ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ.ಆರ್. 1212 (ಕೆ.ಆರ್. ವಲ್ಲೂರ)
ಪೀಠಾಧಿಕಾರಿ-2, ವಸತಿ ಇಲಾಖೆ.

ವಸತಿ ಸಚಿವಾಲಯ

ವಿಷಯ : ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ : 10 ಸರ್ಕಾರದ ಆದೇಶ ಸಂ. ವಇ 16 ಹೆಚ್‌ಎಹೆಚ್ 2010 ದಿನಾಂಕ 12.3.2010

2) ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂ. ಮುಮಕಾ / 2040 / 2010 ದಿನಾಂಕ 8.4.2010.

3) ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂ. ಮುಮಕಾ / 2313 / 2010 ದಿನಾಂಕ 22.4.2010.

4) ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂ. ಮುಮಕಾ / 2318 / 2010 ದಿನಾಂಕ 22.4.2010.

ಪ್ರಸ್ತಾವನೆ :

ಕಳೆದ ವರ್ಷ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸುರಿದ ಭಾರಿ ಮಳೆ ಮತ್ತು ನೆರೆಹಾವಳಿಯಿಂದ ಮನೆಗಳನ್ನು ಕಳೆದುಕೊಂಡ ಎಲ್ಲ ಬಡ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಮುಖಾಂತರ ನಿರ್ಮಿಸಲು ಆದೇಶಿಸಲಾಗಿದ್ದ 7,376 ಮನೆಗಳ ಪೈಕಿ ಮೇಲೆ (2)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಅಮರಗೋಳ ಗ್ರಾಮದಲ್ಲಿ ನಿರ್ಮಿಸಬೇಕಾದ ಮನೆಗಳ ಸಂಖ್ಯೆ 350 ಇದ್ದದ್ದನ್ನು 415 ಎಂದು ತಿದ್ದಿ ಓದಿಕೊಳ್ಳುವಂತೆ ಸೂಚಿಸಲಾಗಿದೆ. ಮೇಲೆ (3)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಮೆ. ಹೋಪ್ ಫೌಂಡೇಶನ್ ಸಂಸ್ಥೆಯವರು ನಿರ್ಮಿಸಲು ಒಪ್ಪಿಕೊಂಡ ರಾಯಚೂರು ತಾಲ್ಲೂಕಿನ ಜಾಗೀರ್ ವೆಂಕಟಾಪುರ ಗ್ರಾಮದ 150 ಮನೆಗಳ ಪೈಕಿ 90 ಮನೆಗಳನ್ನು ನಿರ್ಮಾಣ ಮಾಡುವುದಾಗಿ ತಿಳಿಸಿರುವುದರಿಂದ, ಉಳಿದ 60 ಮನೆಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ನಿರ್ಮಿಸಲು ಮರುಹಂಚಿಕೆ ಮಾಡಲಾಗಿದೆ. ಮೇಲೆ (4)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಮೆ. ಜಿಂದಾಲ್ ಸ್ಟೀಲ್ ವರ್ಕ್ಸ್ ಸಂಸ್ಥೆಯವರು ನಿರ್ಮಿಸಲು ಒಪ್ಪಿಕೊಂಡ ರೋಣ ತಾಲ್ಲೂಕಿನ ವೈ ಎಸ್. ಹಡಗಲಿ ಗ್ರಾಮದ 599 ಮನೆಗಳು ಮತ್ತು ಮಾಳವಾಡ ಗ್ರಾಮದ 600 ಮನೆಗಳ ಪೈಕಿ, ವೈ.ಎಸ್. ಹಡಗಲಿ ಗ್ರಾಮದಲ್ಲಿ 140 ಮನೆಗಳನ್ನು ಮತ್ತು ಮಾಳವಾಡ ಗ್ರಾಮದಲ್ಲಿ 135 ಮನೆಗಳನ್ನು ನಿರ್ಮಿಸಲು ಇಚ್ಛಿಸಿದ್ದು, ಉಳಿದ ಮನೆಗಳ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಭರಿಸಲು ಸಿದ್ಧರಿರುವುದಾಗಿ ತಿಳಿಸಿರುವುದರಿಂದ, ಉಳಿದ ಒಟ್ಟು 924 ಮನೆಗಳನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ನಿರ್ಮಿಸಲು ಮರುಹಂಚಿಕೆ ಮಾಡಲಾಗಿದೆ. ಈ ಹೆಚ್ಚುವರಿ ಮನೆಗಳನ್ನು ಮರುಹಂಚಿಕೆ ಮಾಡುತ್ತ ಈ ಕೆಳಗಿನ ಆದೇಶವನ್ನು ಹೊರಡಿಸಲಾಗಿದೆ.

ಆದೇಶ ಸಂ. ವಇ 16 ಹೆಚ್‌ಎಹೆಚ್ 2010 (ಭಾ), ಬೆಂಗಳೂರು, ದಿನಾಂಕ 4ನೇ ಮೇ 2010

ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸುರಿದ ಭಾರಿ ಮಳೆ ಮತ್ತು ನೆರೆಹಾವಳಿಯ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮವು ಈಗ ನಿರ್ಮಿಸುತ್ತಿರುವ ಮನೆಗಳ ನಿರ್ಮಾಣದ ಷರತ್ತು ಮತ್ತು ನಿಬಂಧನೆಗಳ ಮೇರೆಗೆ ಈ ಕೆಳಗಿನಂತೆ ಹೆಚ್ಚುವರಿ ಮನೆಗಳ ನಿರ್ಮಾಣವನ್ನು ಕೈಗೊಳ್ಳಲು ಆದೇಶಿಸಲಾಗಿದೆ.

ಅ. ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಅಮರಗೋಳ ಗ್ರಾಮದಲ್ಲಿ ನಿರ್ಮಿಸಬೇಕಾದ ಮನೆಗಳ ಸಂಖ್ಯೆ 350 ಇದ್ದದ್ದನ್ನು 415 ಎಂದು ಬದಲಾಯಿಸಿ, 65 ಹೆಚ್ಚುವರಿ ಮನೆಗಳ ನಿರ್ಮಾಣ.

ಆ. ಮೆ. ಹೋಪ್ ಫೌಂಡೇಶನ್ ಸಂಸ್ಥೆಯವರು ನಿರ್ಮಿಸಲು ಒಪ್ಪಿಕೊಂಡ ರಾಯಚೂರು ತಾಲ್ಲೂಕಿನ ಜಾಗೀರ್ ವೆಂಕಟಾಪುರ ಗ್ರಾಮದ 150 ಮನೆಗಳ ಪೈಕಿ 90 ಮನೆಗಳನ್ನು ನಿರ್ಮಾಣ ಮಾಡುವುದಾಗಿ ತಿಳಿಸಿರುವುದರಿಂದ, ಉಳಿದ 60 ಹೆಚ್ಚುವರಿ ಮನೆಗಳ ನಿರ್ಮಾಣ/

ಇ. ಮೆ. ಜಿಂದಾಲ್ ಸ್ಟೀಲ್ ವರ್ಕ್ಸ್ ಸಂಸ್ಥೆಯವರು ನಿರ್ಮಿಸಲು ಒಪ್ಪಿಕೊಂಡ ರೋಣ ತಾಲ್ಲೂಕಿನ ವೈ.ಎಸ್.ಹಡಗಲಿ ಗ್ರಾಮದ 599 ಮನೆಗಳು ಮತ್ತು ಮಾಳವಾಡ ಗ್ರಾಮದ 600 ಮನೆಗಳ ಪೈಕಿ, ವೈ.ಎಸ್.ಹಡಗಲಿ ಗ್ರಾಮದಲ್ಲಿ 140 ಮನೆಗಳನ್ನು ಮತ್ತು ಮಾಳವಾಡ ಗ್ರಾಮದಲ್ಲಿ 135 ಮನೆಗಳನ್ನು ನಿರ್ಮಿಸಲು ಇಚ್ಛಿಸಿದ್ದು, ಉಳಿದ ಮನೆಗಳ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಭರಿಸಲು ಸಿದ್ಧರಿರುವುದಾಗಿ ತಿಳಿಸಿರುವುದರಿಂದ, ವೈ.ಎಸ್.ಹಡಗಲಿ ಗ್ರಾಮದಲ್ಲಿ 459 ಮನೆಗಳು ಮತ್ತು ಮಾಳವಾಡ ಗ್ರಾಮದಲ್ಲಿ 465 ಮನೆಗಳು ಹೀಗೆ ಉಳಿದ ಒಟ್ಟು 924 ಹೆಚ್ಚುವರಿ ಮನೆಗಳ ನಿರ್ಮಾಣ.

2. ಮೆ. ಜಿಂದಾಲ್ ಸ್ಟೀಲ್ ವರ್ಕ್ಸ್ ಸಂಸ್ಥೆಯವರು ಉಳಿದ ಮನೆಗಳ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಭರಿಸಲು ಸಿದ್ಧರಿರುವುದಾಗಿ ತಿಳಿಸಿರುವುದರಿಂದ, ಈ ಮನೆಗಳ ನಿರ್ಮಾಣದ ವೆಚ್ಚವನ್ನು ಆ ಸಂಸ್ಥೆಯಿಂದ ಮರುಪಾವತಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1213

ಕೆ.ಆರ್. ವಲ್ಲೂರ

ಪೀಠಾಧಿಕಾರಿ-2, ವಸತಿ ಇಲಾಖೆ

ಇಂಧನ ಸಚಿವಾಲಯ

ವಿಷಯ : ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ 2010-11 ರ ಹಣಕಾಸು ವರ್ಷದಲ್ಲಿ ಮೊದಲನೇ ಕಂತಿನ ಸಹಾಯಾನುದಾನ ಬಿಡುಗಡೆ ಕುರಿತು.

ಪ್ರಸ್ತಾವನೆ :

1. 2010-11 ನೇ ಸಾಲಿನ ಆಯವ್ಯಯ ಸವಿವರ ವೆಚ್ಚದ ಅಂದಾಜುಗಳ ಸಂಪುಟ-7 ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಸಹಾಯಾನುದಾನ ರೂಪದಲ್ಲಿ ರೂ. 213.00 ಲಕ್ಷಗಳ ಅವಕಾಶವನ್ನು ಕಲ್ಪಿಸಲಾಗಿದೆ. ಈ ಸಹಾಯಾನುದಾನವನ್ನು 4 ಕಂತುಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ.

2. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸಿಬ್ಬಂದಿ ಮತ್ತು ಸಾಮಾನ್ಯ ವೆಚ್ಚ ಸಲುವಾಗಿ 2010-11ನೇ ಸಾಲಿಗೆ ಮೊದಲನೇ ತ್ರೈಮಾಸಿಕ ಅವಧಿಗೆ ಸಹಾಯಾನುದಾನ ರೂ. 51,66,095/- ನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಎನ್ 19 ಪಿಎಸ್‌ಆರ್ 2010 ಬೆಂಗಳೂರು, ದಿನಾಂಕ 24ನೇ ಏಪ್ರಿಲ್ 2010

ಸರ್ಕಾರವು 2010-11 ನೇ ಹಣಕಾಸು ವರ್ಷದ ಮೊದಲನೇ ತ್ರೈಮಾಸಿಕ ಅವಧಿಗೆ "2801-80-101-1-07-101 (Grant-in-aid) (Non Plan) ರಲ್ಲಿ ಸಹಾಯಾನುದಾನ" ಲೆಕ್ಕ ಶೀರ್ಷಿಕೆಯಡಿ ಸಿಬ್ಬಂದಿ ಮತ್ತು ಸಾಮಾನ್ಯ ವೆಚ್ಚ ಸಲುವಾಗಿ ರೂ. 51,66,095/- (ಐವತ್ತೊಂದು ಲಕ್ಷದ ಅರವತ್ತಾರು ಸಾಪಿರದ ತೊಂಬತ್ತೈದು ರೂ.ಗಳು ಮಾತ್ರ) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಬಿಡುಗಡೆ ಮಾಡಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆಯ ಇವರ ಮೇಲು ರುಜುವನ್ನು "Payees Receipt" ನಲ್ಲಿ ಪಡೆದು ಹಣವನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 21 ಟಿಎಫ್‌ಪಿ 2006 ದಿನಾಂಕ 02-09-2006, ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ 16-05-2008 ಮತ್ತು ಎಫ್‌ಡಿ 1 ಟಿಎಫ್‌ಪಿ 2010 ದಿನಾಂಕ 20-04-2010 ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಪಿ.ಆರ್. 1214

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್. ಜಿ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ : 2010-11ನೇ ಸಾಲಿನಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ-2010ರ ಕಾರ್ಯಕ್ರಮಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ. ವಾಕೈ/52/ಅಂಅಸ(1)/2010, ಬೆಂಗಳೂರು ದಿನಾಂಕ 01.4.2010
2) ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ರವರ ಪತ್ರ ದಿನಾಂಕ 27-4-2010.

ಪ್ರಸ್ತಾವನೆ :

ಕರ್ನಾಟಕ ಸರ್ಕಾರ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ 2010 ರ ಕಾರ್ಯಕ್ರಮ ನಡೆಸಲು ಕರ್ನಾಟಕ ಉದ್ಯೋಗ ಮಿತ್ರ ಬೆಂಗಳೂರು ಇವರಿಗೆ ಲೆಕ್ಕ ಶೀರ್ಷಿಕೆ 2852-80-800-0-46 ರ ಮೂಲಭೂತ ಸೌಕರ್ಯ ಮತ್ತು ವಾಣಿಜ್ಯ ಉತ್ತೇಜನ ಯೋಜನೆಯಡಿ ಒಟ್ಟು ರೂ. 1000.00 ಲಕ್ಷಗಳ ಆಯವ್ಯಯವನ್ನು ಹಂಚಿಕೆ ಮಾಡಲಾಗಿದೆ.

ಏಪ್ರಿಲ್ 2010ರ ಮಾಹೆಯ ಮಾಸಿಕ ಕಾರ್ಯಕ್ರಮ ಅನುಷ್ಠಾನದ ಸಭೆಯ ತೀರ್ಮಾನದಂತೆ ರೂ. 300.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಉಲ್ಲೇಖ (2) ರನ್ವಯ ಆಯುಕ್ತರು, ಕೈಗಾರಿಕಾಭಿವೃದ್ಧಿ ಮತ್ತು ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಐ 104 ಎಸ್‌ಪಿಐ 2010, ಬೆಂಗಳೂರು, ದಿನಾಂಕ 4ನೇ ಮೇ 2010

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ 2010 ರ ಕಾರ್ಯಕ್ರಮಕ್ಕೆ ರೂ. 300.00 ಲಕ್ಷಗಳ ಅನುದಾನವನ್ನು 2010-2011 ರ ಆಯವ್ಯಯ ಲೆಕ್ಕ ಶೀರ್ಷಿಕೆ 2852-80-800-0-46 ರ ಅಡಿಯಲ್ಲಿ ಈಗ ಮಂಜೂರಾತಿ ನೀಡಿ ಬಿಡುಗಡೆ ಮಾಡಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು ರವರು ಸ್ವೀಕೃತಿಯ ರಶೀದಿಯ ಮೇಲೆ ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಇವರ ಮೇಲು

ರುಜುವನ್ನು ಪಡೆದು ಸದರಿ ಅನುದಾನವನ್ನು ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇವರಿಂದ ನಗದೀಕರಿಸಲು ಆದೇಶಿಸಲಾಗಿದೆ.

ಸದರಿ ಮೊತ್ತವನ್ನು 2010-11ನೇ ಸಾಲಿನ ಆಯವ್ಯಯದ ಮೂಲಭೂತ ಸೌಕರ್ಯ ಮತ್ತು ವಾಣಿಜ್ಯ ಉತ್ತೇಜನ ಯೋಜನೆಯ ಲೆಕ್ಕಶೀರ್ಷಿಕೆ 2852-80-800-0-46 ರಲ್ಲಿ ಭರಿಸುವುದು.

ಪಿ.ಆರ್. 1215

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಅಪರ್ಣ ಪಾವಟೆ
ಪೀಠಾಧಿಕಾರಿ (ತಾಂತ್ರಿಕ ಕೋಶ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಲೋಕೋಪಯೋಗಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಎ ಮತ್ತು ಬಿ ವೃಂದದ ಹುದ್ದೆಗಳಿಗೆ ಪದೋನ್ನತಿ ನೀಡಲು ಅಧಿಕಾರಿಗಳ ಸೂಕ್ತತೆಯನ್ನು ಪರಿಗಣಿಸುವುದಕ್ಕಾಗಿ ಇಲಾಖಾ ಪದೋನ್ನತಿ ಸಮಿತಿಗಳನ್ನು ರಚಿಸುವ ಬಗ್ಗೆ-ಆದೇಶ.

ಓದಲಾಗಿದೆ : 1) ದಿನಾಂಕ 9.10.1985ರ ಅಧಿಕೃತ ಜ್ಞಾಪನ ಸಂ. ಡಿಪಿಎಆರ್ 5 ಎಸ್‌ಆರ್‌ಸಿ 84.
2) ದಿನಾಂಕ 6.11.07ರ ಸರ್ಕಾರಿ ಆದೇಶ ಸಂ. ಲೋಇ 38 ಬನೌಸೇ 2007.

ಸರ್ಕಾರದ ಆದೇಶ ಸಂಖ್ಯೆ: ಲೋಇ 14 ಬನೌಸೇ 2010, ಬೆಂಗಳೂರು, ದಿನಾಂಕ 29ನೇ ಏಪ್ರಿಲ್ 2010

ಪ್ರಸ್ತಾವನೆ :

ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಎ ಮತ್ತು ಬಿ ವೃಂದದ ಹುದ್ದೆಗಳಿಗೆ ಪದೋನ್ನತಿ ನೀಡಲು ಅಧಿಕಾರಿಗಳ ಸೂಕ್ತತೆಯನ್ನು ಪರಿಗಣಿಸುವುದಕ್ಕಾಗಿ, ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 9.10.85ರ ಅಧಿಕೃತ ಜ್ಞಾಪನದನ್ವಯ, ಕ್ರಮ ಸಂಖ್ಯೆ (2)ರಲ್ಲಿ ದಿನಾಂಕ 6.11.07ರ ಸರ್ಕಾರಿ ಆದೇಶದಲ್ಲಿ ಇಲಾಖಾ ಪದೋನ್ನತಿ ಸಮಿತಿಗಳನ್ನು ರಚಿಸಲಾಗಿತ್ತು. ಸದರಿ ಆದೇಶವು ಅಸ್ಪಷ್ಟವಾಗಿದ್ದ ಪ್ರಯುಕ್ತ ಅದನ್ನು ರದ್ದುಪಡಿಸಿ, ಕೆಳಕಂಡಂತೆ ಇಲಾಖಾ ಪದೋನ್ನತಿ ಸಮಿತಿಗಳನ್ನು ರಚಿಸಿ ಆದೇಶ ಹೊರಡಿಸಲಾಗಿದೆ.

ಆದೇಶ

ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಅರ್ಹ ಅಧಿಕಾರಿ/ನೌಕರರುಗಳಿಗೆ ಪದೋನ್ನತಿ ನೀಡಲು ಅಧಿಕಾರಿ/ನೌಕರರ ಸೂಕ್ತತೆಯನ್ನು ಪರಿಗಣಿಸುವುದಕ್ಕಾಗಿ ಕೆಳಕಂಡಂತೆ ಇಲಾಖಾ ಪದೋನ್ನತಿ ಸಮಿತಿಗಳನ್ನು ರಚಿಸಲಾಗಿದೆ.

(1)ಕೆ.ಎ.ಎಸ್. ಎ-ವೃಂದದ ಹಿರಿಯ ವೇತನ ಶ್ರೇಣಿ ಮತ್ತು ಮೇಲ್ಪಟ್ಟ ಹುದ್ದೆಗಳ ತತ್ಸಮಾನ ವೇತನ ಶ್ರೇಣಿ ಹೊಂದಿರುವ ಎ-ವೃಂದದ ಹುದ್ದೆಗಳಿಗೆ ಪದೋನ್ನತಿ ನೀಡಲು:

1	ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ	ಅಧ್ಯಕ್ಷರು
2	ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯ,	ಸದಸ್ಯರು
3	ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಅವರಿಂದ ನಾಮ ನಿರ್ದೇಶನ ಮಾಡಲ್ಪಟ್ಟ ಉಪ ಕಾರ್ಯದರ್ಶಿ ಹುದ್ದೆಗೆ ಕಡಿಮೆ ಇಲ್ಲದ ಅಧಿಕಾರಿ	ಸದಸ್ಯರು

(2) ಬಿ ಮತ್ತು ಸಿ ವೃಂದದ ಅಧಿಕಾರಿಗಳಿಗೆ ಎ- ವೃಂದದ ಹುದ್ದೆಗಳಿಗೆ (ಕೆ.ಎ.ಎಸ್. ಎ-ವೃಂದದ ಹಿರಿಯ ವೇತನ ಶ್ರೇಣಿ ಮತ್ತು ಮೇಲ್ಪಟ್ಟ ಹುದ್ದೆಗಳ ತತ್ಸಮಾನ ವೇತನ ಶ್ರೇಣಿ ಹೊಂದಿರುವ ಹುದ್ದೆಗಳನ್ನು ಹೊರತುಪಡಿಸಿ) ಮತ್ತು ಸಿ ವೃಂದದ ನೌಕರರಿಗೆ ಬಿ ವೃಂದದ ಹುದ್ದೆಗಳಿಗೆ ಪದೋನ್ನತಿ ನೀಡಲು :

1	ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ	ಅಧ್ಯಕ್ಷರು
2	ನಿರ್ದೇಶಕರು, ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶನಾಲಯ	ಸದಸ್ಯರು
3	ಸರ್ಕಾರದ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಸೇವೆಗಳು), ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1216

ಜಿ. ಸಿದ್ದಗಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರುಗಳು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಸೇವೆಗಳು-ಸಿ)

ಒಳಾಡಳಿತ ಸಚಿವಾಲಯ

ವಿಷಯ: ಕರಾವಳಿ ಕಾವಲು ಘಟಕ, ಉಡುಪಿ ಇವರಿಗೆ ಕರ್ನಾಟಕ ರಾಜ್ಯಪತ್ರವನ್ನು ಒದಗಿಸುವ ಬಗ್ಗೆ.

ಓದಲಾಗಿದೆ : ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ರವರ ಪತ್ರ ಸಂಖ್ಯೆ: ದಾವಿ/4/2007-08, ದಿನಾಂಕ : 07-01-2009

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ, ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರು ಕಂಪೈಲರ್, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರು ಕರಾವಳಿ ಕಾವಲು ಘಟಕ, ಉಡುಪಿ ಕಛೇರಿ ಸ್ಥಾಪಿಸಲು ಮಂಜೂರಾತಿ ನೀಡಿರುವ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯಪತ್ರ ಸರಬರಾಜು ಮಾಡಲು ಆದೇಶವಿಲ್ಲದೆ ಇರುವುದರಿಂದ ಕರ್ನಾಟಕ ರಾಜ್ಯಪತ್ರ ಸರಬರಾಜು ಮಾಡಲು ಸರ್ಕಾರದಿಂದ ಮಂಜೂರಾತಿ ಪಡೆಯುವಂತೆ ತಿಳಿಸಿರುವ ಪ್ರಯುಕ್ತ ಈ ಕುರಿತು ಸರ್ಕಾರಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ ಹೆಚ್‌ಡಿ 289 ಪಿಓಪಿ 2009, ಬೆಂಗಳೂರು, ದಿನಾಂಕ 10-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಉಡುಪಿಯಲ್ಲಿರುವ ಕರಾವಳಿ ಕಾವಲು ಘಟಕಕ್ಕೆ ಕರ್ನಾಟಕ ರಾಜ್ಯ ಪತ್ರವನ್ನು ಸರಬರಾಜು ಮಾಡಲು ಈ ಮೂಲಕ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ಆದೇಶವನ್ನು ಶಿಕ್ಷಣ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಇಡಿ 2386 2009, ದಿನಾಂಕ: 26/04/2010 ರಲ್ಲಿ ನೀಡಿದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಎಂ. ಲಕ್ಷ್ಮೀನಾರಾಯಣ
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

ಪಿ.ಆರ್. 1231

ಜಲಸಂಪನ್ಮೂಲ ಸಚಿವಾಲಯ

ವಿಷಯ: ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕಿನ ಘಟಪ್ರಭಾ ನೀರಾವರಿ ಮತ್ತು ವ್ಯವಸಾಯ ಅಭಿವೃದ್ಧಿ ಸಂಘ (ಜೀರಗಾಳ) ಇವರಿಂದ ನಿರ್ಮಿಸಲ್ಪಟ್ಟ ಬ್ಯಾರೇಜಿನ ನಿರ್ವಹಣೆ ಕಾರ್ಯವನ್ನು ಸರ್ಕಾರಕ್ಕೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ 25-03-2010 ರಂದು ಕೊನೆಗೊಂಡ ಪತ್ರ ಸಂಖ್ಯೆ: ಮುಇಂ/ಸನೀ (ಉ)ವ/ ಬಿಜಾ/ ಸ. ಇಂ-6/2009-10/2039.

ಪ್ರಸ್ತಾವನೆ :

ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕು, ಘಟಪ್ರಭಾ ನೀರಾವರಿ ಮತ್ತು ವ್ಯವಸಾಯ ಅಭಿವೃದ್ಧಿ ಸಂಘ (ಜೀರಗಾಳ) ಇವರು ಜೀರಗಾಳ ಬಳಿ ಘಟಪ್ರಭಾ ನದಿಗೆ ಅಡ್ಡಲಾಗಿ ಬ್ಯಾರೇಜನ್ನು ನಿರ್ಮಿಸಿದ್ದು, ಸದರಿ ಬ್ಯಾರೇಜಿನ ನಿರ್ವಹಣೆಯನ್ನು ಆ ಸಂಸ್ಥೆಯೇ ನಿರ್ವಹಿಸುತ್ತಾ ಬಂದಿದ್ದು, ಪ್ರಸ್ತುತ ನಿರ್ವಹಣಾ ಕಾರ್ಯವನ್ನು ಸಂಸ್ಥೆಯಿಂದ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ಇದಕ್ಕೆ ಕಾರಣ ರೈತರು ತಮ್ಮ ತಮ್ಮ ಚಟುವಟಿಕೆಗಳಲ್ಲಿ ತೊಡಗಿ ಸಂಸ್ಥೆಯ ಕಾರ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ ಕಡಿಮೆಯಾಗಿರುವುದರಿಂದ ಬ್ಯಾರೇಜಿನ ನಿರ್ವಹಣಾ ಕಾರ್ಯವನ್ನು ನಿಭಾಯಿಸಲು ಆಗುತ್ತಿಲ್ಲವೆಂದು ಬ್ಯಾರೇಜಿನ ನಿರ್ವಹಣೆಯನ್ನು ಸರ್ಕಾರಕ್ಕೆ ವಹಿಸಲು ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಿರುವುದಾಗಿ ತಿಳಿಸಿ, ನಿರ್ವಹಣೆಯನ್ನು ಸರ್ಕಾರಕ್ಕೆ ವಹಿಸಿಕೊಳ್ಳಲು ಸಂಸ್ಥೆಯ ಅಧ್ಯಕ್ಷರು ಮನವಿ ಸಲ್ಲಿಸಿದ್ದಾರೆ.

ಈ ಬ್ಯಾರೇಜನ್ನು ನಿರ್ವಹಣೆಗಾಗಿ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಿಕೊಳ್ಳಬಹುದೆಂದು ಮೇಲೆ ಓದಲಾದ ದಿನಾಂಕ: 25-03-2010ರ ಪತ್ರದಲ್ಲಿ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರು ಅಭಿಪ್ರಾಯ ನೀಡಿರುತ್ತಾರೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಸನೀಇ 12 ಆಪಿಬಿಂ 2009, ಬೆಂಗಳೂರು, ದಿನಾಂಕ 11ನೇ ಮೇ 2010

ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕು, ಘಟಪ್ರಭಾ ನೀರಾವರಿ ಮತ್ತು ವ್ಯವಸಾಯ ಅಭಿವೃದ್ಧಿ ಸಂಘ (ಜೀರಗಾಳ) ಇವರು ಮುಧೋಳ ತಾಲ್ಲೂಕಿನ ಜೀರಗಾಳ ಬಳಿ ಘಟಪ್ರಭಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಬ್ಯಾರೇಜನ್ನು ನಿರ್ವಹಣೆಗಾಗಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ವರ್ಗಾಯಿಸಿಕೊಳ್ಳಲು ಸರ್ಕಾರವು ಅನುಮೋದನೆ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಕೆ. ಸುಧಾಕರ ಶೆಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 1232

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಎಸ್.ಪಿ. ಅಣ್ಣೇಗೌಡ, ಜಂಟಿ ಅಭಿಯೋಗ ನಿರ್ದೇಶಕರು (ಆಡಳಿತ) ಇವರ ಸ್ಥಾನಪನ್ನ ಅವಧಿಯನ್ನು ಘೋಷಿಸುವ ಕುರಿತು.

ಓದಲಾಗಿದೆ : 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 369 ಪಿಪಿಇ 2007, ದಿನಾಂಕ : 22-07-2008.
2) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂಖ್ಯೆ: ಡಿಪಿಎನ್/ಸಿ.ಶಾ. 1/111/2009-10, ದಿನಾಂಕ 18-07-2009

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ: 22-07-2008ರ ಅಧಿಸೂಚನೆಯಲ್ಲಿ ಶ್ರೀ ಎಸ್.ಪಿ. ಅಣ್ಣೇಗೌಡ, ಅಭಿಯೋಗ ಉಪನಿರ್ದೇಶಕರು ಇವರಿಗೆ ಜಂಟಿ ಅಭಿಯೋಗ ನಿರ್ದೇಶಕರ ಹುದ್ದೆಗೆ ಸ್ಥಾನಪನ್ನ ಅವಧಿ ಮೇಲೆ ಮುಂಬಡ್ತಿ ನೀಡಲಾಗಿತ್ತು.

ಮೇಲೆ (2) ರಲ್ಲಿ ಓದಲಾದ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರು ದಿನಾಂಕ: 18-07-2009ರ ಪತ್ರದಲ್ಲಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಶ್ರೀ ಎಸ್.ಪಿ. ಅಣ್ಣೇಗೌಡ, ಜಂಟಿ ಅಭಿಯೋಗ ನಿರ್ದೇಶಕರ ಸ್ಥಾನಪನ್ನ ಅವಧಿಯನ್ನು ಘೋಷಿಸಬೇಕಾಗಿದ್ದು ಸ್ಥಾನಪನ್ನ ಅವಧಿಯಲ್ಲಿ ಅವರಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಣಾ ವರದಿಗಳಲ್ಲಿ ಯಾವುದೇ ಪ್ರತಿಕೂಲ ಷರಾ ಇಲ್ಲದೇ ಇದ್ದು, ಇವರ ಸೇವೆಯು ಸದರಿ ಅವಧಿಯಲ್ಲಿ ತೃಪ್ತಿಕರವಾಗಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 19(3)(ಸಿ) ಪ್ರಕಾರ ಸದರಿ ಅಧಿಕಾರಿಯ ಸ್ಥಾನಪನ್ನ ಅವಧಿ ತೃಪ್ತಿಕರವೆಂದು ಘೋಷಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಆದುದರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಒಇ 358 ಪಿಪಿಇ 2009, ಬೆಂಗಳೂರು, ದಿನಾಂಕ 12ನೇ ಮೇ2010

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 19(3)(ಸಿ) ರ ಪ್ರಕಾರ ಶ್ರೀ ಎಸ್.ಪಿ ಅಣ್ಣೇಗೌಡ, ಜಂಟಿ ಅಭಿಯೋಗ ನಿರ್ದೇಶಕರವರ ಸ್ಥಾನಪನ್ನ ಅವಧಿಯನ್ನು ದಿನಾಂಕ: 30-06-2009 ರಿಂದ ತೃಪ್ತಿಕರವಾಗಿ ಪೂರೈಸಿದ್ದಾರೆ ಎಂದು ಘೋಷಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಕೆ.ಸಿ. ಸಿದ್ದಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ
(ಕಾನೂನು ಮತ್ತು ಸುವ್ಯವಸ್ಥೆ, ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 1233

COMMERCE AND INDUSTRIES SECRETARIAT

CORRIGENDUM

N0. CI/72/SPI/2010, Bangalore, dated 10-05-2010

Sub :- Approval for land acquisition through KIADB in favour of M/s Anjani Portland Cement Ltd., to establish a " Portland Cement Plant".

Ref :- 1) Govt. Order No. CI 72 SPI 2010 dated 25-02-2010.

2) Proceedings of the 21st State High Level Clearance Committee (SHLCC) Meeting held on 29-03-2010.

In the Govt. Order No. CI 72 SPI 2010 dated 25-02-2010 the name of the company should be read as M/s Anjani Cement (Karnataka) Ltd.," in place of M/s Anjani Portland Cement Ltd., and in the same Govt. order, "acquisition and allotment of required balance land" should be read as "acquisition and allotment of required balance land of 634 acres".

By Order and in the name of the Governor of Karnataka

P.R. 1234

(Aparna Pavate)
Desk Officer (Technical Cell)
Commerce & Industries Department

COMMERCE AND INDUSTRIES SECRETARIAT

Sub :- The Project Proposal of M/s Lafarge India Pvt. Ltd., to setup "3 Million MTPA Cement Plant and 43 MW Coal Based Thermal Power Plant", at Ravoor, Gandhinagar, and Vadi Villages of Chittapur Taluk, Gulbarga District.

Read :-1) Govt. Order No. CI 29 SPI 2010 dated : 15.02.2010.

2) Company's Letter dated : 23-04-2010.

Preamble:

The proposal of M/s Lafarge India Pvt. Ltd., to establish " 3 Million MTPA Cement Plant and 43 MW Coal Based Thermal Power Plant", at Ravoor, Gandhinagar, and Vadi Villages of Chittapur Taluk, Gulbarga District" was approved in the 20th SHLCC meeting held on 05-01-2010 and accordingly the Govt. Order read at (1) above was issued.

The company vide letter at (2) above, have requested to amend the clause pertaining to land under Infrastructure facilities, as the company is already in possession of mining lease through ML No. 2588 for 1968 acres.

Hence the following Order.

Government Order No. CI 29 SPI 2010, Bangalore, dated : 7th May 2010

The Clause 1 of the Govt. Order read at (1) above namely-

"1. Land 601 acres 5 guntas for plant area and the required land for mining area – U/s 109 of KLR Act and conversion of the same to industrial use.

The land requirement for limestone mining area will be decided by the Government depending on ore quality."

Shall be read as

" 1. Land: Permission to purchase 601 acres 5 guntas of land for plant and 1968 acres of land for mining purpose (as per mining lease No. 2588) U/s 109 of KLR Act and to convert the plant area for Industrial use."

By Order and in the name of the Governor of Karnataka

P.R. 1235

(Aparna Pavate)
Desk Officer (Technical Cell)
Commerce and Industries Department

ಇಂಧನ ಸಚಿವಾಲಯ

ವಿಷಯ : M/s Western Ghats Hydro Ventures Private Limited ಇವರಿಗೆ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ : ಕೆಆರ್‌ಇಡಿ/06/ಗೌರಿಹಳ್ಳಿ ಎಂಹೆಚ್‌ಎಸ್/09/1236 ದಿನಾಂಕ 11/12-03-2009 ಸಂಖ್ಯೆ : ಕೆಆರ್‌ಇಡಿ/06/ಗೌರಿಹಳ್ಳಿ/2009/3077 ದಿನಾಂಕ: 14/19-9-2009 ಮತ್ತು ಸಂಖ್ಯೆ : ಕೆಆರ್‌ಇಡಿ/06/ಗೌರಿಹಳ್ಳಿ ಕಿ.ಜ.ವಿ./2010/671, ದಿನಾಂಕ : 01/6-03-2010.

2. ದಿನಾಂಕ : 26-03-2010 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Western Ghats Hydro Ventures Private Limited ಇವರಿಗೆ ಚಿಕ್ಕಮಗಳೂರು ಜಿಲ್ಲೆಯ, ಚಿಕ್ಕಮಗಳೂರು ತಾಲ್ಲೂಕಿನ ಕಾಮೇನಹಳ್ಳಿ ಮತ್ತು ಅಮ್ಮನಾಳ್ ಗ್ರಾಮಗಳ ಗೌರಿಹಳ್ಳಿ ತೊರೆಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಡವಳಿಯ ಪ್ರಕಾರ ದಿನಾಂಕ 26-03-2010ರಂದು ಜರುಗಿದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s Western Ghats Hydro Ventures Private Limited ಇವರಿಗೆ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 267 ಎನ್‌ಸಿಇ 2009, ಬೆಂಗಳೂರು, ದಿನಾಂಕ: 10-05- 2010

M/s Western Ghats Hydro Ventures Private Limited ಇವರಿಗೆ ಚಿಕ್ಕಮಗಳೂರು ಜಿಲ್ಲೆಯ, ಚಿಕ್ಕಮಗಳೂರು ತಾಲ್ಲೂಕಿನ ಕಾಮೇನಹಳ್ಳಿ ಮತ್ತು ಅಮ್ಮನಾಳ್ ಗ್ರಾಮಗಳ ಗೌರಿಹಳ್ಳಿ ತೊರೆಗೆ ಅಡ್ಡಲಾಗಿ 4.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು (Weir **Latitude** : $13^0$26'00" **Longitude** : $75^0$49'30" Power House-**Latitude** : $13^0$27'45" **Longitude** : $75^0$52'00") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ :-

1(ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ) ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ) ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.
4. ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.
5. ಮೇಲೆ ತಿಳಿಸಿದ 2,3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನು ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.
6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ ಮತ್ತು ಯೋಜನೆಯ ವ್ಯಾಪ್ತಿಯಲ್ಲಿರುವ ವಿದ್ಯುತ್ ಸರಬರಾಜು ಕಂಪನಿಗಳೊಂದಿಗೆ ಪಿ.ಪಿ.ಎ. ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.
7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.
8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರೂ ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.
9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.
10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.
11. ಸದರಿ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡೆಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಜಿ. ಸಂಪತ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. 1242

ಶಿಕ್ಷಣ ಸಚಿವಾಲಯ

ವಿಷಯ : ವೃತ್ತಿ ಶಿಕ್ಷಣ ಪರೀಕ್ಷಾ ಸಂಭಾವನೆ ಪರಿಷ್ಕರಣೆ ಬಗ್ಗೆ.

ಓದಲಾಗಿದೆ : 1) ದಿನಾಂಕ 21-12-2004ರ ಸರ್ಕಾರದ ಆದೇಶ ಸಂಖ್ಯೆ : ಇಡಿ 27 ಟಿವಿಇ 2004 (2)

2) ದಿನಾಂಕ 11-05-2009ರ ವೃತ್ತಿ ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ : ಡಿವಿಇ/ ಪವಿ1/ ಪರಿಷ್ಕರಣೆ/ಸಂ:33/08-09,

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ವೃತ್ತಿ ಶಿಕ್ಷಣ ಪರೀಕ್ಷೆಗಳ ಸಂಭಾವನೆಯನ್ನು ಅದರಲ್ಲಿ ನಮೂದಿಸಿದ ಷರತ್ತಿಗೊಳಪಟ್ಟು ಪರಿಷ್ಕರಿಸಲಾಗಿತ್ತು.

ಮೇಲೆ ಓದಲಾದ (2)ರ ಪತ್ರದಲ್ಲಿ, ನಿರ್ದೇಶಕರು, ವೃತ್ತಿ ಶಿಕ್ಷಣ ಇವರು, ವೃತ್ತಿ ಶಿಕ್ಷಣ ಕೋರ್ಸುಗಳಲ್ಲಿ ನಡೆಸಲಾಗುವ ಪರೀಕ್ಷೆಗಳಿಗೆ ಪರೀಕ್ಷಾ ಭತ್ಯೆ ಮತ್ತು ಸಂಭಾವನೆಗಳನ್ನು 2004ರಲ್ಲಿ ಪರಿಷ್ಕರಣೆಗೊಳಿಸಲಾಗಿದೆಯೆಂದು, ಇಲಾಖೆಯ ಮೌಲ್ಯಮಾಪಕರು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಪರೀಕ್ಷಾ ಭತ್ಯೆ ಮತ್ತು ಸಂಭಾವನೆಯನ್ನು ಪದವಿ ಪೂರ್ವ ಶಿಕ್ಷಣದ ಪರೀಕ್ಷೆಗಳಿಗೆ ನೀಡುವ ಭತ್ಯೆ ಮತ್ತು ಸಂಭಾವನೆ ದರದಲ್ಲಿ ಪಾವತಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 62 ಟವಿಇ 2009, ಬೆಂಗಳೂರು, ದಿನಾಂಕ: 5ನೇ ಮೇ 2010

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ವೃತ್ತಿ ಶಿಕ್ಷಣ ಪರೀಕ್ಷೆಗಳ, ಪರೀಕ್ಷಾ ಸಂಭಾವನೆಯನ್ನು ಕೆಳಕಂಡ ಷರತ್ತಿಗೊಳಪಟ್ಟು ಪ್ರಸ್ತುತ ಜಾರಿಯಲ್ಲಿರುವ ಅಂದರೆ, ದಿನಾಂಕ 21-12-2004ರ ಆದೇಶದಲ್ಲಿ ನಿಗದಿಪಡಿಸಲಾದ ಸಂಭಾವನೆ ದರಗಳಿಗೆ ಶೇಕಡ 10 ರಷ್ಟು ಹೆಚ್ಚಿಸಿ ಪರಿಷ್ಕರಿಸಿ ಆದೇಶಿಸಿದೆ.

ಷರತ್ತುಗಳು :

1. No. new category of officials to be added as specified in the Government Order dated 21-12-2004
2. No additionality, no review, or revision to be sought for the next 5 years
3. The additional burden on account of above revision shall be met within the overall allocation of the department.

ಈ ಆದೇಶವನ್ನು ದಿನಾಂಕ 29-04-2010ರ ಟಿಪ್ಪಣಿ ಸಂಖ್ಯೆ : ಆಇ 1962 ವೆಚ್ಚ 8 2009ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ಎನ್. ಸೋಮಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ

ಪಿ.ಆರ್. 1243

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ವಿಷಯ : ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನಾ ವಿಭಾಗ ಹಾಗೂ ಯೋಜನಾ ಉಪ ವಿಭಾಗ ಕಚೇರಿಗಳ ಮತ್ತು ಅಧಿಕಾರಿ/ಸಿಬ್ಬಂದಿ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ – ಆದೇಶ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 77 ಜಿಪಅ 2008, ದಿನಾಂಕ 4-9-2008

2) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ದಿನಾಂಕ: 13-04-2010ರ ಪತ್ರ ಸಂಖ್ಯೆ:ಮುಇಂ/ಪಂರಾಇಂಇ/ಸಿ-5/2009-10.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 4-9-2008ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ವತಿಯಿಂದ ಕರ್ನಾಟಕ ರಾಜ್ಯದಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ವ್ಯವಸ್ಥಿತವಾಗಿ ಹಾಗೂ ಪರಿಣಾಮಕಾರಿಯಾಗಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವ ಉದ್ದೇಶದಿಂದ ದಿನಾಂಕ 01-09-2008 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಸೀಮಿತಗೊಳಿಸಿ 19 ಯೋಜನಾ ಅನುಷ್ಠಾನ ಘಟಕಗಳನ್ನು (Project Implementation Units) ಅಂದರೆ ವಿಭಾಗೀಯ ಕಚೇರಿಗಳನ್ನು ತೆರೆಯಲು ಹಾಗೂ ಆಗ ಅಸ್ತಿತ್ವದಲ್ಲಿದ್ದ 26 ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ಉಪ ವಿಭಾಗಗಳ ಜೊತೆಗೆ 6 ಯೋಜನಾ ಉಪ ವಿಭಾಗಗಳನ್ನು ತೆರೆಯಲು ಸರ್ಕಾರದ ಮಂಜೂರಾತಿ ನೀಡಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ದಿನಾಂಕ 13-04-2010ರ ಪತ್ರದ ಮೂಲಕ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಪ್ರಸ್ತಾಪನೆ ಸಲ್ಲಿಸಿ, ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 77 ಜಿಪಅ 2008, ದಿನಾಂಕ 4-9-2008ರಲ್ಲಿ ಮಂಜೂರಾತಿ ನೀಡಿರುವ 19 ಯೋಜನಾ ವಿಭಾಗಗಳ ಕಚೇರಿಗಳನ್ನು ಹಾಗೂ 32 ಯೋಜನಾ ಉಪ ವಿಭಾಗಗಳ ಕಚೇರಿಗಳನ್ನು ಮತ್ತು ಸದರಿ ಕಚೇರಿಗಳಿಗೆ ಮಂಜೂರಾತಿ ನೀಡಿರುವ ವಿವಿಧ ವೃಂದಗಳ ಅಧಿಕಾರಿ / ಸಿಬ್ಬಂದಿಗಳ ಹುದ್ದೆಗಳನ್ನು ಮತ್ತೆ ದಿನಾಂಕ 1-9-2009 ರಿಂದ 30-08-2012ರವರೆಗೆ ಮುಂದುವರೆಸುವುದು ಅಗತ್ಯವಿದೆಯೆಂದು ಪ್ರಸ್ತಾಪಿಸಿ, ಅದರಂತೆ ಮುಂದುವರೆಸಿ ಸರ್ಕಾರದ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 100 ಜಿಪಅ 2010, ಬೆಂಗಳೂರು, ದಿನಾಂಕ: 7ನೇ ಮೇ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಿನಾಂಕ 4-9-2008ರ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾದ 19 ಯೋಜನಾ ವಿಭಾಗಗಳ ಕಚೇರಿಗಳನ್ನು ಹಾಗೂ 32 ಯೋಜನಾ ಉಪ ವಿಭಾಗಗಳ ಕಚೇರಿಗಳನ್ನು ಮತ್ತು ಸದರಿ ಕಚೇರಿಗಳಿಗೆ ಮಂಜೂರು ಮಾಡಿರುವ ವಿವಿಧ ವೃಂದಗಳ ಅಧಿಕಾರಿ/ಸಿಬ್ಬಂದಿಗಳ ಹುದ್ದೆಗಳನ್ನು ಮತ್ತೆ ದಿನಾಂಕ 1-9-2009ರಿಂದ ಒಂದು ವರ್ಷದ ಅವಧಿಗೆ ಮಾತ್ರ ಮುಂದುವರೆಸಿ ಆದೇಶಿಸಿದೆ.

ಈ ಆದೇಶವನ್ನು ಸರ್ಕಾರಿ ಅದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಸಿ 96, ದಿನಾಂಕ 10-07-1996ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಶಂಭುಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ), (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಪಿ.ಆರ್. 1244

ಕಂದಾಯ ಸಚಿವಾಲಯ

ವಿಷಯ : ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ತಹಶೀಲ್ದಾರ್ ಇವರು ಕೆ.ಸಿ.ಎಸ್.ಆರ್.(ಸಿಸಿಎ) ನಿಯಮಾವಳಿಗಳು 1957ರ ನಿಯಮ 18ರಡಿ ಗೌರವಾನ್ವಿತ ರಾಜ್ಯಪಾಲರಿಗೆ ಸಲ್ಲಿಸಿರುವ ಮೇಲ್ಮನವಿ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 64 ಎಡಿಇ 2000, ದಿನಾಂಕ : 11-03-2005.
2. ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ತಹಶೀಲ್ದಾರ್ ಇವರು ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಿರುವ ಮೇಲ್ಮನವಿ ದಿನಾಂಕ : 13-02-2006.

ಪ್ರಸ್ತಾವನೆ:

ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ಹಿಂದಿನ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಪ್ರಸ್ತುತ ವಿಶೇಷ ತಹಶೀಲ್ದಾರ್, ಬಿ.ಎಂ.ಟಿ.ಎಫ್. ಬೆಂಗಳೂರು ಇವರು ಕೆ.ಸಿ.ಎಸ್.(ಸಿಸಿಎ) ನಿಯಮಾವಳಿಗಳು 1957ರ ನಿಯಮ 18(2)(ಬಿ) ರಡಿಯಲ್ಲಿ ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 64 ಎಡಿಇ 2000, ದಿನಾಂಕ : 11-03-2005ರ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತಾರೆ. ಮೇಲ್ಮನವಿ ಪ್ರಕರಣದ ವಿವರಗಳು ಈ ಕೆಳಕಂಡಂತೆ ಇದೆ.

ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ಹಿಂದೆ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ, ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಕರ್ತವ್ಯ ಲೋಪ ದುರ್ನಡತೆ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಈ ಕೆಳಕಂಡ ಆರೋಪಗಳನ್ನು ಮಾಡಲಾಗಿದೆ.

ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ಹಿಂದಿನ ವಿಶೇಷ ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು ಕಛೇರಿ, (ಪ್ರಸ್ತುತ ತಹಶೀಲ್ದಾರ್, ಬಿ.ಎಂ.ಟಿ.ಎಫ್., ಬೆಂಗಳೂರು) ಇವರು ಸದರಿ ತಾಲ್ಲೂಕಿನ ಸಿಂಗನಾಯಕನಹಳ್ಳಿ ಗ್ರಾಮದ ಸ.ನಂ. 111ರಲ್ಲಿ ಒಟ್ಟು 76 ಎಕರೆ ಸರ್ಕಾರಿ ಮುಫತ್ ಜಮೀನಿದ್ದು, ಸದರಿ ಜಮೀನಿನಲ್ಲಿ 10 ಎಕರೆ ಜಮೀನನ್ನು ಶ್ರೀ ಎ. ರಾಮಯ್ಯ ಎನ್ನುವರು ಸೃಷ್ಟಿತ ದಾಖಲೆಗಳ ಆಧಾರದ ಮೇಲೆ ಕ್ರಯ ಪತ್ರ ಸಂ : 1969/96-97, ದಿನಾಂಕ : 01-08-96ರಂದು ಶ್ರೀ ಸಿ.ಆರ್. ಗೋವಿಂದ ರೆಡ್ಡಿ ಬಿನ್ ಸಿ. ನಾರಾಯಣ ರೆಡ್ಡಿ ಎಂಬುವವರಿಗೆ 5 ಎಕರೆ ಮತ್ತು ಕ್ರಯ ಪತ್ರ ಸಂ : 1970/96-97 ದಿನಾಂಕ : 01-08-96ರಂದು ಶ್ರೀ ಸಿ.ಆರ್. ಗೋವಿಂದ ರೆಡ್ಡಿಯವರಿಗೆ 5 ಎಕರೆ ಜಮೀನನ್ನು ಮಾರಾಟ ಮಾಡಿದ್ದು, ಈ ರೀತಿ ಸೃಷ್ಟಿತ ದಾಖಲೆಗಳ ಆಧಾರದ ಮೇಲೆ ನೋಂದಣಿಯಾದ ಜಮೀನನ್ನು ಕ್ರಮವಾಗಿ ಎಂ.ಆರ್. 38/95-96 ಮತ್ತು ಎಂ.ಆರ್.-39/95-96 ರಂತೆ, ಶ್ರೀ ಸಿ.ಆರ್. ಗೋವಿಂದ ರೆಡ್ಡಿ ಇವರ ಹೆಸರಿಗೆ ಖಾತೆ ಮಾಡಲು ಶಿಫಾರಸ್ಸು ಮಾಡಿ ಸರ್ಕಾರದ ಜಮೀನನ್ನು ಖಾಸಗಿ ವ್ಯಕ್ತಿಗಳ ಹೆಸರಿಗೆ ವರ್ಗಾಯಿಸಲು ಕಾರಣರಾಗಿದ್ದಾರೆಂಬ ಆರೋಪದ ಮೇಲೆ ಇತರರೊಂದಿಗೆ ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ ಇವರು ಕರ್ತವ್ಯ ಲೋಪ ಎಸಗಿರುವರೆಂದು ಆರೋಪಿಸಲಾಗಿತ್ತು.

ಅದರಂತೆ, ಸರ್ಕಾರದ ಆದೇಶ ಸಂ : ಆರ್‌ಡಿ 64 ಎಡಿಇ 2000, ದಿನಾಂಕ : 13-09-2002ರ ಆದೇಶದಲ್ಲಿ ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ಇವರ ಮೇಲೆ ಇಲಾಖಾ ವಿಚಾರಣೆ ನಡೆಸಲು ಶ್ರೀ ಎನ್.ಎಸ್.ಸಂಗೊಳ್ಳಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ವಿಚಾರಣಾ ವರದಿಯಲ್ಲಿ ಆರೋಪಿತರ ವಿರುದ್ಧ ಆರೋಪಗಳು ಸಾಬೀತಾಗಿರುತ್ತದೆ ಎಂದು ವಿಚಾರಣಾಧಿಕಾರಿಗಳು ವರದಿ

ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯನ್ನು ಪರಿಶೀಲಿಸಿ ಆರೋಪಿತರು ಕರ್ತವ್ಯ ಚ್ಯುತಿ ಎಸಗಿರುವುದು ಸಾಬೀತಾಗಿರುವ ಹಿನ್ನೆಲೆಯಲ್ಲಿ ಇವರಿಗೆ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ರಹಿತವಾಗಿ ತಡೆಹಿಯುವ ದಂಡನೆಯನ್ನು ವಿಧಿಸಿ ಮೇಲೆ ಕ್ರ.ಸಂ.(1)ರಲ್ಲಿ ಓದಲಾದ ದಿನಾಂಕ : 11-03-2005ರ ಆದೇಶದಲ್ಲಿ ಆದೇಶಿಸಲಾಗಿತ್ತು.

ಸರ್ಕಾರದ ಆದೇಶದ ವಿರುದ್ಧ ಆರೋಪಿತ ಅಧಿಕಾರಿ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಗಳು 1957ರ ನಿಯಮ 18ರಡಿಯಲ್ಲಿ ಗೌರವಾನ್ವಿತ ರಾಜ್ಯಪಾಲರಿಗೆ ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ದಿನಾಂಕ : 21-04-2005ರಂದು ಮೇಲ್ಮನವಿ ಸಲ್ಲಿಸಿ, ಸರ್ಕಾರವು ಅವರಿಗೆ ವಿಧಿಸಿರುವ ದಂಡನಾದೇಶವನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ. ಸದರಿ ಮೇಲ್ಮನವಿಯನ್ನು ಪರಿಶೀಲಿಸಲು ಘನತೆವೆತ್ತ ರಾಜ್ಯಪಾಲರಿಗೆ ಮಂಡಿಸುವಂತೆ ದಿನಾಂಕ : 13-02-2006ರ ಪತ್ರದಲ್ಲಿ ಘನತೆವೆತ್ತ ರಾಜ್ಯಪಾಲರ ಸಚಿವಾಲಯವು ಸೂಚಿಸಿದನ್ವಯ, ಮೇಲ್ಮನವಿಯಲ್ಲಿನ ಅಂಶಗಳು ಮತ್ತು ಕಂಡಿಕೆವಾರು ಷರಾಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ನಿವೇದನಾ ಟಿಪ್ಪಣಿಯೊಂದಿಗೆ ಪ್ರಸ್ತಾವನೆಯನ್ನು ಘನತೆವೆತ್ತ ರಾಜ್ಯಪಾಲರಿಗೆ ಸಲ್ಲಿಸಲಾಗಿರುತ್ತದೆ. ಸದರಿ ಮೇಲ್ಮನವಿಗೆ ಸಂಬಂಧಿಸಿದಂತೆ, ಘನತೆವೆತ್ತ ರಾಜ್ಯಪಾಲರು ಕೆಳಕಂಡಂತೆ ಆದೇಶಿಸಿರುತ್ತಾರೆ.

I have considered the appeal petition submitted under rule 18 of KCS (CC & A) Rules 1957 by Smt. K.H. Bhagyavathamma, Special Tahsildar, Khadi Board, Bangalore (former Special Tahsildar, Bangalore North Taluk (Additional) against the Government Order No. ಕಂಇ 64 ಎಡಿಇ 2000, dated 11th March 2005 imposing the penalty of withholding of 2 (two) annual increments without cumulative effect, in the light of the contentions raised in the appeal petition and on perusal of the connected enquiry and appeal records.

The changes framed against the AGO that while working as Special Tahsildar, Bangalore North Taluk (Additional) Bangalore, She had approved the transfer of Katha of Government Mufath Kaval land in Sy.No. 111 of Singanayakanahalli of Bangalore North Taluk, in favour of private individuals without verification and scrutiny of the original records and documents, and rendered herself responsible for allowing private individuals to encroach the Government land, have been proved.

The contentions of the appellant that the registered sale deeds were legal, that necessary transfer of property was effected based on remarks of Village Accountant, and that the higher authorities did not cancel the alleged transactions etc., do not merit consideration.

The penalty imposed is mild compared to the gravity of the charges held proved in the inquiry. In the circumstances, after duly considering the entire matter I dismiss the appeal petition and uphold the orders of the Disciplinary Authority.

H.R. Bhardwaj
Governor Of Karnataka

ಆದುದರಿಂದ, ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 52 ಎಡಿಇ 2005, ಬೆಂಗಳೂರು, ದಿನಾಂಕ : 30-04-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 64 ಎಡಿಇ 2000, ದಿನಾಂಕ : 11-03-2005ರಲ್ಲಿ ವಿಧಿಸಿರುವ ಆದೇಶವನ್ನು ಘನತೆವೆತ್ತ ರಾಜ್ಯಪಾಲರು ಸ್ಥಿರೀಕರಿಸಿ ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ, ವಿಶೇಷ ತಹಶೀಲ್ದಾರ್, ಬಿ.ಎಂ.ಟಿ.ಎಫ್., ಬೆಂಗಳೂರು ಇವರು ದಿನಾಂಕ : 21-04-2005ರ ಮೇಲ್ಮನವಿಯನ್ನು ವಜಾಗೊಳಿಸಿರುವುದರಿಂದ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1245

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಕಂದಾಯ ಸಚಿವಾಲಯ

ವಿಷಯ : ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ಕೊರಟಗೆರೆ ತಾಲ್ಲೂಕು ಇವರ ವಿರುದ್ಧ ಇಲಾಖಾ ವಿಚಾರಣೆ ಕುರಿತು-ಆರೋಪದಿಂದ ಮುಕ್ತಗೊಳಿಸುವ ಬಗ್ಗೆ.

ಓದಲಾಗಿದೆ :

1. ಜಿಲ್ಲಾಧಿಕಾರಿಗಳು ತುಮಕೂರು ಜಿಲ್ಲೆ ಇವರ ಪತ್ರ ಸಂಖ್ಯೆ : ಸಿಬ್ಬಂದಿ (1) : ವಿವ : 110/2004-05, ದಿನಾಂಕ : 20-12-2005 ಮತ್ತು 08-05-2006.
2. ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ತಹಶೀಲ್ದಾರ್ ಇವರಿಗೆ ನೀಡಿದ ಕಾರಣ ಕೇಳುವ ದಿನಾಂಕ : 03-02-2007.
3. ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ತಹಶೀಲ್ದಾರ್, ಇವರ ಲಿಖಿತ ಉತ್ತರ ದಿನಾಂಕ : 17-08-2007.
4. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 47 ಎಡಿಇ 2004, ದಿನಾಂಕ : 19-05-2008
5. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 47 ಎಡಿಇ 2004, ದಿನಾಂಕ : 08-07-2008
6. ಶ್ರೀ ನಾಗೇಂದ್ರಕುಮಾರ್, ನಿವೃತ್ತ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳ ವರದಿ ದಿನಾಂಕ : 27-07-2009.

ಪ್ರಸ್ತಾವನೆ:

ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ : 15-01-2004 ರಿಂದ 31-01-2004ರ ವರೆಗೆ ಪರಿವರ್ತಿತ ರಜೆಯ ಮೇಲೆ ತೆರಳಿದ್ದು ದಿನಾಂಕ : 01-02-2004 ರಂದು ಕರ್ತವ್ಯಕ್ಕೆ ಹಾಜರಾಗದೆ ಗೈರು ಹಾಜರಿ ಆಗಿರುವುದಾಗಿ ಹಾಗೂ ಸಾರ್ವಜನಿಕ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸದೆ, ಕರ್ತವ್ಯ ಲೋಪ ಮತ್ತು ದುರ್ನಡತೆ ವ್ಯಕ್ತಪಡಿಸಿದ್ದರಿಂದ ಕರ್ನಾಟಕ ನಾಗರೀಕ ಸೇವಾ (ವರ್ತನೆ) ನಿಯಮಾವಳಿ 1966ರ ನಿಯಮ 3(i) (ii) (iii)ನ್ನು ಉಲ್ಲಂಘಿಸಿರುತ್ತಾರೆಂದು ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಮೇಲೆ ಓದಲಾದ ಕ್ರ.ಸಂ. (1) ದಿನಾಂಕ : 20-12-2005ರಲ್ಲಿ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಸರ್ಕಾರವು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11ರಡಿಯಲ್ಲಿ ದೋಷಾರೋಪಣೆಯನ್ನು (ಅನುಬಂಧ-1 ರಿಂದ 4ರವರೆಗೆ) ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ ಇವರಿಗೆ ಜಾರಿ ಮಾಡಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಲು ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ದಿನಾಂಕ : 03-02-2007 ಕಾರಣ ಕೇಳುವ ನೋಟೀಸು ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (3)ರಲ್ಲಿ ಶ್ರೀಮತಿ ಕೆ.ಹೆಚ್. ಭಾಗ್ಯವತಮ್ಮ ಇವರು ತಮ್ಮ ಲಿಖಿತ ಉತ್ತರ ಸಲ್ಲಿಸಿ ಆರೋಪಗಳನ್ನು ಅಲ್ಲಗಳೆಯುತ್ತಾ ಇಲಾಖಾ ವಿಚಾರಣೆಯನ್ನು ಕೈಬಿಡುವಂತೆ ಕೋರಿರುತ್ತಾರೆ.

ಆರೋಪಿತರ ವಿರುದ್ಧ ಆರೋಪಗಳು ಹಾಗು ಅವರು ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದ ಸರ್ಕಾರವು ಈ ಪ್ರಕರಣದ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ದೃಷ್ಟಿಯಿಂದ ಈ ಬಗ್ಗೆ ಇಲಾಖೆ ವಿಚಾರಣೆಯನ್ನು ಜರುಗಿಸಲು ಶ್ರೀ ಕೆ.ಎನ್. ನಾಗೇಂದ್ರಕುಮಾರ್, ನಿವೃತ್ತ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಕೇಂದ್ರ ಸ್ಥಾನಿಕ ಸಹಾಯಕರು, ತುಮಕೂರು ಜಿಲ್ಲಾಧಿಕಾರಿಗಳ ಕಛೇರಿ ಇವರನ್ನು ಮಂಡನಾಧಿಕಾರಿಯನ್ನಾಗಿ ಮೇಲೆ ಓದಲಾದ ಕ್ರ.ಸಂ. (4)ರಲ್ಲಿ ನೇಮಿಸಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 11 ಮತ್ತು 11-ಎ ರಲ್ಲಿನ ವಿಧಿ ವಿಧಾನಗಳನ್ನು ಅನುಸರಿಸಿ, ಇಲಾಖಾ ವಿಚಾರಣೆ ಜರುಗಿಸಿ, ವಿಚಾರಣಾ ವರದಿಯನ್ನು ಸಲ್ಲಿಸುವಂತೆ, ತಿಳಿಸಿ ಆದೇಶಿಸಲಾಗಿತ್ತು. ದಿನಾಂಕ : 24-05-2008ರಲ್ಲಿ ವಿಚಾರಣಾಧಿಕಾರಿಗಳು ಮನವಿಯನ್ನು ಸಲ್ಲಿಸಿ, ಬೆಂಗಳೂರಿನಿಂದ ತುಮಕೂರಿಗೆ ಹೋಗಿ ಬರಲು ತೊಂದರೆಯಾಗುತ್ತದೆ ಎಂದು ತಿಳಿಸಿ ವಿಚಾರಣೆಯನ್ನು ತುಮಕೂರು ಬದಲು ಬೆಂಗಳೂರಿನಲ್ಲಿ ನಡೆಸಲು ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಸದರಿಯವರ ಮನವಿಯನ್ನು ಪರಿಶೀಲಸಿ, ಮೇಲೆ ಓದಲಾದ ಕ್ರ.ಸಂ. (5)ರಲ್ಲಿ ವಿಚಾರಣೆಯನ್ನು ನಡೆಸಲು ನಿಗದಿಯಾಗಿದ್ದ ತುಮಕೂರು ಜಿಲ್ಲಾಧಿಕಾರಿಗಳ ಕಛೇರಿಗೆ ಬದಲು ಬೆಂಗಳೂರು ಜಿಲ್ಲಾಧಿಕಾರಿಗಳ ಕಛೇರಿಗೆ ಸ್ಥಳ ಬದಲಾವಣೆ ಮಾಡಿ ಆದೇಶಿಸಿತ್ತು.

ಮೇಲೆ ಓದಲಾದ ಕ್ರ. ಸಂ. (6) ರಲ್ಲಿ ವಿಚಾರಣಾಧಿಕಾರಿಗಳಾದ ಶ್ರೀ ಕೆ. ಎನ್. ನಾಗೇಂದ್ರ ಕುಮಾರ್, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರು ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ಆರೋಪಿತ ಅಧಿಕಾರಿಯ ವಿರುದ್ಧ ಆರೋಪಿಸಲಾದ (1) ಅನಧಿಕೃತ ಗೈರು ಹಾಜರಾಗಿರುವುದರ ಕುರಿತು, (2) ಸಾರ್ವಜನಿಕರೊಂದಿಗೆ ಹಾಗೂ ಸಿಬ್ಬಂದಿ ವರ್ಗದವರೊಂದಿಗೆ ಸೌಹಾರ್ದಯುತವಾಗಿ

ನಡೆದುಕೊಳ್ಳದೇ ಇರುವುದರ ಬಗ್ಗೆ, (3) ನ್ಯಾಯಬೆಲೆ ಅಂಗಡಿ, ಸಗಟು ವ್ಯಾಪರ ಮಳಿಗೆ ತಪಾಸಣೆ ಮತ್ತು ಬರ ಪರಿಹಾರ ಕಾಮಗಾರಿಗಳ ತಪಾಸಣೆ ಮಾಡದೇ ಕರ್ತವ್ಯ ಲೋಪ ಎಸಗಿರುವ ಕುರಿತು, (4) ಭೂ ಕಂದಾಯ ವಸೂಲಿ ಮಾಡದಿರುವ ಕುರಿತು, (5) ಸಾರ್ವಜನಿಕರ ಕುಂದುಕೊರತೆಗಳ ಪ್ರಕರಣಗಳ ವಿಲೇವಾರಿ ಮಾಡುವಲ್ಲಿ ವಿಫಲರಾಗಿರುವ ಕುರಿತು ಈ ಕೆಳಕಂಡಂತೆ ವರದಿ ಮಾಡಿರುತ್ತಾರೆ.

ಆಪಾದಿತರ ಅಧಿಕಾರಿಯು ವೈದ್ಯಕೀಯ ಕಾರಣದ ಮೇಲೆ ರಜೆಯಲ್ಲಿ ಇದ್ದುದರಿಂದ ಅದನ್ನು ಗೈರು ಹಾಜರಿಯೆಂದು ಪರಿಗಣಿಸಲು ಬರುವುದಿಲ್ಲವೆಂದು ಅಭಿಪ್ರಾಯ ನೀಡಿದ್ದಾರೆ. ಆಪಾದಿತ ಅಧಿಕಾರಿಯು ಸಿಬ್ಬಂದಿಯೊಂದಿಗೆ ಹಾಗೂ ಸಾರ್ವಜನಿಕರೊಂದಿಗೆ ಸೌಹಾರ್ದಯುತವಾಗಿದ್ದರೆಂಬುದು ಸಾಕ್ಷಿಗಳಿಂದ ತೋರುತ್ತದೆಂದು ತಿಳಿಸಿದ್ದಾರೆ. ಆಪಾದಿತ ಅಧಿಕಾರಿಯು ಆಹಾರ ನಿರೀಕ್ಷಕರು ಹಾಗೂ ಆಹಾರ ಶಿರಸ್ತೇದಾರರ ಸಹಕಾರದಲ್ಲಿ ತನಿಖೆ ಮಾಡಿರುವುದಾಗಿ ಸಾಕ್ಷಿದಾರರು ಹೇಳಿಕೆ ನೀಡಿರುವುದರಿಂದ ಈ ಆಪಾದನೆ ಸಹ ಸಾಬೀತಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆಪಾದಿತ ಅಧಿಕಾರಿಯು ಮಾಸಿಕ ಸಭೆಗಳನ್ನು ನಡೆಸಿ ಗ್ರಾಮ ಲೆಕ್ಕಿಗರ ಹಾಗೂ ಕಂದಾಯ ನಿರೀಕ್ಷಕರುಗಳಿಗೆ ಬೇಡಿಕೆಯನುಸಾರ ಭೂ ಕಂದಾಯ ವಸೂಲಾತಿಯ ಬಗ್ಗೆ ಗುರಿ ನಿಗದಿಪಡಿಸುತ್ತಿದ್ದರೆಂದು ಸಾಕ್ಷಿದಾರರು ಹೇಳಿರುವುದರಿಂದ ಈ ಆಪಾದನೆ ಸಾಬೀತಾಗಿಲ್ಲವೆಂದು ತಿಳಿಸಿದ್ದಾರೆ. ಒಟ್ಟಿನಲ್ಲಿ ಆಪಾದಿತರ ವಿರುದ್ಧದ ಎಲ್ಲಾ 5 ಆರೋಪಗಳು ಸಾಬೀತಾಗಿಲ್ಲವೆಂದು ವಿಚಾರಣಾಧಿಕಾರಿಗಳು ಅಭಿಪ್ರಾಯ ನೀಡಿರುವುದರಿಂದ ವಿಚಾರಣಾ ವರದಿಯನ್ನು ಒಪ್ಪಿಕೊಂಡು, ಸದರಿ ಆಪಾದಿತ ಅಧಿಕಾರಿಯ ವಿರುದ್ಧ ಹೂಡಲಾಗಿದ್ದ ಇಲಾಖಾ ವಿಚಾರಣೆಯಿಂದ ಕೈಬಿಡಲು ತೀರ್ಮಾನಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ.: ಆರ್‌ಡಿ 47 ಎಡಿಇ 2004, ಬೆಂಗಳೂರು, ದಿನಾಂಕ : 29-04-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀಮತಿ ಕೆ. ಹೆಚ್. ಭಾಗ್ಯವತಮ್ಮ, ಹಿಂದಿನ ತಹಶೀಲ್ದಾರ್, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಜರುಗಿಸಿ, ವಿಚಾರಣಾಧಿಕಾರಿಗಳು ಆಪಾದಿತ ಅಧಿಕಾರಿ ವಿರುದ್ಧ ಆರೋಪಗಳು ಸಾಬೀತಾಗಿಲ್ಲವೆಂದು ವರದಿ ಮಾಡಿರುವುದರಿಂದ ಸದರಿ ವಿಚಾರಣಾ ವರದಿಯನ್ನು ಸರ್ಕಾರವು ಒಪ್ಪಿ, ಇವರ ವಿರುದ್ಧ ಹೂಡಲಾಗಿದ್ದ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1246

ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ(ಸೇವೆಗಳು-3)

COMMERCE AND INDUSTRIES SECRETARIAT

SUB : Approval to the proposal of M/s. ICI India Ltd., for change of name.

READ : 1. Govt. Order No : CI 266 SPI 2009, dated : 30-10-2009.
2. Proceedings of the 21st State High Level Clearance Committee (SHLCC) meeting held on 29-03-2010.

PREAMBLE:

In the 19th SHLCC meeting held on 31-08-2009, the proposal of M/s. ICI India Ltd., to establish a unit for manufacture of "Paints and Varnishes" in 70 acres of land to be acquired and allotted by KIADB at Thandya Industrial Area, Mysore District, [Plot next to Flair Garments or behind ITC] with an investment of Rs. 253 crores, generating employment to about 159 persons was approved and G.O. read at (1) above has been issued.

In the 21st State High Level Clearance Committee (SHLCC) meeting held on 29-03-2010, the Committee approved the request of the company for change of name from M/s. ICI India Ltd., to M/s. Akzo Nobel India Ltd.

Hence the following Order :-

GOVERNMENT ORDER NO. CI 266 SPI 2009, BANGALORE, DATED 10-05-2010

Government is pleased to accord approval to the change of name from M/s. ICI India Ltd., to M/s. Akzo Nobel India Ltd. For implementing "Paints and Varnishes" project.

By Order and in the name of the Governor of Karnataka,

(APARNA PAVATE)
Desk Officer (Technical Cell),
Commerce & Industries Department.

P.R.No. 1273

I -F3 -(O)

COMMERCE AND INDUSTRIES SECRETARIAT

SUB : Approval to the Project Proposal of M/s. CF Biotec Pvt. Ltd., Mumbai to enhance the Plant capacity.

READ : 1. Govt. Order No : CI 67 SPI 2009, dated : 06-01-2010.

2. Proceedings of the 21st State High Level Clearance Committee (SHLCC) meeting held on 29-03-2010.

PREAMBLE:

M/s. CF Biotec Pvt. Ltd., had proposed to enhance the Plant capacity from 125 KLPD to 175 KLPD of total Spirit, Bio-Diesel from 30 TPD to 50 TPD and Co-generation plant from 9 MW to 30 MW in 120 acres of land, at Sogal Village, Saudatti taluk, Belgaum District, with an investment of Rs. 345.49 crores. It was proposed to provide employment to about 253 persons. The proposal was approved in 17th SHLCC meeting held on 28-01-2009, and G.O. referred at (1) above has been issued.

In the 21st State High Level Clearance Committee (SHLCC) meeting held on 29-03-2010, the Committee approved the request of the company for change of location from Sogal Village, Saudatti taluk, Belgaum District to Konnur Village, Naragund Taluk, Gadag District with permission to purchase 166.1 acres of identified land U/s. 109 of KLR Act and conversion of the same for industrial use, subject to obtaining clearance from KSPCB.

Hence the following Order :-

GOVERNMENT ORDER NO. CI 67 SPI 2010, BANGALORE, DATED 10-05-2010

Government is pleased to accord approval to the proposal M/s. CF Biotec Pvt. Ltd. to change the location from Sogal Village, Saudatti taluk, Belgaum District to Konnur Village, Naragund Taluk, Gadag District with permission to purchase 166.1 acres of identified land U/s. 109 of KLR Act and conversion of the same for industrial use, subject to obtaining clearance from KSPCB.

Other terms & conditions of the project remains the same as in G.O. read at (1) above.

By Order and in the name of the Governor of Karnataka,
(APARNA PAVATE)
Desk Officer (Technical Cell),
Commerce & Industries Department.

P.R.No. 1274

FOREST, ECOLOGY AND ENVIRONMENT SECRETARIAT

SUB : Grant of quarry leases in respect of buildings materials such as sand, jelly, stones, boulders and laterite stones in forest areas of the Western Ghats region – relaxation given to Public Works Department and Ports and Inland Water Transport Department, Shimoga.

READ : 1. Government Order No : FEE 115 FFM 2001, dated : 26-02-2004.

2. Letter No. A5 (6) GFL. CR. 33/09-10, dated 20/30-03-2010 of the Principal Chief Conservator of Forests, Bangalore.

PREAMBLE:

In Government Order read at 1 above, guidelines in the Annexure were issued by the State Government for grant of quarry lease in respect of building materials such as sand, jelly, stones, boulders and laterite stones in forest areas of the Western Ghats region of Karnataka, the area of each quarry shall not be more than 0.50 ha. and if the above mentioned building materials are available in non forest area within 10 Km. of the proposed site, then quarrying in forest area will not be permitted in such areas.

The Principal Chief Conservator of Forests has sent a proposal to Government in his letter dated : 20/30-03-2010 read at (2) above for diversion of 9.93 ha. of forest land for quarrying of stones in Chandragutti Minor Forest (Ft. Sy. No. 181) and Chandragutti State Forest (Sy. No. 1) of Soraba Taluk in favour of Executive Engineer, Public Works Department and Ports and Inland Water Transport Department, Shimoga.

He has further stated that since the material is required for development activities and the user agency is the Government Department, area was proposed for diversion. Further, this would help in controlling the entry of large number of private user agencies to the forest for quarrying purpose. Therefore, the condition may kindly be relaxed at Government level.

The proposal has been examined in detail and the following orders are issued.

GOVERNMENT ORDER NO. FEE 58 FFM 2010, BANGALORE, DATED 28-04-2010

77.	C.Miss No. 529/10	Bajaj Chetak KA-02-L-8158	06F95A77802	06M9578987	99/10 Item-2
78.	C.Miss No.529/10	Kawasaki Bajaj KA-01-V-7379	D01BKC85869	DDMBK942971	99/10 Item-3
79.	C.Miss No.529/10	Bajaj CT-100 KA-02-EP-8835	DVFBLK40698	DVM5L64976	99/10 Item-4
80.	C.Miss No.529/10	Bajaj Chetak CKR-828	-	06E583824	99/10 Item-5
81.	C.Miss No.529/10	Kinetic Honda KA-05-K-1770	-	76858NIEH	99/10 Item-6
82.	C.Miss No.530/10	Suzuki Shogun KA-05K-4516	8306F367380	-	100/10 Item-1
83.	C.Miss No.530/10	Kawasaki Bajaj KA-05-EN-2663	DFFBKB10Z5L	-	100/10 Item-2
84.	C.Miss No.531/10	Kawasaki Bajaj MH-14-E-4393	30F94D07910	30M94D05170	101/10 Item-1
85.	C.Miss No.531/10	Bajaj Chetak KA-05-K-7940			101/10 Item-2
86.	C.Miss No.531/10	Hero Honda CD-100 SS KA-05-V-6054	96J12F07216	96J10E11857	101/10 Item-3

Sl. No.	CR No. & Sec & CMiss No.	Vehicle & R.No.	Chasis No.	Engin No.	P.F.No.
87.	C.Miss •No.531/10	RX Yamaha CKM-5821	01B1L7020685	01B1L7020685	101/10 Item-4
88.	C.Miss No.531/10	Kinetic Honda KA-01-E-2123	-	140626NIEF	101/10 Item-5
89.	C.Miss No. 531/10	Yezdi Road King CKE-7142	064638	058468	101/10 Item-6
90.	535/10	Auto Rikshow KA-03-A-1403	-	-	103/10
91.	C.Miss No.535/10	Auto KA-05-A-702	-	-	103/10
92.	C.Miss No.535/10	Auto KA-03-5792	-	-	103/10
93.	C.Miss No.535/10	Auto KA-02-A-3446	-	-	103/10
94.	C.Miss No.535/10	Goods Auto KA-22-4148	-	-	103/10
95.	C.Miss No.535/10	Auto KA-03-A-4735	-	-	103/10
96.	C.Miss No.535/10	Goods Auto MED-4418	-	-	103/10
97.	C.Miss No.535/10	Auto KA-02-5304	-	-	103/10
98.	C.Miss No.535/10	Auto KA-02-8257	-	-	103/10
99.	C.Miss No.544/10	Maruthi-800 KA-03-M-1905	SB308IN652448	9800092	105/10
100.	C.Miss No.545/10	Hundai Santro KA-02-P-1511	MAHAA51GRYM087466	G4HCYM086680	106/10
101.	C.Miss No. 546/10	Hundai Santro TN-31-Q-9456	MAHAA51GRHM009250	G4HCWM009185	107/10
102.	C.Miss No.547/10	Maruti-800 -	SB308IN2302867	F8BIN3311825	108/10

ಪೊಲೀಸ್ ಇನ್ಸ್‌ಪೆಕ್ಟರ್,
ಜಯಪ್ರಕಾಶನಗರ ಪೊಲೀಸ್
ಠಾಣೆ, ಬೆಂಗಳೂರು.

ಪಿ.ಆರ್-1043

ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ

ಪ್ರಕಟಣೆ

ಸಂಖ್ಯೆ:ಬಿಸಿಎಂ-8/ಅಸಂ/ಕಾತ/ಪಿಆರ್-2/2010-11, ದಿನಾಂಕ:6ನೇ ಜುಲೈ, 2010

ವಿಷಯ: 2010-11ನೇ ಸಾಲಿನಲ್ಲಿ ಮತೀಯ ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಬೇತಿ ನೀಡುವ ಕುರಿತು.

2010-11ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಲ್ಲಿನ ಮತೀಯ ಅಲ್ಪಸಂಖ್ಯಾತರು (ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಪಾರ್ಸಿ, ಬೌದ್ಧ, ಸಿಖ್, ಆಂಗ್ಲೋ-ಇಂಡಿಯನ್) ವರ್ಗಕ್ಕೆ ಸೇರಿದ ಕಾನೂನು ಪದವೀಧರರಿಗೆ ಈ ಇಲಾಖಾ ವತಿಯಿಂದ ತರಬೇತಿ ನೀಡಲಾಗುತ್ತಿದೆ. ಆಸಕ್ತ ಹಾಗೂ ಅರ್ಹ ಮತೀಯ ಅಲ್ಪಸಂಖ್ಯಾತರ ವರ್ಗಗಳಿಗೆ ಸೇರಿದ ಕಾನೂನು ಪದವೀಧರರು, ಈ ಕೆಳಕಂಡ ನಿಬಂಧನೆಗೆ ಒಳಪಟ್ಟು ಅರ್ಜಿಗಳನ್ನು ಜಿಲ್ಲಾ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಅಧಿಕಾರಿಗಳು, ಬೆಳಗಾವಿ ಇವರಿಗೆ ದಿನಾಂಕ:07.08.2010ರೊಳಗಾಗಿ ಸಲ್ಲಿಸಬಹುದಾಗಿದೆ.

ಅರ್ಹತೆ ನಿಯಮಗಳು ಹಾಗೂ ತರಬೇತಿಯ ವಿವರಗಳು

1) ತರಬೇತಿಯನ್ನು ಬೆಳಗಾವಿ ಜಿಲ್ಲೆಯಲ್ಲಿಯೇ ನೀಡಲಾಗುವುದು.

2) ಬೆಳಗಾವಿ ಜಿಲ್ಲೆಯಿಂದ ಒಟ್ಟು ಆರು (6) ಅಭ್ಯರ್ಥಿಗಳನ್ನು ಮಾತ್ರ ತರಬೇತಿಗೆ ಆಯ್ಕೆ ಮಾಡಲಾಗುವುದು.

3) ಸರ್ಕಾರದ ಆದೇಶ ಸಂಖ್ಯೆ:ಎಸ್.ಡಬ್ಲ್ಯೂ.ಡಿ.150:ಬಿಸಿಎಂ:94 ದಿನಾಂಕ:17.09.2004ರಲ್ಲಿ ವರ್ಗೀಕರಣ ಮಾಡಿರುವ ಪ್ರಕಾರ ಮತೀಯ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಾಗಿರಬೇಕು ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಸ್.ಡಬ್ಲ್ಯೂ.ಡಿ:222:ಬಿಸಿಎಂ:94 ದಿನಾಂಕ:20.09.1994 ರ ಆದೇಶದಲ್ಲಿ ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿ ಜಾತಿ: ಆದಾಯ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. ವಾರ್ಷಿಕ ಆದಾಯವು ರೂ.15000-00 ಮೀರಿರಬಾರದು.

4) ಬೆಳಗಾವಿ ಜಿಲ್ಲೆಯಲ್ಲಿ ವಾಸಮಾಡುತ್ತಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಹಾಕಿಕೊಳ್ಳಲು ಅರ್ಹರಿರುತ್ತಾರೆ.

5) ತರಬೇತಿ ಅವಧಿಯು ನಾಲ್ಕು ವರ್ಷವಾಗಿದ್ದು, ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಪ್ರತಿ ಮಾಹೆಗೆ ರೂ.1000-00 ರೂ. ಒಂದು ಸಾವಿರ ಮಾತ್ರ ತರಬೇತಿ ಭತ್ಯೆ (ಸ್ಟೈಫಂಡ್) ಮಂಜೂರು ಮಾಡಲಾಗುವುದು.

6) ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಿಂದ ಸಂದರ್ಶನ ನಡೆಸಿ ಆಯ್ಕೆ ಮಾಡಲಾಗುವುದು.

7) ಅಭ್ಯರ್ಥಿಗಳು ಅರ್ಜಿ ಜೊತೆಗೆ ಅವರ ವಯಸ್ಸನ್ನು ದೃಢೀಕರಿಸುವ ಎಸ್.ಎಸ್.ಎಲ್.ಸಿ.ಯ ಅಂಕಪಟ್ಟಿ ಪದವಿ ಹಾಗೂ ಕಾನೂನು ಪದವಿಯಲ್ಲಿ ಪಡೆದ ಅಂಕಪಟ್ಟಿಗೆ ಪ್ರಮಾಣ ಪತ್ರದ ದೃಢೀಕೃತ ಪತ್ರವನ್ನು ಮತ್ತು ವಕೀಲರು ಎಂದು ಪ್ರಾಕ್ಟೀಸ್ ಮಾಡುತ್ತಿರುವ ಬಗ್ಗೆ ಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದು.

8) ಅಭ್ಯರ್ಥಿಗಳ ವಯಸ್ಸು ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕಕ್ಕೆ 30 ವರ್ಷಗಳು ಮೀರಿರಬಾರದು.

9) ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್ ಸರ್ಕಾರಿ ವಕೀಲರು ಅಥವಾ ಕನಿಷ್ಠ 20 ವರ್ಷಗಳ ವಕೀಲ ವೃತ್ತಿಯಲ್ಲಿ ಅನುಭವವುಳ್ಳ ಯಾವುದೇ ವಕೀಲರ ಹತ್ತಿರ ತರಬೇತಿಗೆ ನಿಯೋಜಿಸಲಾಗುವುದು.

10) ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ನೋಂದಣಿಯಾಗದಿದ್ದಲ್ಲಿ ತರಬೇತಿಗೆ ಆಯ್ಕೆಯಾದರೆ ಅಂತಹ ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ತಮ್ಮ ಹೆಸರು ನೊಂದಣಿ ಮಾಡಿಸದ ಹೊರತು ಸ್ಟೈಫಂಡ್ ಹಣವನ್ನು ಪಾವತಿಸಲಾಗುವುದಿಲ್ಲ.

11) ಅಭ್ಯರ್ಥಿಯು ತರಬೇತಿಗೆ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಿಂದ ಎರಡು (2) ವರ್ಷದೊಳಗಾಗಿ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

12) ತರಬೇತಿ ಅವಧಿಯು (4) ನಾಲ್ಕು ವರ್ಷಗಳಾಗಿದ್ದು, ತರಬೇತಿಯನ್ನು ಮಧ್ಯದಲ್ಲಿ ಬಿಡಕೂಡದು. ತರಬೇತಿಯ ಅವಧಿಯಲ್ಲಿ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸೇವೆಗೆ ಸೇರಿದ್ದಲ್ಲಿ ಈ ಷರತ್ತು ಅನ್ವಯಿಸುವುದಿಲ್ಲ.

13) ಅಭ್ಯರ್ಥಿಗಳು ಸುಳ್ಳು ಮಾಹಿತಿ ಸಲ್ಲಿಸಿದ್ದಲ್ಲಿ ಅವರ ವಿರುದ್ಧ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದು. ಅಲ್ಲದೇ ಅವರಿಗೆ ನೀಡಲಾದ ತರಬೇತಿ ಭತ್ಯೆಯನ್ನು ಶೇ.10 ರಷ್ಟು ಬಡ್ಡಿಯೊಂದಿಗೆ ವಸೂಲಿ ಮಾಡಲಾಗುವುದು. ಯಾವುದೇ ಹಣ ಬಾಕಿ ಉಳಿದಲ್ಲಿ ಭೂ ಕಂದಾಯ ವಸೂಲಿ ಮಾಡುವ ರೀತಿಯಲ್ಲಿ ಇಂತಹ ಹಣವನ್ನು ವಸೂಲಿ ಮಾಡಲಾಗುವುದು.

14) ಸದಸ್ಯ ಕಾರ್ಯದರ್ಶಿಗಳು ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲನೆ ಮಾಡಿ ಅಪೂರ್ಣಗೊಂಡಿರುವ ಹಾಗೂ ಕೇಳಿರುವ ಮಾಹಿತಿಯನ್ನು ಅರ್ಜಿಯ ಸಂಗಡ ಒದಗಿಸದ ಮತ್ತು ಅವಧಿ ಮೀರಿ ಬರುವಂತಹ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.

ಅರ್ಹ ಮತ್ತು ಆಸಕ್ತಿಯುಳ್ಳವರು ಈ ಪ್ರಕಟಣೆಯೊಂದಿಗೆ ಪ್ರಕಟಿಸಲಾದ ಅರ್ಜಿ ನಮೂನೆಯಲ್ಲಿಯೇ ದಿನಾಂಕ:07.08.2010 ರೊಳಗಾಗಿ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಳಗಾವಿ ಇವರಿಗೆ ತಲುಪುವಂತೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಗಳಿಗೆ ಜಿಲ್ಲಾ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಅಧಿಕಾರಿಗಳವರ ಕಛೇರಿ ಡಿ.ಸಿ.ಆಫೀಸ್ ಕಾಂಪೌಂಡ್ ಬೆಳಗಾವಿ ಇವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

ಸದಸ್ಯ ಕಾರ್ಯದರ್ಶಿಗಳು
ಮತ್ತು ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ ಇಲಾಖೆ, ಬೆಳಗಾವಿ.

ಪಿ.ಆರ್-1050

ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ

ಪತ್ರಿಕಾ ಪ್ರಕಟಣೆಗಾಗಿ

ಸಂಖ್ಯೆ:ಬಿಸಿಎಂ-4/ಕಾಪತ/ಸಿಆರ್-27/2010-11, ದಿನಾಂಕ:6ನೇ ಜುಲೈ, 2010

ವಿಷಯ: 2010-11ನೇ ಸಾಲಿಗೆ ಹಿಂದುಳಿದ ವರ್ಗಗಳ ಕಾನೂನು ಪದವೀಧರರಿಗೆ ನಾಲ್ಕು ವರ್ಷಗಳ ತರಬೇತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಎಸ್.ಡಬ್ಲ್ಯೂ.ಎಲ್/68/ಎಸ್.ಡಬ್ಲ್ಯೂ/89, ಬೆಂಗಳೂರು, ದಿನಾಂಕ:02.11.1990.

ಉಲ್ಲೇಖ (1)ರ ಸರ್ಕಾರದ ಆದೇಶಾನುಸಾರ ಹಾಸನ ಜಿಲ್ಲೆಗೆ ಸೇರಿದ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ವರ್ಗಕ್ಕೆ ಸೇರಿದ 10 ಕಾನೂನು ಪದವೀಧರರಿಗೆ ವಕೀಲ ವೃತ್ತಿಯಲ್ಲಿ ಮತ್ತು ನ್ಯಾಯಾಂಗ ಸೇವೆಯ ಪೂರ್ವ ತರಬೇತಿ ಪಡೆಯಲು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಂತೆ ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳಿಂದ 2010-11ನೇ ಸಾಲಿಗೆ ಅರ್ಜಿ ಆಹ್ವಾನಿಸಲಾಗಿದೆ.

ನಿಬಂಧನೆಗಳು:

1) ಅಭ್ಯರ್ಥಿಗಳು ಸರ್ಕಾರದ ಆದೇಶದಲ್ಲಿನಂತೆ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿ ವರ್ಗಕ್ಕೆ ಸೇರಿದವರಾಗಿರಬೇಕು. ಈ ಬಗ್ಗೆ ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ತಹಸೀಲ್ದಾರರವರಿಂದ ಜಾತಿ ಆದಾಯ ಪರಿಶೀಲನಾ ಪತ್ರವನ್ನು ಭರ್ತಿ ಮಾಡಿದ ಅರ್ಜಿಗಳೊಂದಿಗೆ ಕಳುಹಿಸಿಕೊಡಬೇಕು. ಪ್ರವರ್ಗ-1ರ ಅಭ್ಯರ್ಥಿಗಳಿಗೆ ಆದಾಯ ಮಿತಿ ಇರುವುದಿಲ್ಲ. ಉಳಿದ ಪ್ರವರ್ಗಗಳವರಿಗೆ ಆದಾಯ ರೂ.15000/-ಗಳ ಒಳಗೆ ಇರಬೇಕು.

2) ತರಬೇತಿಗೆ ಆಯ್ಕೆ ಮಾಡುವ ಅಭ್ಯರ್ಥಿಗಳ ಸಂಖ್ಯೆ 10- ಮಾತ್ರ, ಆಯ್ಕೆ ಮಾಡಬೇಕಾದ ಅಭ್ಯರ್ಥಿಗಳ ವರ್ಗವಾರು ವಿವರ ಪ್ರವರ್ಗ-1 ಶೇಕಡಾ.15, 2ಎ-ಶೇಕಡಾ.53, 3ಎ-ಶೇಕಡಾ.15 ಮತ್ತು ವರ್ಗ-3ಬಿ ಶೇಕಡಾ 17ರ ಅನುಪಾತದಲ್ಲಿ ಆಯ್ಕೆ ಮಾಡಲಾಗುವುದು.

3) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕಕ್ಕೆ 30 ವರ್ಷಗಳ ವಯೋಮಿತಿಯಲ್ಲಿರಬೇಕು. ಪ್ರವರ್ಗ-1ರ ಅಭ್ಯರ್ಥಿಗಳಿಗೆ ಗರಿಷ್ಠ 31 ವರ್ಷ ಮೀರಿರಬಾರದು.

4) ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಎರಡು ವರ್ಷದೊಳಗೆ ತೇರ್ಗಡೆಯಾದ ಕಾನೂನು ಪದವೀಧರರು ಮಾತ್ರ ಈ ತರಬೇತಿಗೆ ಅರ್ಹರಿರುತ್ತಾರೆ. ಅವಶ್ಯ ಮಾಹಿತಿಗಳಾದ ಕಾನೂನು ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ, ಅಂಕಪಟ್ಟಿಗಳ ದೃಢೀಕರಣ ಪತ್ರ, ಜನ್ಮ ದಿನಾಂಕ ದೃಢೀಕರಿಸಲು ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಟಿ.ಸಿ. ದೃಢೀಕರಣ ಪ್ರತಿಯನ್ನು ಅರ್ಜಿಗಳೊಂದಿಗೆ ಲಗತ್ತಿಸಬೇಕು.

5) ಆಯ್ಕೆಯಾದ ಅಭ್ಯರ್ಥಿಗಳಿಗೆ ನಾಲ್ಕು ವರ್ಷ ತರಬೇತಿ ನೀಡಲಾಗುವುದು. ಮತ್ತು ಮಾಹೆಯಾನ ರೂ.1000/- (ಒಂದು ಸಾವಿರ ರೂಪಾಯಿ ಮಾತ್ರ) ತರಬೇತಿ ಭತ್ಯೆ ನೀಡಲಾಗುವುದು. ತರಬೇತಿಯ ಮಧ್ಯಂತರ ಅವಧಿಯಲ್ಲಿ ಬಿಟ್ಟುಹೋಗುವವರಿಗೆ ಈ ನಿಬಂಧನೆಗಳು ಅನ್ವಯಿಸುವುದಿಲ್ಲ.

6) ನಿಗದಿಪಡಿಸಿದ ದಿನಾಂಕದ ನಂತರ ಬಂದ ಅರ್ಜಿಗಳು ಅಪೂರ್ಣ ಹಾಗೂ ಅನರ್ಹ ಅರ್ಜಿಗಳೆಂದು ತಿರಸ್ಕರಿಸಲಾಗುವುದು.

7) ಪರಿಪೂರ್ಣ ಮಾಹಿತಿಯೊಂದಿಗೆ ಸ್ವೀಕೃತವಾದ ಅರ್ಜಿಯ ಪರಿಶೀಲನೆ ನಂತರ ಆಯ್ಕೆ ಸಮಿತಿಯು ನಿರ್ದಿಷ್ಟಪಡಿಸಿದ ಸ್ಥಳ ಮತ್ತು ವೇಳೆಗೆ ಸಂದರ್ಶನಕ್ಕೆ ಕರೆಯಲಾಗುವುದು.

8) ಆಯ್ಕೆಯಾದ ಅಭ್ಯರ್ಥಿಗಳನ್ನು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು ಅಥವಾ ಕನಿಷ್ಟ 20 ವರ್ಷಗಳ ವಕೀಲ ವೃತ್ತಿ ಅನುಭವವುಳ್ಳ ವಕೀಲರ ಅಧೀನದಲ್ಲಿ ತರಬೇತಿಗೆ ನಿಯೋಜಿಸಲಾಗುವುದು.

9) ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಮುಖಾಂತರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.

10) ಆಯ್ಕೆಯಾದ ಅಭ್ಯರ್ಥಿಗಳಿಗೆ 15 ದಿನಗಳ ಕಾಲಾವಕಾಶ ನೀಡಿ, ಒಪ್ಪಿಗೆ ಸೂಚಿಸಲು ತಿಳಿಸಲಾಗುವುದು. ತರಬೇತಿ ಮಧ್ಯದಲ್ಲಿ ಬಿಟ್ಟು ಹೋಗದಿರುವ ಬಗ್ಗೆ ಕರಾರು ಪತ್ರ ಬರೆದು ಕೊಡತಕ್ಕದ್ದು.

11) ಆಯ್ಕೆಯಾದ ಅಭ್ಯರ್ಥಿಗಳು ನಿಗದಿಪಡಿಸಿದ ದಿನಾಂಕದೊಳಗೆ ಲಿಖಿತ ಒಪ್ಪಿಗೆ ಸೂಚಿಸದಿದ್ದಲ್ಲಿ, ಅಥವಾ ತರಬೇತಿಗೆ ಹಾಜರಾಗಲು ತಿರಸ್ಕರಿಸಿದಲ್ಲಿ ಸದರಿ ಅಭ್ಯರ್ಥಿಯ ಆಯ್ಕೆಯನ್ನು ರದ್ದುಪಡಿಸಿ, ಕಾಯ್ದಿಟ್ಟ ಪಟ್ಟಿಯಿಂದ ಮತ್ತೊಬ್ಬ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡಲಾಗುವುದು.

12) ಆಯ್ಕೆಯಾದ ಅಭ್ಯರ್ಥಿಯು ಸುಳ್ಳು ಮಾಹಿತಿ ನೀಡಿದಲ್ಲಿ ಅಥವಾ ತರಬೇತಿಯಿಂದ ಮಧ್ಯದಲ್ಲಿ ಬಿಟ್ಟುಹೋದಲ್ಲಿ, ಸರ್ಕಾರವು ಸದರಿ ಅಭ್ಯರ್ಥಿಯ ಮೇಲೆ ಖರ್ಚು ಮಾಡಲಾದ ಹಣವನ್ನು ವರ್ಷಕ್ಕೆ ಶೇಕಡಾ 10ರ ಬಡ್ಡಿಯೊಂದಿಗೆ ಭೂಕಂದಾಯ ಬಾಕಿ ಎಂದು ಪರಿಗಣಿಸಿ, ವಸೂಲಿ ಮಾಡಲಾಗುವುದು. ಹಾಗೂ ಶಿಕ್ಷೆಗೆ ಗುರಿಪಡಿಸಲಾಗುವುದು.

13) ಈ ಸೌಲಭ್ಯವನ್ನು ಬೇರೆ ಯಾವುದೇ ಇಲಾಖೆಯಲ್ಲಿ ಪಡೆಯುತ್ತಿರಬಾರದು.

14) ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ತಮ್ಮ ಹೆಸರನ್ನು ನೊಂದಾಯಿಸಿರಬೇಕು ಮತ್ತು ಈ ಬಗ್ಗೆ ದಾಖಲೆ ಒದಗಿಸಬೇಕು.

15) ಭರ್ತಿ ಮಾಡಿದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು, ಕಾನೂನು ಪದವೀಧರರ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮತ್ತು ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹೆಚ್.ಕೆ.ಬಿ. ವಾಣಿಜ್ಯ ಸಂಕೀರ್ಣ, 2ನೇ ಮಹಡಿ, 23ನೇ ಅಡ್ಡರಸ್ತೆ, ಕುವೆಂಪುನಗರ, ಹಾಸನ ಇವರಿಗೆ ದಿನಾಂಕ:30.07.2010ರಂದು ಅಪರಾಹ್ನ 5.30 ಗಂಟೆ ಒಳಗೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

16) ಅರ್ಜಿ ನಮೂನೆಗಳನ್ನು ಈ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಉಚಿತವಾಗಿ ಪಡೆಯಬಹುದಾಗಿದೆ.

ಜಿಲ್ಲಾ ಅಧಿಕಾರಿ,
ಹಿಂದುಳಿದ ವರ್ಗಗಳ ಹಾಗೂ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ.

ಪಿ.ಆರ್-1051

ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಅಧಿಕಾರಿಗಳ ಕಛೇರಿ, ಬೀದರ್

ಪ್ರಕಟಣೆ

ಸಂಖ್ಯೆ:ಬಿಸಿಎಂ/ಕಾಪತಭ/ಸಿಆರ್-14/2010-11, ದಿನಾಂಕ:14ನೇ ಜೂನ್, 2010

2010-2011ನೇ ಸಾಲಿನ ಬೀದರ್ ಜಿಲ್ಲೆಯಲ್ಲಿ ಕಾನೂನು ಪದವಿ ಪಡೆದಿರುವ 10 ಹಿಂದುಳಿದ ವರ್ಗಗಳ ಮತ್ತು 2 ಮತೀಯ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಸರ್ಕಾರಿ ವಕೀಲ ಅಥವಾ 20 ವರ್ಷಗಳಿಗಿಂತ ಹೆಚ್ಚಿನ ಅನುಭವ ಉಳ್ಳ ವಕೀಲರಿಂದ ತರಬೇತಿ ಕೊಡಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ತರಬೇತಿಯ ಅವಧಿಯು 4 ವರ್ಷಗಳಿದ್ದು ತರಬೇತಿ ಅವಧಿಯಲ್ಲಿ ಮಾಸಿಕ ರೂ.1000/- ತರಬೇತಿ ಭತ್ಯೆ ನೀಡಲಾಗುವುದು. ಅರ್ಜಿಗಳನ್ನು ಸಲ್ಲಿಸಬಯಸುವವರು ಈ ಕೆಳಕಂಡ ಷರತ್ತುಗಳನ್ನು ಪೂರೈಸಿರಬೇಕು.

1) ಅಭ್ಯರ್ಥಿಯು ಹಿಂದುಳಿದ ವರ್ಗಗಳ ಪ್ರವರ್ಗ 1, 2ಎ, 3ಎ, 3ಬಿ, ಹಾಗೂ ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಶಿಖ್ ಹಾಗೂ ಪಾರ್ಸಿ ಸಮುದಾಯಗಳಲ್ಲಿ ಯಾವುದಾದರೊಂದು ಸಮುದಾಯಕ್ಕೆ ಸೇರಿದ್ದು ಬೀದರ್ ಜಿಲ್ಲೆಯ ನಿವಾಸಿಯಾಗಿರಬೇಕು.

2) ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.15000/- ಕ್ಕೆ ಮೀರಿರಬಾರದು. ಪ್ರವರ್ಗ-1 ರಡಿಯಲ್ಲಿ ಬರುವ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಆದಾಯದ ಮಿತಿ ಇರುವುದಿಲ್ಲ.

3) ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿರಬೇಕು.

4) ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕಡೆಯ ದಿನಾಂಕಕ್ಕೆ ಪ್ರವರ್ಗ 2ಎ, 3ಎ, ಮತ್ತು 3ಬಿ ಹಾಗೂ ಅಲ್ಪಸಂಖ್ಯಾತರ ಅಭ್ಯರ್ಥಿಯ ವಯಸ್ಸು 30ಕ್ಕೆ ಹಾಗೂ ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳ ವಯಸ್ಸು 31ಕ್ಕೆ ಮೀರಿರಬಾರದು. ಮತ್ತು ಅರ್ಜಿ ಸ್ವೀಕರಿಸಲು ನಿಗದಿಪಡಿಸಿರುವ ಕಡೆಯ ದಿನಾಂಕಕ್ಕೆ ಹಿಂದುಳಿದ ವರ್ಗಗಳ ಅಭ್ಯರ್ಥಿಯು 3 ವರ್ಷಗಳ ಮತ್ತು ಅಲ್ಪಸಂಖ್ಯಾತರ ಅಭ್ಯರ್ಥಿಯು 2 ವರ್ಷಗಳ ಅವಧಿಯೊಳಗೆ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

ಕಾರಣ ಅರ್ಹ ಅಭ್ಯರ್ಥಿಗಳು ಅರ್ಜಿ ನಮೂನೆಗಳನ್ನು ಕೆಳಗೆ ಸಹಿ ಮಾಡಿದವರ ಕಛೇರಿಯಿಂದ ಪಡೆದು ಕೆಳಕಂಡ ದಾಖಲೆಗಳೊಂದಿಗೆ ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಬಸವನಗರ ಬೀದರ್ ಇವರಿಗೆ ಈ ಪ್ರಕಟಣೆಯು ಕರ್ನಾಟಕ ಗೆಜೆಟ್‌ನಲ್ಲಿ ಪ್ರಕಟಣೆಯಾದ ದಿನಾಂಕದಿಂದ 20 ದಿನಗಳೊಳಗೆ ತಲುಪುವಂತೆ ಸಲ್ಲಿಸುವುದು.

1) ಕಾನೂನು ಪದವಿ ಪರೀಕ್ಷೆಯ ಎಲ್ಲಾ ವರ್ಷಗಳ ದೃಢೀಕೃತ ಅಂಕಪಟ್ಟಿ.
2) ಸಂಬಂಧಪಟ್ಟ ತಹಶೀಲ್ದಾರರಿಂದ ನೀಡಲ್ಪಟ್ಟ ಜಾತಿ ಆದಾಯ ಪ್ರಮಾಣ ಪತ್ರ.
3) ವಾಸಸ್ಥಳ ಪ್ರಮಾಣ ಪತ್ರ.
4) ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೋಂದಾಯಿಸಿದ ಪ್ರಮಾಣ ಪತ್ರ.

ಅಪೂರ್ಣವಾದ ಹಾಗೂ ಅವಧಿ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಮಟ್ಟದ ಕಾನೂನು ಪದವೀಧರರ ಆಯ್ಕೆ
ಸಮಿತಿ ಹಾಗೂ ಜಿಲ್ಲಾ ಹಿಂದುಳಿದ ವರ್ಗಗಳ
ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು, ಬೀದರ್.

ಪಿ.ಆರ್-1020

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಪ್ರಕಟಣೆ

ಸಂಖ್ಯೆ: ಇಇಇ/ಬೆಂ.ಬೃ.ಕಾ.ಉ.ವಿ/ಎಇಇ-4/ಕ-10-11/1380-82, ದಿನಾಂಕ:28ನೇ ಜೂನ್, 2010

ಕ.ವಿ.ಪ್ರ.ನಿ.ನಿ. ಯು 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ ಪ್ರಕರಣದ 164ರ ಅನ್ವಯ ಯೋಜನೆಗಳನ್ನು ರೂಪಿಸಿದೆ ಹಾಗೂ ಸದರಿ ನಿಯಮದ ಅನ್ವಯ ಈ ಮೂಲಕ ಯೋಜನೆಗಳನ್ನು ಸಾರ್ವಜನಿಕ ತಿಳುವಳಿಕೆಗಾಗಿ ಪ್ರಕಟಿಸುತ್ತಿದೆ. ಯೋಜನೆಯ ವಿವರಗಳನ್ನು ಈ ರೀತಿ ಇವೆ.

1. ಯೋಜನೆಯ ಹೆಸರು: ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಅಬ್ಬಿಗೆರೆ ಗ್ರಾಮದಲ್ಲಿ, 2x12.5 ಎಂ.ವಿ.ಎ. 66/11 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆ ಮತ್ತು ಹಾಲಿ ಇರುವ 66 ಕೆ.ವಿ. ಡಬಲ್ ಸರ್ಕ್ಯೂಟ್ ಪೀಣ್ಯ-DG-3- DG-4 ಮಾರ್ಗದಿಂದ ಸಂಪರ್ಕ ಕಲ್ಪಿಸಲು 0.03 ಕಿ.ಮೀ.ಗಳ ಲಿಲೋ ಮಾರ್ಗ ನಿರ್ಮಾಣ.

2. ಯೋಜನೆಯ ಪ್ರಯೋಜನಗಳು: ಈ ವಿದ್ಯುತ್ ಸ್ಥಾವರ ಸ್ಥಾಪಿಸುವುದರಿಂದ ಸುತ್ತಮುತ್ತಲಿನ ಪ್ರದೇಶಗಳಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು ಅನುಕೂಲವಾಗುತ್ತದೆ.

3. 66 ಕೆ.ವಿ. ಮಾರ್ಗ ಹಾದುಹೋಗುವ ಹಳ್ಳಿಗಳು ಮತ್ತು ಪ್ರದೇಶಗಳು: ಅಬ್ಬಿಗೆರೆ.

4. ಅಂದಾಜು ವೆಚ್ಚ: ಕೇಂದ್ರ- ರೂ.526.96 ಲಕ್ಷಗಳು.

ಮಾರ್ಗ ರೂ.16.16 ಲಕ್ಷಗಳು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಮೇಲೆ ತಿಳಿಸಿರುವ ಯೋಜನೆಗಳನ್ನು ಕಾರ್ಯಗತಗೊಳಿಸಲು 1885ರ ಭಾರತೀಯ ಟೆಲಿಗ್ರಾಫ್ ಅಧಿನಿಯಮ ಭಾಗ (III)ರ (ಕೇಂದ್ರೀಯ ಕಾಯಿದೆ 1885ರ 13) ಅನ್ವಯ ಟೆಲಿಗ್ರಾಫ್

ಪ್ರಾಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ. ಸದರಿ ಯೋಜನೆಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನಿಗಮದ ಗಮನಕ್ಕೆ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ 60 ದಿನಗಳ ಒಳಗೆ ಈ ಕೆಳ ಸಹಿದಾರರ ಕಛೇರಿಗೆ ಕಳುಹಿಸಬಹುದು.

ಕಾರ್ಯನಿರ್ವಾಹಕ ಇಂಜಿನೀಯರ್ (ವಿ),
ಬೆಂಗಳೂರು ಬೃಹತ್ ಕಾಮಗಾರಿ ಉತ್ತರ
ವಿಭಾಗ, ಕ.ವಿ.ಪ್ರ.ನಿ.ನಿ. ಬೆಂಗಳೂರು-09.

ಪಿಡಿ-85

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
ಕಾರ್ಯನಿರ್ವಾಹಕ ಇಂಜಿನೀಯರ್ (ವಿದ್ಯುತ್) ರವರ ಕಛೇರಿ, ಬೃಹತ್ ಕಾಮಗಾರಿ ವಿಭಾಗ,
ಮಂಗಳೂರು ಕವಿಪ್ರನಿನಿ., ಕಾವೂರು, ಮಂಗಳೂರು

ಸಂಖ್ಯೆ: ಕಾನಿಇಂ/ಬೃಕಾವಿ/ಉಡುಪಿ/ಸಕಾನಿಇಂ(ಕ)/1087-89, ದಿನಾಂಕ:23ನೇ ಜೂನ್, 2010

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮದ ಸೆಕ್ಷನ್ 67(2)(ಸಿ)ರ ಅನ್ವಯ ಈ ಕೆಳಕಂಡ ಯೋಜನೆಯನ್ನು ರೂಪಿಸಿರುತ್ತದೆ ಮತ್ತು ಅದನ್ನು ಮೇಲೆ ತಿಳಿಸಿರುವ ಕಾಯ್ದೆಯ ಸೆಕ್ಷನ್ 67(2)ರ ಅನ್ವಯ ಸಂಬಂಧಪಟ್ಟ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

1.	**ಯೋಜನೆಯ ಹೆಸರು:**	ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕಿನ 220/110 ಕೆ.ವಿ. ಎಸ್.ಆರ್.ಎಸ್. ಕಾವೂರು ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ಎಂ.ಸಿ.ಎಫ್. ಟ್ಯಾಪಿಂಗ್ ಪಾಯಿಂಟ್‌ವರೆಗೆ ಹಾಲಿ ಇರುವ 110 ಕೆ.ವಿ. SRS-KIOCL ಏಕ ವಿದ್ಯುತ್ ಪ್ರಸರಣಾ ಮಾರ್ಗದಲ್ಲಿಯೇ 110 ಕೆ.ವಿ. ದ್ವಿಪ್ರಸರಣಾ ವಿದ್ಯುತ್ ಮಾರ್ಗದ ನಿರ್ಮಾಣ.
2.	**ಪ್ರಮುಖ ಲಕ್ಷಣಗಳು:**	ಸಾಂಪ್ರದಾಯಿಕವಾದ ಜಿ.ಐ. ಲ್ಯಾಟೀಸ್ ಮಾದರಿಯ ಗೋಪುರಗಳ ಮೇಲೆ ಲಿಂಕ್ಸ್ ವಾಹಕವನ್ನು ಉಪಯೋಗಿಸಿ, ಸುಮಾರು 3.9 ಕಿ.ಮೀ. ಉದ್ದದ 110 ಕೆವಿ ದ್ವಿ ಪ್ರಸರಣಾ ವಿದ್ಯುತ್ ಮಾರ್ಗದ ನಿರ್ಮಾಣ.
3.	**ಹಾದು ಹೋಗುವ ಪ್ರದೇಶಗಳು:**	ಮಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಉತ್ತಮ ಗುಣಮಟ್ಟದ ಮತ್ತು ನಿರಂತರ ವಿದ್ಯುತ್ ಸರಬರಾಜಿನೊಂದಿಗೆ ಬೆಳೆಯುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸುವ ಸಲುವಾಗಿ ಕೈಗೊಳ್ಳಲಾದ ಈ ಪ್ರಸ್ತಾವಿತ ವಿದ್ಯುತ್ ಮಾರ್ಗವು 22 ಮೀಟರ್ ಕಾರಿಡಾರ್ ಅಗಲವನ್ನು ಹೊಂದಿದ್ದು, ಮಂಗಳೂರು ತಾಲ್ಲೂಕಿನ ಈ ಕೆಳಗಿನ ಪ್ರದೇಶಗಳಲ್ಲಿ ಹಾದುಹೋಗುತ್ತದೆ. ಪ್ರಸ್ತಾವಿತ ವಿದ್ಯುತ್ ಪ್ರಸರಣಾ ಮಾರ್ಗವು ಕಾವೂರು, ಕುಂಜತ್ತಬೈಲು, ಪಂಜಿಮೊಗರು, ಕೂಳೂರು, ಪಣಂಬೂರು (M.C.F. Tapping Point) ಪ್ರದೇಶಗಳಲ್ಲಿ ಹಾದು M.C.F. Tapping Point ನಿಂದ 110/33/11 ಕೆವಿ ಬೈಕಂಪಾಡಿ ವಿದ್ಯುತ್ ಉಪಕೇಂದ್ರದವರೆಗೆ ಹಾಲಿ ಇರುವ 110 ಕೆವಿ ದ್ವಿ ಪ್ರಸರಣಾ ವಿದ್ಯುತ್ ಮಾರ್ಗದ ಪಥವನ್ನು ಸೇರಿಕೊಳ್ಳುತ್ತದೆ.
4.	**ವಿದ್ಯುತ್ ಪ್ರಸರಣಾ ಮಾರ್ಗದ ಅಂದಾಜು ಮೌಲ್ಯ**	ಸಾಮಗ್ರಿ, ಲೇಬರ್ ಹಾಗೂ ಸಿವಿಲ್ ವೆಚ್ಚ ಸೇರಿಸಿ ಅಂದಾಜು 473.16 ಲಕ್ಷ ರೂಪಾಯಿಗಳು.

ಮೇಲೆ ತಿಳಿಸಿರುವ ಯೋಜನೆಯನ್ನು ಕಾರ್ಯಗತಗೊಳಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು, ಭಾರತೀಯ ಟೆಲಿಗ್ರಾಫಿಕ್ ಕಾಯಿದೆ 1885 ಅಧಿನಿಯಮ ಭಾಗ-IIIರ ಅನ್ವಯ ಟೆಲಿಗ್ರಾಫ್ ಪ್ರಾಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಮೇಲಿನ ಪ್ರಸ್ತಾವಿತ ಯೋಜನೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ನಿಗಮದ ಪರಿಗಣನೆಗಾಗಿ/ ಅವುಗಳ ನಿವಾರಣೆಗಾಗಿ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ ಹದಿನೈದು ದಿನಗಳೊಳಗಾಗಿ ಈ ಕೆಳಗಿನ ಕಛೇರಿಗೆ ಕಳುಹಿಸುವುದು.

ಕಾರ್ಯನಿರ್ವಾಹಕ ಇಂಜಿನೀಯರ್ (ವಿದ್ಯುತ್),
ಬೃಹತ್ ಕಾಮಗಾರಿ ವಿಭಾಗ, ಕ.ವಿ.ಪ್ರ.ನಿ.ನಿ.
ಕಾವೂರು, ಮಂಗಳೂರು-15.

ಪಿಡಿ-86

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ನಿಯಮ 441, ದಾವಾ ಪಂಚಾಯ್ತಿ ನ್ಯಾಯಾಲಯ, ಅಮಾನತ್ ಹೌಸ್, ಶಿವಾಜಿನಗರ, ಬೆಂಗಳೂರು

ದಾವಾ ನಂ.ಜೆ.ಆರ್.ಡಿ./ಎ.ಸಿ.ಬಿ./111/07-08

ವಾದಿ ವಿರುದ್ಧ ಪ್ರತಿವಾದಿ

1) General Manager,
Amanath Co-operative Bank Ltd., No.43,
Hospital Road, Shivajinagar, Bangalore.

ವಿರುದ್ಧ

1) M/s PHR DEVELOPERS
Represented by Its Partners
a. Irfan Razack,
b. Rizwan Razack
c. Ayesha Rahman
No.1, Falcon House, Main Guard Cross Road,
Bangalore-560001.

2) Mr. K. Rahman Khan
No.200/c, 7th Main, 3rd Block, Jayanagar,
Bangalore-560011.

3) Mr. Ziaulla Sharieff
S/o Late Gaffar Sharieff,
A-1, Barkha, Golden Enclave,
Bangalore-560071.

4) Mr. Azeez Mohamed
S/o Mohamed Adam, M.D. Sons, No.4, B Block,
Sri Balaji Complex, No.125, Sultanpet,
Bangalore-560053.

5) Mr. S.S. Peeran S/o S.M. Peer
No.22, Albert Road Cross, Behind Bank of India,
Richmond Town, Bangalore-560025.

6) Mr. Sadath Ali Khan
S/o Late B.M. Sana Khan
Farah Builders Private Ltd.,
No.30/1, Vittal Mallya Road, Bangalore-1.

7) Mrs. Jameela Khaleel
W/o Late M.R. Khaleel
No.18/3, Arnee Road, Shantinagar,
Bangalore-560027.

8) Mr. Mohamed Ateeq Ahmed
S/o Abdul Gafoor,
No.23, F-Street, Cleveland Town,
Bangalore-560005.

9) Mr. Mohamed Asadulla
S/o Mohamed Yousuff,
No.1022/47, 38th Cross, 4th T Block, Jayanagar,
Bangalore-560011.

10) Mr. Maqsood Ali Khan
S/o K. Rahaman Khan,
No.200/c, 7th Main, 3rd Block,
Jayanagar, Bangalore.

11) Mr. Ayub Khan
1 Floor, Leonardo Lane, Richmond Town,
Bangalore-560025.

ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103ರ ಅಡಿಯಲ್ಲಿ ಸ್ಥಿರಾಸ್ತಿಗಳ ಜಪ್ತಿ ಪೂರ್ವ ಆದೇಶ

ಮೇಲ್ಕಂಡ ದಾವೆಯನ್ನು ವಾದಿ ಬ್ಯಾಂಕ್ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70ರ ಅಡಿಯಲ್ಲಿ ಪ್ರತಿವಾದಿಯಿಂದ ಬರಬೇಕಾಗಿರುವ ರೂ.38,88,76,000/–ಗಳನ್ನು ವಾರ್ಷಿಕ ಶೇಕಡಾ 18% ಬಡ್ಡಿ ಹಾಗೂ ಶೇಕಡಾ 2% ರಂತೆ ಸುಸ್ತಿ: ದಂಡದ ಬಡ್ಡಿಯೊಂದಿಗೆ ದಿನಾಂಕ:22.04.2008ರಿಂದ ಪೂರ್ತ ವಸೂಲಿಮಾಡುವ ಸಲುವಾಗಿ ಹೂಡಿರುವ ವ್ಯಾಜ್ಯವಾಗಿರುತ್ತದೆ.

ವಾದಿ ಬ್ಯಾಂಕು ಕಲಂ 103 ರ ಅಡಿ ಅರ್ಜಿಯನ್ನು ಸಲ್ಲಿಸಿ ಈ ದಾವೆಯಲ್ಲಿ ಪ್ರತಿವಾದಿಗಳ ವಿರುದ್ಧ ಹೊರಡಿಸಬಹುದಾದ ಯಾವುದೇ ನಿರ್ಣಯವನ್ನು/ ಆದೇಶವನ್ನು ಅಥವಾ ಅವಾರ್ಡನ್ನು ಸದರಿಯವರು ವಿಳಂಬಗೊಳಿಸುವ ಅಥವಾ ಅದರ ಜಾರಿಗೆ ಅಡ್ಡಿಯನ್ನುಂಟು ಮಾಡುವ ಉದ್ದೇಶದಿಂದ ಷೆಡ್ಯೂಲ್‌ನಲ್ಲಿ ನಮೂದಿಸಿರುವಂತೆ ಪ್ರತಿವಾದಿಗಳಿಗೆ ಸೇರಿದ ಸ್ಥಿರಾಸ್ತಿಯನ್ನು ವರ್ಗಾವಣೆ/ ಪರಭಾರೆ ವಿಲೇವಾರಿ ಮಾಡಬಹುದೆಂದು ಮನವರಿಕೆಯಾಗಿದ್ದು ಸದರಿ ಅರ್ಜಿಯನ್ನು ಪ್ರತಿವಾದಿಗಳಿಗೆ ಜಾರಿಗೊಳಿಸಿದೆ.

ವಾದಿ ಬ್ಯಾಂಕು ಮುಂದುವರೆದು ಪ್ರತಿವಾದಿಗಳ ಮೇಲ್ಕಂಡ ಕ್ರಮವನ್ನು ತಡೆಗಟ್ಟದಿದ್ದಲ್ಲಿ ಅವರ ವಿರುದ್ಧ ವಾದಿ ಬ್ಯಾಂಕು ಅವಾರ್ಡ್: ಡಿಕ್ರಿ ಪಡೆದರೂ ಅದನ್ನು ಜಾರಿಗೊಳಿಸಿ ಹಣ ವಸೂಲಿ ಮಾಡಲು ಯಾವುದೇ ದ್ರವ್ಯಾನುಕೂಲತೆ ಇಲ್ಲದಂತಾಗುತ್ತದೆ ಎಂದು ತಿಳಿಸಿರುತ್ತಾರೆ. ವಾದಿ ಬ್ಯಾಂಕು ದಿನಾಂಕ:04.03.2010ರಂದು ಅಫಿಡವಿಟ್‌ನ್ನು ಸಲ್ಲಿಸಿ, ಪ್ರತಿವಾದಿ 1(ಸಿ) ರವರ ಷೆಡ್ಯೂಲ್ ಆಸ್ತಿಯನ್ನು ಮೋಸ ಮಾಡುವ ಉದ್ದೇಶದಿಂದ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾರೆ ಮತ್ತು ಈ ವಿಷಯವನ್ನು 2ನೇ ಪ್ರತಿವಾದಿಯವರ ಪರಿಸರದಲ್ಲಿರುವ ರಿಯಲ್ ಎಸ್ಟೇಟ್ ಏಜೆಂಟ್ ರವರಿಂದ ತಿಳಿದು ಬಂದಿರುವುದಾಗಿ ತಿಳಿಸಿರುತ್ತಾರೆ. ಪ್ರತಿವಾದಿಗಳ ಷೆಡ್ಯೂಲ್ ಆಸ್ತಿಗಳು ವಿಲೇವಾರಿಯಾದಲ್ಲಿ, ಪ್ರತಿವಾದಿಗಳ ವಿರುದ್ಧ ಮಾಡಲ್ಪಡಬಹುದಾದ ಯಾವುದೇ ಆದೇಶ: ಡಿಕ್ರಿಯನ್ನು ನಿಷ್ಕ್ರಿಯಗೊಳಿಸಿದಂತೆ: ವಿಳಂಬಗೊಳಿಸಿದಂತಾಗುತ್ತದೆ ಎಂಬುದು ನನಗೆ ಪೂರ್ಣವಾಗಿ ಮನವರಿಕೆಯಾಗಿರುತ್ತದೆ. ಮಧ್ಯಂತರ ಅರ್ಜಿಯ ಬಗ್ಗೆ ವಾದಿ ಮತ್ತು ಪ್ರತಿವಾದಿಗಳ ವಕೀಲರ ವಾದವನ್ನು ಕೇಳಿದ ನಂತರ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಆದೇಶ

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 103 ಹಾಗೂ ಸರ್ಕಾರದ ಅಧಿಸೂಚನೆ ನಂ. ಸಿ.ಎಂ.ಡಬ್ಲ್ಯೂ/123/ಸಿ.ಎಲ್.ಎಂ./2007, ಬೆಂಗಳೂರು, ದಿನಾಂಕ:14.09.2007ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ, ಎಸ್.ಆರ್. ದೇವಪ್ಪ, ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ನಿಯಮ 441, ದಾವಾ ಪಂಚಾಯಿತಿ ನ್ಯಾಯಾಲಯ, ಅಮಾನತ್ ಹೌಸ್, ಶಿವಾಜಿನಗರ, ಬೆಂಗಳೂರು ಆದ ನಾನು, ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರತಿವಾದಿಗಳ ಸ್ಥಿರಾಸ್ತಿಗಳನ್ನು ಷರತ್ತಿಗೊಳಪಟ್ಟು ಜಪ್ತಿ ಮಾಡಿಕೊಳ್ಳಲು ಆದೇಶ ಪೂರ್ವ ಜಪ್ತಿ ಆದೇಶವನ್ನು ಈ ಮೂಲಕ ಹೊರಡಿಸಿರುತ್ತೇನೆ.

ಪ್ರತಿವಾದಿಗಳ ಮೇಲ್ಕಂಡ ಆದೇಶ ಪೂರ್ವ ಜಪ್ತಿ ಆದೇಶವನ್ನು ತೆರವು ಮಾಡಿಕೊಳ್ಳಲು ಇಚ್ಛಿಸಿದಲ್ಲಿ ಅರ್ಜಿದಾರರ ಬೇಡಿಕೆ ಮೊತ್ತಕ್ಕೆ ಸರಿಸಮವಾಗಿ ಸೂಕ್ತ ಭದ್ರತೆಯನ್ನು ಈ ನ್ಯಾಯಾಲಯಕ್ಕೆ ಒಪ್ಪಿಗೆಯಾಗುವಂತೆ ಅಥವಾ ದಾವಾ ಮೊತ್ತ ರೂ.38,88,76,000/–ಗಳನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿಯಮ 441, ದಾವಾ ಪಂಚಾಯಿತಿ ನ್ಯಾಯಾಲಯ, ಅಮಾನತ್ ಹೌಸ್, ಶಿವಾಜಿನಗರ, ಬೆಂಗಳೂರು ಇವರ ಪಿ.ಡಿ. ಖಾತೆಗೆ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿ., ಸೆಂಟ್ರಲ್ ಸ್ಟ್ರೀಟ್, ಶಿವಾಜಿನಗರ, ಬೆಂಗಳೂರು, ಇದರಲ್ಲಿ ದಿನಾಂಕ:31.07.2010 ರೊಳಗೆ ಠೇವಣಿಸಿ ಮೂಲ ಚಲನ್‌ನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸುವುದು. ತಪ್ಪಿದಲ್ಲಿ ಈ ಬಗ್ಗೆ ನಿಮ್ಮ ಹೇಳಿಕೆ ಏನೂ ಇಲ್ಲವೆಂದು ಪರಿಗಣಿಸಿ, ಆದೇಶ ಮುನ್ನಾ ಜಪ್ತಿ ಆದೇಶವನ್ನು ಸ್ಥಿರೀಕರಿಸಲಾಗುವುದು. ಷೆಡ್ಯೂಲ್‌ನಲ್ಲಿನ ಸ್ಥಿರಾಸ್ತಿಗಳನ್ನು ಖರೀದಿಸುವವರು/ ಆಸ್ತಿಗಳನ್ನು ಹೊಂದುವವರು ಈ ಆದೇಶ ಪೂರ್ವ ಜಪ್ತಿ ಆದೇಶಕ್ಕೆ ಒಳಪಟ್ಟು ಮಾಡಿರುತ್ತಾರೆಂದು ತಿಳಿಯುವುದು.

ಷೆಡ್ಯೂಲ್- ಪ್ರತಿವಾದಿಗಳ ಆಸ್ತಿಗಳು

SCHEDULE- A

All that piece and parcel of Property bearing Survey No.272, Situated at Krishnarajapete Village, Kasaba Hobli, Krishnarajapete Taluk, Measuring 0.25 Guntas, in MR No.33/87-88, Katha No.3.

SCHEDULE- B

All that piece and parcel of Property bearing Survey No.273/1,, Situated at Krishnarajapete Village, Kasaba Hobli, Krishnarajapete Taluk, Measuring 4 Acre 21 Guntas, in MR No.33/87-88, Katha No.30.

SCHEDULE- C

All that piece and parcel of property bearing Survey No.273/2, Situated at Krishnarajapete Village, Kasaba Hobli, Krishnarajapete Taluk, Measuring 4 Acre 29 Guntas, in MR No.33/87-88, Katha No.3.

SCHEDULE- D

All that piece and parcel of property bearing Site No.16 in Survey No.9, 11, 12 & 13 of Vasanthapura & Survey No.14 of Bikashipura, Bangalore South Taluk, Bangalore, Measuring East to West 12.20 Meters and North to South 9.14 Meters and bounded on:

East: Road

West: Site No.76

North: Site No.15

South: Site No.17

As BDA Registration No. BDA-1-07513-2005-06 in CD Volume No.BDAD100.

SCHEDULE- E

All that piece and parcel of Property bearing Site No.302 Survey No.17 and 19/1, Situated at Jakkur Village Yalahankas Hobli, Bangalore North Taluk, Bangalore, Measuring 30x 40 Feet.

ಈ ಆದೇಶವನ್ನು ನನ್ನ ಸ್ವ ಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ:29.06.2010ರಂದು ಹೊರಡಿಸಿದೆ.

ಸಹಕಾರ ಸಂಘಗಳ ಜಂಟಿ ನಿಬಂಧಕರು (ನಿ.441),
ಪಿಡಿ-87 ದಾವಾ ಪಂಚಾಯಿತಿ ನ್ಯಾಯಾಲಯ, ಅಮಾನತ್ ಹೌಸ್,
ಶಿವಾಜಿನಗರ, ಬೆಂಗಳೂರು-01.

GOVERNMENT OF KARNATAKA

DIRECTORATE OF ECONOMICS AND STATISTICS, BANGALORE-1

Consumer Price Index Numbers For Industrial Workers

No. DES 24 PWX 2010 Month: April, 2010

State: Karnataka Base: 1987-88=100 Date :09-06-2010

Group/Sub-Group		Bellary	Bhadra-vathi	Davan gere	Dan deli	Gul barga	Hari har	Hassan	Man dya	Man galore	Rai chur	Tum kur
1		2	3	4	5	6	7	8	9	10	11	12
I.	FOOD: (a) Cereals & Products	665	626	662	549	537	574	581	671	513	659	686
Group/Sub-Group		Bellary	Bhadra-	Davan	Dan	Gul	Hari	Hassan	Man	Man	Rai	Tum

			vathi	gere	dali	barga	har		dya	galore	chur	kur
1	2	3	4	5	6	7	8	9	10	11	12	
	(b) Pulses & Products	625	658	706	819	631	686	713	615	672	769	667
	(c) Oil & Fats	312	293	298	303	297	309	292	322	252	305	278
	(d) Meat, Fish & Eggs	632	697	675	579	670	656	512	611	865	710	585
	(e) Milk & Products	402	405	468	437	423	469	427	495	407	444	383
	(f) Condiments & Spices	443	451	694	576	405	383	433	418	444	498	414
	(g) Vegetables & Fruits	516	495	591	612	468	469	571	429	462	417	620
	(h) Other Food	472	577	518	573	516	477	496	442	408	500	502
	FOOD GROUP INDEX	**545**	**552**	**597**	**554**	**500**	**511**	**517**	**563**	**522**	**572**	**551**
II.	Pan, Supari, Tobacco & Intoxicants	443	565	586	427	378	568	506	420	361	431	505
III.	Fuel & Light	407	383	462	526	463	400	387	455	336	603	319
IV.	Housing	100	100	100	100	100	100	100	100	100	100	100
V.	Clothing, Bedding & Footwear	276	276	312	393	334	257	428	498	258	590	233
VI.	**MISCELLANEOUS:** (a) Medical Care	663	815	402	437	359	253	456	415	322	426	242
	(b) Education, Recreation & Amusement	490	455	750	262	454	469	369	354	662	509	546
	(c) Transport & Communication	422	504	518	397	597	532	453	569	464	393	459
	(d) Personal Care & effects	332	336	369	338	403	307	332	326	350	305	318
	(e) Others	394	405	439	518	366	297	325	361	320	557	281
	Miscellaneous Group	452	444	481	395	417	342	372	364	412	449	350
	GENERAL INDEX	**445**	**442**	**483**	**459**	**410**	**399**	**431**	**459**	**426**	**500**	**383**
	To convert to Base 1960 Multiply by Linking Factor.	7.39	9.19	8.27	...	8.26	8.56	9.25	7.92	9.31	...	...

For Director.

Government of India

Ministry of Labour and Employment

Labour Bureau

'Cleremont', Shimla-171004

Dated:2nd June, 2010

CONSUMER PRICE INDEX NUMBERS OF INDUSTRIAL WORKERS ON BASE-2001=100

State: Karnataka Dated: Month/Year: 04/2010

Group/Sub-group	Bangalore	Belgaum	Hubli-Dharwar	Mercara	Mysore
1	2	3	4	5	6
Food Sub-Groups					
(a) Cereals & Products	201	196	197	187	196
(b) Pulses & Products	229	244	247	229	198
(c) Oils & Fats	171	152	166	158	158
(d) Meat, Fish & Eggs	213	219	214	189	213
(e) Milk & Milk Products	172	152	137	156	159
(f) Condiments & Spices	164	165	174	157	163
(g) Vegetables & Fruits	179	185	175	171	156
(h) Other Food	199	186	183	189	191
I. FOOD GROUP	193	188	187	184	183
II-Pan, Supari, Tobacco & Intoxicants	176	155	170	133	164
III-Fuel & Light Group	126	137	140	219	138
IV-Housing Group	191	179	207	113	191
V-Clothing, Bedding & Footwear	119	122	131	128	130
Miscellaneous Sub-groups:					
(a) Medical Care	158	159	143	171	140
(b) Education, Recreation & Amusement	143	146	158	152	119
(c) Transport & Communication	204	206	220	161	173
(d) Personal Care & effects	149	145	154	142	147
(e) Others Miscellaneous Itemes	180	152	170	172	175
VI. Miscellaneous Group	169	161	168	154	148
Centre Index	179	173	179	169	170

J.L. KAITH

ECONOMIC OFFICER.

PR-985

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣಕನ್ನಡ ಉಪವಿಭಾಗ-I, ಬೆಂದೂರ್‌ವೆಲ್, ಕಂಕನಾಡಿ, ಮಂಗಳೂರು-ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ/ಸಿಆರ್-16/10ಎಫ್, ದಿನಾಂಕ:27ನೇ ಮೇ, 2010

ಅರ್ಜಿದಾರರು: ವಿರುದ್ಧ **ಪ್ರತಿವಾದಿಗಳು:**

1) ಶ್ರೀಮತಿ ನಯನ, ದಿ: ದಿನೇಶ್ ಪೂಜಾರಿಯವರ ಮಡದಿ
2) ಕು: ತ್ರಿಶಾ, ದಿ: ದಿನೇಶ್ ಪೂಜಾರಿಯವರ ಮಗಳು.
3) ಸಂಜೀವ ಪೂಜಾರಿಯವರ ಮಗ
4) ಶ್ರೀಮತಿ ಅಪ್ಪಿ
ಸಂಜೀವ ಪೂಜಾರಿಯವರ ಮಡದಿ.
ಮನೆ: ಸುಭಾಷ್‌ನಗರ, ಕಾರ್ಕಳ, ಉಡುಪಿ ತಾಲ್ಲೂಕು.

1) ಭಾಸ್ಕರ ಡಿ. ಪೂಜಾರಿ
ದಿ. ದಾದು ಪೂಜಾರಿಯವರ ಮಗ.
1/4/22 ಕುಂಜಿಬೆಟ್ಟು ಅಂಚೆ, ಉಡುಪಿ ಜಿಲ್ಲೆ.
2) ಶಾಖಾಧಿಕಾರಿಗಳು, ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪೆನಿ ಲಿಮಿಟೆಡ್, ರಾಮಭವನ ಕಾಂಪ್ಲೆಕ್ಸ್, ಕೊಡಿಯಾಲ್ ಬೈಲ್, ಮಂಗಳೂರು.

ಅಧಿಸೂಚನೆ

ಅರ್ಜಿದಾರಳಾದ ಶ್ರೀಮತಿ ನಯನ ಇವರು ತಮ್ಮ ಗಂಡನಾದ ಶ್ರೀ ಮೃತ ದಿನೇಶ್ ಪೂಜಾರಿ ಇವರು 1ನೇ ಪ್ರತಿವಾದಿಗಳಾದ ಶ್ರೀ ಕೆ.ಎಂ. 20-3474 ಲಾರಿಯಲ್ಲಿ ಕ್ಲೀನರ್ ಹಾಗೂ ಲೋಡರ್ ಆಗಿ ಇವರಲ್ಲಿ ಕೆಲಸಗಾರರಾಗಿದ್ದು ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:29.01.2010 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮು ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಡಿ.ಜಿ. ನಾಗೇಶ
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ
ಉಪವಿಭಾಗ-1, ಮಂಗಳೂರು.

ಪಿಆರ್-877

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣಕನ್ನಡ ಉಪವಿಭಾಗ-I, ಬೆಂದೂರ್‌ವೆಲ್, ಕಂಕನಾಡಿ, ಮಂಗಳೂರು-ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ/ಸಿಆರ್-15/10-11ಎಫ್, ದಿನಾಂಕ:27ನೇ ಮೇ, 2010

ಅರ್ಜಿದಾರರು: ವಿರುದ್ಧ **ಪ್ರತಿವಾದಿಗಳು:**

1) ಶ್ರೀ ನರೇಶ್ ಚೌದರಿ
2) ಸುಮಿತ್ರ ದೇವಿಚೌದರಿ W/o ನರೇಶ್ ಚೌದರಿ
ವಾಸ: 365, ಟಿಲಕ್ ಟೌನ್ & ಗ್ರಾಮ, ಕರ್ಯೆತ್, ಅಂಚಲ್ ಸಾರಸಮ್ ಜಿಲ್ಲೆ, ರೋಹ್‌ತಾಸ್, ಬಿಹಾರ ಜಿಲ್ಲೆ.

ಮೆ: ಬಿ.ಜಿ. ಸಿರ್ಕೆ ಕನ್‌ಸ್ಟ್ರಕ್ಷನ್ ಟೆಕ್ನೋಲಜಿ ಪ್ರೈ.ಲಿ., (ಸಿವಿಲ್ ಡಿವಿಜನ್) ಎನ್‌ಐಟಿಕೆ ಕ್ಯಾಂಪಸ್, ಸುರತ್ಕಲ್ ಗ್ರಾಮ, ಮಂಗಳೂರು.

ಅಧಿಸೂಚನೆ

ಅರ್ಜಿದಾರನಾದ ಶ್ರೀ ನರೇಶ್ ಚೌದರಿ ಇವರು ತಮ್ಮ ಮಗನಾದ ಶ್ರೀ ದಿವಂಗತ ದೀಪಕ್ ಚೌದರಿ ಇವರು 1ನೇ ಪ್ರತಿವಾದಿಗಳಾದ ಮೆ: ಬಿ.ಜಿ. ಸಿರ್ಕೆ, ಕನ್‌ಸ್ಟ್ರಕ್ಷನ್ ಟೆಕ್ನೋಲಜಿ ಪ್ರೈ.ಲಿ., ಸಿವಿಲ್ ಡಿವಿಜನ್, ಸುರತ್ಕಲ್, ಮಂಗಳೂರು ಇವರಲ್ಲಿ ಸೇಫ್ಟಿ ಆಫೀಸರ್ ಕೆಲಸಗಾರರಾಗಿದ್ದು ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:30.04.2009 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮು ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಡಿ.ಜಿ. ನಾಗೇಶ
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ
ಉಪವಿಭಾಗ-1, ಮಂಗಳೂರು.

ಪಿಆರ್-878

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರಆಯುಕ್ತರು, ದಕ್ಷಿಣಕನ್ನಡ ಉಪವಿಭಾಗ-2, ಬೆಂದೂರ್‌ವೆಲ್ ವೃತ್ತ, ಕಂಕನಾಡಿ, ಮಂಗಳೂರು-2, ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ:ಎಸ್‌ಆರ್-6/ 2010ಎಫ್, ದಿನಾಂಕ:2ನೇ ಜೂನ್, 2010

ಅರ್ಜಿದಾರರು:

1) ಶ್ರೀಮತಿ ತಿಮ್ಮಕ್ಕ ಕೋಂ ದಿವಂಗತ ಶಿವಪ್ಪಗೌಡ, ಪ್ರಾಯ 56 ವರ್ಷ.

2) ಶ್ರೀ ನಾರಾಯಣ ಗೌಡ, ಬಿನ್ ದಿವಂಗತ ಶಿವಪ್ಪಗೌಡ, ಪ್ರಾಯ 34 ವರ್ಷ.

3) ಶ್ರೀ ಗಣೇಶಗೌಡ, ಬಿನ್ ದಿವಂಗತ ಶಿವಪ್ಪಗೌಡ, ಪ್ರಾಯ 26 ವರ್ಷ.

4) ಕು:ವಿನುತಾ.ಎ. ಬಿನ್ ದಿವಂಗತ ಶಿವಪ್ಪಗೌಡ, ಪ್ರಾಯ 22 ವರ್ಷ.

5) ಕು:ಸವಿತಾ ಬಿನ್ ದಿವಂಗತ ಶಿವಪ್ಪಗೌಡ, ಪ್ರಾಯ 20 ವರ್ಷ.

1 ರಿಂದ 5ನೇ ಅರ್ಜಿದಾರರೆಲ್ಲರೂ ಅರಿಪೆಕಟ್ಟೆ ಮನೆ, ನರಿಮೊಗ್ರು ಅಂಚೆ ಮತ್ತು ಗ್ರಾಮ, ಪುತ್ತೂರು ತಾಲ್ಲೂಕಿನಲ್ಲಿ ವಾಸ್ತವ್ಯವಿರುವುದಾಗಿದೆ.

ಪ್ರತಿವಾದಿಗಳು:

1) ಶ್ರೀ ಕೆ. ವಿಶ್ವನಾಯಕ್ ಬಿನ್ ಕೆ.ಆರ್. ನಾಯಕ. ಆಶಾರ್ವಾದ ಸಂಪೂಮನೆ, ಆಯಾಪು ಗ್ರಾಮ ಪುತ್ತೂರು ತಾಲ್ಲೂಕು.

ಪಾಲುದಾರರು: ಮೆ: ಶ್ರೀ ವೆಂಕಟೇಶ್ವರ ಸಾ ಮಿಲ್ಸ್ ಎಂಡ್ ವುಡ್ ಇಂಡಸ್ಟ್ರೀಸ್ ಸಂಪೂ, ಪುತ್ತೂರು ತಾಲ್ಲೂಕು.

2) ಶಾಖಾ ವ್ಯವಸ್ಥಾಪಕರು, ಓರಿಯಂಟಲ್ ಇನ್ಸೂರೆನ್ಸ್ ಕಂಪನಿ ಲಿ., ಬ್ರಾಂಚ್ ಆಫೀಸ್ ಕೃಷ್ಣಪ್ರಸಾದ್ ಬಿಲ್ಡಿಂಗ್ ಮುಖ್ಯರಸ್ತೆ, ಪುತ್ತೂರು-574201.

ಅಧಿಸೂಚನೆ

ಅರ್ಜಿದಾರರಾದ ಶ್ರೀಮತಿ ತಿಮ್ಮಕ್ಕ ಇವರು ತಮ್ಮ ಗಂಡನಾದ ಶ್ರೀ ದಿವಂಗತ ಶಿವಪ್ಪಗೌಡ ಇವರು 1ನೇ ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:04.05.2010 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ತಿಳಿಸಿ, ಅವಲಂಬಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮು ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಹೆಚ್. ಗೋಪಾಲಗೌಡ
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ
ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ
ಉಪವಿಭಾಗ-2, ಮಂಗಳೂರು.

ಪಿಆರ್-879

IN THE COURT OF COMMISSIONER FOR WORKMEN'S COMPENSATION, BIDAR

No. LOB/WCA/Cr-F-18/2010

Applicants: **V/s** **Respondents:**

1) Babu Rao S/o Shankarappa Kalyane, Age: 38 Yrs.
Occu: Nil R/o Shahi colony, Taluk Bhalki, District, Bidar.

1) Vaijinath S/o Narsappa Methare, Age: Major, Occu: Agri. & Business, R/o 165, Tq Bhalki, Dist: Bidar.
2) Sriram G.I.Co. Ltd., Sitapur, Jaipur, Rajasthan.

PROCLAIMATION

Sri Babu Rao F/o. S/o Vijayakumar R/o Shahi colony, Taluka Bhalki, District: Bidar have/has filed application in this Court claiming compensation stating that Late: Vijayakumar was working as Driver Under the Respondent No.I he met with an accident arising out of and during the course of employment as a result he died on 18.01.10.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the Court will proceeded further in the matter.

Commissioner for workmen's
Compensation, Bidar.

PR-896

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ, ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

ಪ್ರ.ಸಂಖ್ಯೆ:ಕಾಅದಾ:ಕಾನಪ:ಸಿಆರ್–45/10, ದಿನಾಂಕ:17ನೇ ಏಪ್ರಿಲ್, 2010

ಅರ್ಜಿದಾರರು: **ಪ್ರತಿವಾದಿಗಳು:**

1) ಶ್ರೀಮತಿ ರತ್ನಮ್ಮ ಕೋಂ ಲೇಟ್ ದುರುಗಪ್ಪ
2) ಡಿ. ಮಂಜುನಾಥ ಬಿನ್ ಲೇಟ್ ದುರುಗಪ್ಪ, 25 ವರ್ಷ.
3) ಡಿ. ನಾಗರಾಜು ಬಿನ್ ಲೇಟ್ ದುರುಗಪ್ಪ, 23 ವರ್ಷ.
4) ಡಿ. ಜ್ಯೋತಿ ಬಿನ್ ಲೇಟ್ ದುರುಗಪ್ಪ, 22 ವರ್ಷ.
5) ಡಿ. ಪವನ್‌ಕುಮಾರ್ ಬಿನ್ ಲೇಟ್ ದುರುಗಪ್ಪ, 20 ವರ್ಷ.
6) ಡಿ. ಪ್ರವೀಣ್ ಕುಮಾರ್ ಬಿನ್ ಲೇಟ್ ದುರುಗಪ್ಪ, 18 ವರ್ಷ.
ಜೆ.ಸಿ.ಆರ್. ಬಡಾವಣೆ, ಜಗಳೂರು.

1) ಚೀಫ್ ಎಕ್ಸಿಕ್ಯೂಟಿವ್ ಇಂಜಿನಿಯರ್ (ಎಲೆಕ್ಟ್ರಿಕಲ್) (ಬೆಸ್ಕಾಂ) ಸಬ್ ಡಿವಿಜನ್, ಹದಡಿ ರಸ್ತೆ, ದಾವಣಗೆರೆ.
2) ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಬೆಸ್ಕಾಂ, (ಒ ಅಂಡ್ ಎಂ) ಸಬ್ ಡಿವಿಜನ್ ಆಫೀಸ್, ಜಗಳೂರು.

ಪ್ರಕಟಣೆ

ಶ್ರೀಮತಿ ರತ್ನಮ್ಮ ಡಿ. ಮಂಜುನಾಥ, ಡಿ. ನಾಗರಾಜು, ಡಿ. ಜ್ಯೋತಿ, ಡಿ. ಪವನ್‌ಕುಮಾರ್, ಡಿ. ಪ್ರವೀಣ್‌ಕುಮಾರ್ ಇವರುಗಳಾದ ನಾವು ಮೃತ ದುರುಗಪ್ಪ ಇವರ ಹೆಂಡತಿ ಮತ್ತು ಮಕ್ಕಳು ಎಂದೂ ಇವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ದುರುಗಪ್ಪ ರವರು ಒಂದನೇ ಪ್ರತಿವಾದಿಗಳಾದ ಚೀಫ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಇವರ ಬೆಸ್ಕಾಂ ರಲ್ಲಿ ಲೈನ್ ಮೆನ್ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದೂ, ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ

ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೇ, ಅಂತಹವರು ಪ್ರಕಟಣೆಯು ಈ ನ್ಯಾಯಾಲಯದಲ್ಲಿ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು, ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಎಸ್.ಸಿ. ರಾಮಚಂದ್ರ
ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು,
ಕಾರ್ಮಿಕ ನಷ್ಟ ಪರಿಹಾರ
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿಆರ್–897

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ, ನ್ಯಾಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ

ಪ್ರ.ಸಂಖ್ಯೆ:ಕಾಅದಾ:ಕಾನಪ:ಸಿಆರ್–56/10, ದಿನಾಂಕ:18ನೇ ಮೇ, 2010

ಅರ್ಜಿದಾರರು:

1) ಶ್ರೀ ಸಯ್ಯದ್ ಇಮಾಮ್ ಬಿನ್ ಲೇ: ಸಯ್ಯದ್ ಅಹಮದ್ ಸಾಬ್.

2) ಶ್ರೀಮತಿ ಮಮತಾಜ್ ಉನ್ನೀಸಾ ಕೋಂ ಸೈಯದ್ ಇಮಾಮ್,

3) ಫಾತೀಮಾ ನಿಹಾ ಬಿನ್ ಸೈಯದ್ ಇಮಾಮ್, 14 ವರ್ಷ.

4) ಸೈಯ್ಯದ್ ವಸೀಮ್ ಬಿನ್ ಸೈಯದ್ ಇಮಾಮ್, 12 ವರ್ಷ.

ಚನ್ನಿಕಟ್ಟೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಪ್ರತಿವಾದಿಗಳು:

1) ಮ್ಯಾನ್ಯೂಯಲ್ ಚೀಫ್ ಮೆ: ಜಿಯೋಕಾರ್ ಬಸ್ಸು ಮಾಲೀಕರು, ನಂ.ಕೆಎ–01 ಸಿ.3823 ರೆಂಟಲ್ ನಂ.503, 6ನೇ ಕ್ರಾಸ್, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034.

2) ಡಿವಿಜನಲ್ ಮ್ಯಾನೇಜರ್, ಓರಿಯಂಟಲ್ ಇನ್ಸೂರೆನ್ಸ್ ಕಂ.ಲಿ., 1/1 ಕನ್ನಿಂಗ್ಯಾಮ್ ರಸ್ತೆ, ಕ್ವೀನ್ಸ್ ರೋಡ್ ಕ್ರಾಸ್, ಬೆಂಗಳೂರು–560052.

ಪ್ರಕಟಣೆ

ಶ್ರೀ ಸೈಯದ್ ಇಮಾಮ್, ಮಮತಾಜ್ ಉನ್ನಿಸಾ, ಫಾತೀಮಾನಿಹಾ, ಸೈಯದ್ ವಸೀದ್ ಇವರುಗಳಾದ ನಾವು ಮೃತ ನಮೀದ್ ಇವರ ತಾಯಿ, ತಂದೆ ಮತ್ತು ಸಹೋದರರು ಎಂದೂ ಅವರ ಸಾವಿಗಾಗಿ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ನದೀಮ್ ರವರು ಒಂದನೇ ಪ್ರತಿವಾದಿಗಳಾದ ಮ್ಯಾನ್ಯೂಯಲ್ ಚೀಫ್ ಇವರ ಬಸ್ಸು ರಲ್ಲಿ ಕ್ಲೀನರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದೂ, ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೇ, ಅಂತಹವರು ಪ್ರಕಟಣೆಯು ಈ ನ್ಯಾಯಾಲಯದಲ್ಲಿ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು, ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಎಸ್.ಸಿ. ರಾಮಚಂದ್ರ
ಕಾರ್ಮಿಕ ಅಧಿಕಾರಿ ಮತ್ತು ಆಯುಕ್ತರು,
ಕಾರ್ಮಿಕ ನಷ್ಟ ಪರಿಹಾರ
ದಾವಣಗೆರೆ ಜಿಲ್ಲೆ, ದಾವಣಗೆರೆ.

ಪಿಆರ್–898

IN THE COURT OF COMMISSIONER FOR WORKMEN'S COMPENSATION, BIDAR

No. LOB/WCA/Cr-F-19/2010

Applicants: **V/s** **Respondents:**

1) Md. Osman S/o Md. Mahtab sab Wantewale, Age: 60 Yrs, Occu: Nil, R/o H.No.16-56 Zarpeth, Humnabad Dist: Bidar, Now at Maniyar Taleem, Bidar and 5 others.

1) Reliable Roadways Agency (Bombay) M/s Wajeeda Begum H.No.5-6-247/3 Cheshkhandi Aghapura, Hyderabad.

2) The Oriental Insurance Co.Ltd., PO Box No.II, IInd Floor 302 & 303 Oasis Plaza Tilak Road, Hyderabad

PROCLAIMATION

Sri Osman sab F/o. S/o Md. Mohsin R/o Zerpeth, Humnabad, District: Bidar have/has filed application in this Court claiming compensation stating that Late: Md. Mohsin was working as Driver Under the Respondent No.I he met with an accident arising out of and during the course of employment as a result he died on 22.12.2006.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the Court will proceeded further in the matter.

Commissioner for workmen's
Compensation, Bidar.

PR-903

IN THE COURT OF COMMISSIONER FOR WORKMEN'S COMPENSATION, BIDAR

No. LOB/WCA/Cr-F-17/2010

Applicants: V/s **Respondents:**

1) Sunderamma W/o Late Ghalappa, Age:60 Yrs. Occ: Nil, R/o Kottur (B) Tq: Zaheerabad, Dist: Medak.

1) Mallesham S/o Malliah, Age: Major Occu: Business, R/o H.No.2-2-850, Rathi Bowli Mehdipatnam, Hyderabad (AP).

2) The Manager, Oriental Insurance Company Ltd., SBO 5, Hyderabad (AP).

PROCLAIMATION

Sri/Smt: Sunderamma, W/o. F/o. S/o. Late Ghalappa, R/o. Kottur-B, Taluka Zaheerabad, District: Medak (A.P.) have/has filed application in this Court claiming compensation stating that Late: S. Ravi @ Ravindra was working as Driver Under the Respondent No.I he met with an accident arising out of and during the course of employment as a result he died on 26.05.2008.

Wherefore, it is hereby notified for the information of these concerned that other dependents if any may file their claim application and objections within 30 days from the date of publication of this proclaimation, if no applications on objections are received within the specified date the Court will proceeded further in the matter.

Commissioner for workmen's
Compensation, Bidar.

PR-904

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಪ್ರಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ವಿಭಾಗ-3, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560 029

ಪ್ರಕರಣ ಸಂಖ್ಯೆ: ಸಕಾಆಬೆಂ-3/ಪಿಜಿಎ/ಸಿಆರ್-7/08-09, ದಿನಾಂಕ:26ನೇ ಮೇ, 2010

ಉಪಸ್ಥಿತರು: ಬಾಲಕೃಷ್ಣ ಸಿ.ಹೆಚ್.

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆ 1972ರಡಿ ನಿಯಂತ್ರಣಾಧಿಕಾರಿ, ಬೆಂಗಳೂರು ವಿಭಾಗ-3, ಬೆಂಗಳೂರು.

ಅರ್ಜಿದಾರರು:

ಶ್ರೀಮತಿ ಬಿ. ನಾಗಮಂಜುಳ ಕೋಂ ಲೇಟ್
ಶ್ರೀ ಎಂ.ಎಸ್. ನಂಜುಂಡಪ್ಪ ಕೇರಾಫ್
ಎಂ.ಎಸ್. ಕೃಷ್ಣಪ್ಪ,
ಮನೆ ನಂ.135, 8ನೇ ಕ್ರಾಸ್, ಅಟ್ಟೂರು ಲೇಔಟ್,
ಯಲಹಂಕ, ಬೆಂಗಳೂರು-64.

ಪ್ರತಿವಾದಿಗಳು:

ಮೆಡಿಕಲ್ ಡೈರೆಕ್ಟರ್, ಮೆ: ಎಂ.ಎಸ್. ರಾಮಯ್ಯ ಟೀಚಿಂಗ್ ಹಾಸ್ಪಿಟಲ್, ಎಂಎಸ್ಆರ್ಐಟಿ ಅಂಚೆ, ಮತ್ತೀಕೆರೆ, ಬೆಂಗಳೂರು-54.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:19.05.2010 ರಂದು ಅರ್ಜಿ ಸಲ್ಲಿಸಿ, ಅವರ ಪತಿ ದಿನಾಂಕ:07.11.2009ರಂದು ಮರಣ ಹೊಂದಿದರೆಂದು ತಿಳಿಸುತ್ತಾ, ಅವರ ಪತಿ ಲೇಟ್ ಶ್ರೀ ಎಂ.ಎಸ್. ನಂಜುಂಡಪ್ಪ ಇವರ ಪ್ರತಿವಾದಿ ಸಂಸ್ಥೆಯಲ್ಲಿ ಸಲ್ಲಿಸಿರುವ 8 ವರ್ಷಗಳ ಸೇವೆಗೆ ಪ್ರತಿವಾದಿಗಳು ಈ ಕಛೇರಿಯಲ್ಲಿ ಇಟ್ಟಿರುವ ಉಪಧನ ಮೊತ್ತ ರೂ.12,970/–ಗಳನ್ನು ಬಿಡುಗಡೆ ಮಾಡುವುದರ ಮೂಲಕ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

ಸದರಿ ಪ್ರಕರಣದಲ್ಲಿ, ಪ್ರತಿವಾದಿಗಳು ಈ ಕಛೇರಿಯಲ್ಲಿ ಠೇವಣಿ ಇಟ್ಟಿರುವ ಉಪಧನ ಮೊತ್ತ ರೂ.12,970/–ಗಳನ್ನು ಮೇಲ್ಕಂಡ ಅರ್ಜಿದಾರರಿಗೆ ಬಿಡುಗಡೆ ಮಾಡುವ ಸಂಬಂಧ ಮೇಲೆ ಸೂಚಿಸಿರುವ ಅರ್ಜಿದಾರರ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯಪತ್ರದಲ್ಲಿ ಪ್ರಕಟಿಸಿದ 30 ದಿನದೊಳಗಾಗಿ ಅಂತಹ ಆಕ್ಷೇಪಣೆಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಬಾಲಕೃಷ್ಣ ಸಿ.ಹೆಚ್.
ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ
ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಗಳು,
ಬೆಂಗಳೂರು ವಿಭಾಗ–3, ಬೆಂಗಳೂರು.

ಪಿಆರ್–912

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ ಇವರ ನ್ಯಾಯಾಲಯದಲ್ಲಿ
ಸಂಖ್ಯೆ:ಡಬ್ಲ್ಯೂ.ಸಿ.ಎ./ಸಿ.ಆರ್.–16/ಎಫ್.ಸಿ./2010, ದಿನಾಂಕ:3ನೇ ಜೂನ್, 2010

ಅರ್ಜಿದಾರರು:

1) ಶ್ರೀಮತಿ ಕಮಲ (26 ವರ್ಷ)
W/o ಲೇಟ್ ಜಯ @ ಜಯಾನಂದ ನಾಯ್ಕ
2) ಪೃಥ್ವಿರಾಜ್ (01 ವರ್ಷ)
S/o ಲೇಟ್ ಜಯ @ ಜಯಾನಂದ ನಾಯ್ಕ
3) ಸಾಂತು ಬಾಯಿ (58 ವರ್ಷ)
W/o ಗೋಪಾಲ ನಾಯ್ಕ
4) ಗೋಪಾಲ ನಾಯ್ಕ (69 ವರ್ಷ)
S/o ಸುಕುಡಿ ನಾಯ್ಕ
ಎಲ್ಲಾ ವಾಸ: ಮಾರಿಕೋಡ್ಲು, ಬೆಳ್ವೆ ವಿಲೇಜ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.

ಪ್ರತಿವಾದಿಗಳು:

1) ಶ್ರೀ ಹೆಚ್. ತಾರಾನಾಥ ಶೆಟ್ಟಿ, S/o ವಿಠಲ್ ಶೆಟ್ಟಿ ವಾಸ: ಹಿಲಿಯಾನ ದೊಡ್ಡಮನೆ, ಹಿಲಿಯಾನ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
2) ದಿ ಓರಿಯಂಟಲ್ ಇನ್ಸೂರೆನ್ಸ್ ಕಂ.ಲಿ., ಬ್ರಾಂಚ್ ಆಫೀಸ್, ವಿಷ್ಣು ಪ್ರಕಾಶ್, 1ನೇ ಮತ್ತು 3ನೇ ಮಹಡಿ.

ಅಧಿಸೂಚನೆ

ಅರ್ಜಿದಾರರಾದ ಶ್ರೀಮತಿ ಕಮಲ ಇವರು ತಮ್ಮ ಗಂಡನಾದ ಲೇಟ್ ಜಯ @ ಜಯಾನಂದ ನಾಯ್ಕ ಇವರು 1ನೇ ಪ್ರತಿವಾದಿಯವರಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ:01.11.2009 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ, ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ, ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿವಸಗಳ ಒಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸುವುದೆಂದು ತಿಳಿಸಲಾಗಿದೆ.

ಎಂ. ಆನಂದಮೂರ್ತಿ
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ ಇವರ ನ್ಯಾಯಾಲಯದಲ್ಲಿ

ಸಂಖ್ಯೆ:ಡಬ್ಲ್ಯೂ.ಸಿ.ಎ./ಸಿ.ಆರ್.-17/ಎಫ್.ಸಿ./2010, ದಿನಾಂಕ:3ನೇ ಜೂನ್, 2010

ಅರ್ಜಿದಾರರು:

1) ಶ್ರೀಮತಿ @ ಸರೋಜವ್ವ (30 ವರ್ಷ)
W/o ಲೇಟ್ ಶೇಕಪ್ಪ ಬಿಂಗಪುರ.
2) ಗುಡ್ಡಯ್ಯ @ ಗುಡ್ಡಪ್ಪ (09 ವರ್ಷ)
S/o ಲೇಟ್ ಶೇಕಪ್ಪ ಬಿಂಗಪುರ.
3) ಭಾಗ್ಯ ಬಿಂಗಪುರ (07 ವರ್ಷ)
D/o ಲೇಟ್ ಶೇಕಪ್ಪ ಬಿಂಗಪುರ.
4) ಹನುಮಂತ ಬಿಂಗಪುರ (56 ವರ್ಷ)
S/o ನೀಲಪ್ಪ
5) ಉಡಚವ್ವ ಬಿಂಗಪುರ, (50 ವರ್ಷ)
W/o ಹನುಮಂತ ಬಿಂಗಪುರ.
ಎಲ್ಲಾ ವಾಸ: ಎಲ್ಲೂರು, ಹನಗಲ್ಲ ತಾಲ್ಲೂಕು, ಕಾಲ್ಗದ್ರಿ, ಹಾವೇರಿ.

ಪ್ರತಿವಾದಿಗಳು:

1) ಸಂದೀಪ್, ಪ್ರೊಪ್ರೈಟರ್, ಸಂದೀಪ್ ಅಸೋಸಿಯೇಟ್ಸ್, ಕಂನ್ಸಲ್ಟೆಂಟ್ ಇಂಜಿನೀಯರ್, ಮಣಿಪಾಲ.

ಅಧಿಸೂಚನೆ

ಅರ್ಜಿದಾರರಾದ ಶ್ರೀಮತಿ ಕಮಲ ಕಮಲವ್ವ @ ಸರೋಜವ್ವ ಇವರು ತಮ್ಮ ಗಂಡನಾದ ಲೇಟ್ ಶೇಕಪ್ಪ ಬಿಂಗಪುರ ಇವರು 1ನೇ ಪ್ರತಿವಾದಿಯವರಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ ದಿನಾಂಕ:18.02.2010 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ, ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ, ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿವಸಗಳ ಒಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸುವುದೆಂದು ತಿಳಿಸಲಾಗಿದೆ.

ಎಂ. ಆನಂದಮೂರ್ತಿ
ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಉಡುಪಿ ಜಿಲ್ಲೆ, ಉಡುಪಿ.

ಪಿ.ಆರ್.913

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಉಪವಿಭಾಗ-3, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಐ.ಟಿ.ಐ. ಆವರಣ, ಬೆಂಗಳೂರು-560 029

ಪ್ರಕರಣ ಸಂಖ್ಯೆ:ಸಿಡಬ್ಲ್ಯೂಸಿ:ಎಫ್‌ಸಿ/ಸಿಆರ್-19/10, ದಿನಾಂಕ:31ನೇ ಮೇ, 2010

ಅರ್ಜಿದಾರರು:

1) ಶ್ರೀಮತಿ ಎಸ್. ಕಾಂತಮ್ಮ,
W/o ಲೇಟ್ ಬಿ.ನಾಗರಾಜ
2) ಶ್ರೀ ಎನ್. ನಾಗೇಶ, S/o ಲೇಟ್ ಬಿ.ನಾಗರಾಜ.
3) ಶ್ರೀ ದಿಲೀಪ್‌ಕುಮಾರ್, S/o ಲೇಟ್ ಬಿ. ನಾಗರಾಜ
4) ಶ್ರೀಮತಿ ನಾರಾಯಣಮ್ಮ,
W/o ಲೇಟ್ ಬೀರಪ್ಪ.
ಎಂ.ವ್ಹಿ.ನಗರ, ಹೊಸಕೋಟೆ.

ಪ್ರತಿವಾದಿಗಳು:

1) ಚೀಫ್ ಎಕ್ಸಿಕ್ಯೂಟಿವ್ ಆಫೀಸರ್, ಲಾನ್‌ಕೋ ಇನ್‌ಫ್ರಾಟೆಕ್ ಲಿ., ನಂ.141, ಬಂಜಾರ ಹಿಲ್ಸ್, ಹೈದರಾಬಾದ್-34.
2) ಪ್ರೋಜೆಕ್ಟ್ ಮ್ಯಾನೇಜರ್,
ಲಾನ್‌ಕೋ ಪ್ರೋಜೆಕ್ಟ್ ಲಿ., ಚಲುವನಹಳ್ಳಿ ವಿಲೇಜ್, ಅರಬಿಕೇತನೂರ, ಕೋಲಾರ.

ಪ್ರಕಟಣೆ

ಅರ್ಜಿದಾರರಾದ ಎಸ್. ಕಾಂತಮ್ಮ ಇವರುಗಳು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, ದಿವಂಗತ ನಾಗರಾಜ ಇವರು ಪ್ರತಿವಾದಿ 2 ಇವರ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಅಪಘಾತ ಹೊಂದಿ ಮೃತಪಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಅಲ್ಲದೆ ತಾವು ಮೃತರ ಅವಲಂಬಿತರಾದ್ದರಿಂದ ತಮಗೆ ಕಾಯ್ದೆಯನ್ವಯ ಪರಿಹಾರದ ಹಣವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಕೋರಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದೇನೆಂದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನದೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮು ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಉಪವಿಭಾಗ-3, ಬೆಂಗಳೂರು.

ಪಿ.ಆರ್.917

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-1, ಬಳ್ಳಾರಿ

ಪ್ರಕರಣ ಸಂಖ್ಯೆ:ಕಾನಪ:90:2010, ದಿನಾಂಕ:3ನೇ ಜೂನ್, 2010

ಅರ್ಜಿದಾರರು:

1) ಶ್ರೀಮತಿ ಶಿವಮ್ಮ ಗಂ: ಲೇಟ್ ರಾಮಕೃಷ್ಣ, ವಯಸ್ಸು:28 ವರ್ಷ. ವೃತ್ತಿ: ಕೂಲಿ (ಮೃತನ ಹೆಂಡತಿ)
2) ಚಿ. ಲಕ್ಷ್ಮಿ ತಂ: ಲೇಟ್ ರಾಮಕೃಷ್ಣ, ವಯಸ್ಸು:10 ವರ್ಷ, (ಮೃತನ ಮಗಳು)
ವಾಸ: ಮುಪ್ಪಲಕುಂಟೆ ಗ್ರಾಮ, ಬ್ರಹ್ಮ ಸಮುದ್ರಮ್‌ಮಂಡಲಂ,
ಪ್ರಸ್ತುತ ಈರ್ವರ ವಾಸ: ಪಾವಿನಾಯಕನಹಳ್ಳಿ, ಹೊಸಪೇಟೆ (ತಾ).

ವಿರುದ್ಧ

ಪ್ರತಿವಾದಿಗಳು:

1) ಡಿ. ರಾಮ್‌ಕುಮಾರ್ ತಂ: ಡಿ.ಪುಲ್ಲಯ್ಯ ನಾಯ್ಡು, ಲಾರಿ ಸಂ:ಕೆಎ-34-9545, ಪ್ಲಾಟ್ ನಂ.48, 2ನೇ ಕ್ರಾಸ್, ವೆಂಕಟೇಶ್ವರ ನಗರ, ಅನಂತಪುರ ರೋಡ್, ಬಳ್ಳಾರಿ.
2) ದಿ ಮ್ಯಾನೇಜರ್ ಐ.ಸಿ.ಐ.ಸಿ.ಐ. ಲೋಂಬಾರ್ಡ್ ಜನರಲ್ ಇನ್ಸೂರೆನ್ಸ್ ಕಂ.ಲಿ., ಬಳ್ಳಾರಿ.

ಪ್ರಕಟಣೆ

ಶ್ರೀಮತಿ ಶಿವಮ್ಮ ಮತ್ತು ಚಿ. ಲಕ್ಷ್ಮಿ ಇವರು ಮೃತ ರಾಮಕೃಷ್ಣನಿಗೆ ಹೆಂಡತಿ ಹಾಗೂ ಮಗಳಾಗಬೇಕೆಂದು, ರಾಮಕೃಷ್ಣನು 1ನೇ ಪ್ರತಿವಾದಿಗಳ ಲಾರಿಯಲ್ಲಿ ದಿನಾಂಕ:08.02.2010ರಂದು ಕ್ಲೀನರ್ ಕೆಲಸ ಮಾಡುತ್ತಿದ್ದಾಗ ತೀವ್ರತರದ ಅಪಘಾತಕ್ಕೆ ಈಡಾಗಿ ಮೃತಪಟ್ಟಿರುತ್ತಾನೆಂದು, ಅಪಘಾತ ಪೂರ್ವದಲ್ಲಿ ಆರೋಗ್ಯವಾಗಿದ್ದು ಚೆನ್ನಾಗಿ ಸಂಪಾದನೆ ಮಾಡಿ ಬಂದ ಹಣದಲ್ಲಿ ತನ್ನ ಹಾಗೂ ನಮ್ಮಗಳ ಜೀವನ ನಿರ್ವಹಣೆ ಮಾಡುತ್ತಿದ್ದನೆಂದು, ಈಗ ಆತನ ಮರಣದಿಂದ ತಮ್ಮ ಕುಟುಂಬ ಜೀವನ ಸಾಗುವುದು ತುಂಬಾ ಕಷ್ಟಕರವಾಗಿರುತ್ತದೆಂದು ತಿಳಿಸಿ ಈ ನ್ಯಾಯಾಲಯದಲ್ಲಿ ಒಂದು ದಾವಾ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧವಾಗಿ ಬೇರೆಯಾರಾದರೂ ತಾವು ಮೃತನ ಸಂಬಂಧಿಕರೆಂದು ಹಾಗೂ ವಾರಸುದಾರರೆಂದು ಪರಿಗಣಿಸಬೇಕೆಂದು ಕೋರಿದಲ್ಲಿ ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದಲ್ಲಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ಹೊರ ಮುದ್ರಣಾಲಯದಲ್ಲಿ ಪ್ರಕಟಣೆಗೊಂಡ ಒಂದು ತಿಂಗಳೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಸಿ.ಹೆಚ್. ಹಿರೇಗೌಡರ್
ಕಾರ್ಮಿಕಾಧಿಕಾರಿ ಮತ್ತು
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಬಳ್ಳಾರಿ ಉಪವಿಭಾಗ-1, ಬಳ್ಳಾರಿ.

ಪಿ.ಆರ್.928

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಪ್ರಕಟಣೆ

ಸಂಖ್ಯೆ:ಕಾ.ನಿ.ಇ/ಬೃ.ಕಾ.ದ.ವಿಭಾಗ/ಸಕಾಇಂ-1/10-11/1646-48, ದಿನಾಂಕ:3ನೇ ಜುಲೈ, 2010

ಕವಿಪ್ರನಿನಿಯು 2003ರ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮ ಪ್ರಕರಣದ 67(ii)ರ ಅನ್ವಯ ಯೋಜನೆಗಳನ್ನು ರೂಪಿಸಿದೆ ಹಾಗೂ ಸದರಿ ನಿಯಮದ ಪ್ರಕರಣ 67(ii)ಸಿ ರ ಅನ್ವಯ ಈ ಮೂಲಕ ಯೋಜನೆಗಳನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಪ್ರಕಟಿಸುತ್ತಿದೆ. ಯೋಜನೆಯ ವಿವರಗಳು ಈ ರೀತಿ ಇವೆ.

(1) ಯೋಜನೆಯ ಹೆಸರು: ಬೆಂಗಳೂರಿನ ವಿಕಾಸ್ ಟೆಕ್ನಿಕಲ್ ಪಾರ್ಕ್‌ನಲ್ಲಿ 2x150 ಎಂ.ವಿ.ಎ., 220/66/11 ಕೆ.ವಿ. ಉಪಕೇಂದ್ರದ ನಿರ್ಮಾಣ ಮತ್ತು ಹಾಲಿ ಇರುವ 220 ಕೆ.ವಿ., ಸೋಮನಹಳ್ಳಿ- ಮಾಲೂರು ಮಾರ್ಗಗಳ ಮಾರ್ಗದಿಂದ ಉದ್ದೇಶಿತ ವಿಕಾಸ್ ಟೆಕ್ನಿಕಲ್ ಪಾರ್ಕ್ ದೇವರಬೀಸನಹಳ್ಳಿಯ 220/66/11 ಕೆ.ವಿ., ಉಪಕೇಂದ್ರದ ವರೆಗಿನ 4.6 ಕಿ.ಮೀ. ಉದ್ದದ ಲಿಲೋ ಮಾರ್ಗದ ನಿರ್ಮಾಣ.

(2) ಪ್ರಮುಖ ಲಕ್ಷಣಗಳು: ಹಾಲಿ ಹೆಚ್.ಎಸ್.ಆರ್. ಲೇಔಟ್‌ನಲ್ಲಿರುವ 220/66 ಕೆ.ವಿ., ಉಪಕೇಂದ್ರದಿಂದ ವಿದ್ಯುತ್ ಸರಬರಾಜು ಆಗುತ್ತಿರುವ ಪ್ರದೇಶಗಳಾದ ಕಾಡುಬೀಸನಹಳ್ಳಿ, ಶೋಭಾ ಅಪಾರ್ಟ್‌ಮೆಂಟ್, ದೇವರಬೀಸನಹಳ್ಳಿಯ 66/11 ಕೆ.ವಿ., ಉಪಕೇಂದ್ರ, ಸೆಸ್ನಾಪಾರ್ಕ್ ಮತ್ತು ಉದ್ದೇಶಿತ ಪ್ರೈಮಲ್ 66/11ಕೆ.ವಿ., ಉಪಕೇಂದ್ರಗಳಿಗೆ ಉತ್ತಮ ಮತ್ತು ವಿಶ್ವಸನೀಯ ವಿದ್ಯುತ್ ಸರಬರಾಜು ಮಾಡುವುದು.

(3) ಮಾರ್ಗ ಹಾದು ಹೋಗುವ ಹಳ್ಳಿಗಳು: ಈ 220 ಕೆ.ವಿ., ಮಾರ್ಗವು ದೇವರಬೀಸನಹಳ್ಳಿ, ಪಣತ್ತೂರ, ಗುಂಜೂರುಪಾಳ್ಯ ಮತ್ತು ಗೂಂಜೂರು ಹಳ್ಳಿಗಳ ಸರಹದ್ದಿನಲ್ಲಿ ಹಾದು ಹೋಗುತ್ತದೆ.

(4) ಅಂದಾಜು ವೆಚ್ಚ: ರೂ.7587.86 ಲಕ್ಷಗಳು ಕ.ವಿ.ಪ್ರ.ನಿ.ನಿ.,ಯು ಮೇಲೆ ತಿಳಿಸಿರುವ ಯೋಜನೆಗಳನ್ನು ಕಾರ್ಯಗೊಳಿಸಲು 1885ರ ಟೆಲಿಗ್ರಾಫ್ ಅಧಿನಿಯಮ (1885ರ 13) ಅನ್ವಯ ಟೆಲಿಗ್ರಾಫ್ ಪ್ರಾಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ ಹಾಗೂ ಚಲಾಯಿಸುತ್ತದೆ. ಸದರಿ ಯೋಜನೆಗಳಿಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನಿಗಮದ ಪರಿಗಣನೆಗಾಗಿ ಆಕ್ಷೇಪಣೆಗಳನ್ನು ಈ ಪ್ರಕಟಣೆ ಪ್ರಕಟವಾದ 15 ದಿನಗಳೊಳಗಾಗಿ ಈ ಕೆಳಸಹಿದಾರರ ಕಛೇರಿಗೆ ಕಳುಹಿಸಬಹುದು.

ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ಬೆಂಗಳೂರು ಬೃಹತ್ ಕಾಮಗಾರಿ ದಕ್ಷಿಣ ವಿಭಾಗ,
ಕ.ವಿ.ಪ್ರ.ನಿ.ನಿ., ಆನಂದ್‌ರಾವ್ ವೃತ್ತ,
ಬೆಂಗಳೂರು-560 009.

ಪಿಡಿ-91

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ಬಳ್ಳಾರಿ ವಿಭಾಗ, ದಾವಣಗೆರೆ

ಸಂಖ್ಯೆ:ಎಎಲ್‌ಸಿಡಿ/ಪಿಜಿಎ/ಸಿ.ಆರ್-49/2010

ಅರ್ಜಿದಾರರು:

ಶ್ರೀಮತಿ ಪುಷ್ಪಾವತಿ ಕೋಂ ಲೇಟ್ ಕೆ. ಶಿವಣ್ಣ, ಹೊಸಹಳ್ಳಿ ಗ್ರಾಮ, ಉನ್ನೆನುದ್ ಪೋಸ್ಟ್, ಹೊಸದುರ್ಗ ತಾಲ್ಲೂಕು.

ವಿರುದ್ಧ

ಪ್ರತಿವಾದಿಗಳು:

1) ದಿ ಕನ್ಸರ್ ವೇಟರ್ ಆಫ್ ಫಾರೆಸ್ಟ್, ಬಳ್ಳಾರಿ ಸರ್ಕಲ್, ಬಳ್ಳಾರಿ.

2) ಉಪಅರಣ್ಯ ಸಂರಕ್ಷಣಾಧಿಕಾರಿಗಳು, ಜಯದೇವರಹಟ್ಟಿ, ಚಿತ್ರದುರ್ಗ.

3) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಿರಿಯೂರು ಉಪವಿಭಾಗ, ಹಿರಿಯೂರು.

4) ವಲಯ ಅರಣ್ಯಾಧಿಕಾರಿಗಳು, ಹೊಸದುರ್ಗ.

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅರ್ಜಿದಾರರು ಈ ಪ್ರಾಧಿಕಾರದ ನ್ಯಾಯಾಲಯದಲ್ಲಿ ದಿನಾಂಕ:07.06.2010ರಂದು ಉಪಧನ ಪಾವತಿ ಕಾಯ್ದೆ-1972 ಹಾಗೂ

ಅದರಡಿಯ ಕರ್ನಾಟಕ ನಿಯಮಾವಳಿಗಳು-1973 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಸದರಿ ಅರ್ಜಿಯಲ್ಲಿ ತಮ್ಮ ದಿವಂಗತ ಪತಿ ಶ್ರೀ ಕೆ. ಶಿವಣ್ಣ, ಇವರು ಮೇಲ್ಕಂಡ ಪ್ರತಿವಾದಿ ಸಂಸ್ಥೆಯಲ್ಲಿ 27 ವರ್ಷಗಳ ಸೇವೆ ಸಲ್ಲಿಸಿದ್ದು, ನಂತರದಲ್ಲಿ ದಿನಾಂಕ:11.10.2009ರಂದು ಮರಣ ಹೊಂದಿರುತ್ತಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ಪ್ರಕಾರ ಬರಬೇಕಾದ ಉಪಧನವನ್ನು ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿರುತ್ತಾರೆ.

ಸದರಿ ಪ್ರಕರಣದ ವಿಚಾರಣೆಯು ಈ ನ್ಯಾಯಾಲಯದಲ್ಲಿ ಪ್ರಸಕ್ತದಲ್ಲಿ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ, ಮೇಲೆ ಸೂಚಿಸಿರುವ ಪ್ರಕರಣದಲ್ಲಿ ಅರ್ಜಿದಾರರನ್ನು ಹೊರತುಪಡಿಸಿ, ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರ/ ಜೀವಂತ ಕುಟುಂಬ ಸದಸ್ಯರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ, ಅಂತಹವರು ಈ ಪ್ರಕಟಣೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಮೂವತ್ತು (30) ದಿನಗಳೊಳಗಾಗಿ ತಮ್ಮ ಲಿಖಿತ ಆಕ್ಷೇಪಣೆಗಳನ್ನು, ಸಕ್ಷಮ ಪ್ರಾಧಿಕಾರದಿಂದ ಪಡೆದ ಸೂಕ್ತ ಮೂಲ ದಾಖಲೆಗಳು ಹಾಗೂ ಇತರೆ ಸಾಕ್ಷ್ಯಾಧಾರಗಳೊಂದಿಗೆ, ಈ ಪ್ರಾಧಿಕಾರದ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಈ ರಾಜ್ಯಪತ್ರದಲ್ಲಿ ವಿಧಿಸಿರುವ ಮೇಲ್ಕಂಡ ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಡಾ: ಶ್ರೀಪಾದ ಎಸ್.ಬಿ.
ಸಹಾಯಕ ಕಾರ್ಮಿಕ ಪರಿಹಾರ ಆಯುಕ್ತರು,
ಉಪಧನ ಪಾವತಿ ಕಾಯ್ದೆ, ನಿಯಂತ್ರಣಾಧಿಕಾರಿಗಳು,
ಬಳ್ಳಾರಿ ವಿಭಾಗ, ದಾವಣಗೆರೆ.

ಪಿ.ಆರ್.943

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ

ಸಂಖ್ಯೆ:ಕಾ.ಅ.ಬಿ-2:ಕಾ.ನ.ಪ:ಮಪ್ರ:ಎಸ್.ಆರ್.ನಂ.97/2010, ದಿನಾಂಕ:18ನೇ ಮೇ, 2010

ಅರ್ಜಿದಾರರು:		**ಪ್ರತಿವಾದಿಗಳು:**
ಶ್ರೀಮತಿ ಭೀಂಬಾಯಿ ಗಂಡ ಅಮರಣ್ಣ @ ಅಮರಪ್ಪ ಪಟ್ಟಣಶೆಟ್ಟಿ, ಸಾ:ನಾಲತವಾಡ, ತಾ:ಮುದ್ದೇಬಿಹಾಳ, ವಿಜಾಪುರ.	ವಿರುದ್ಧ	1) ಶ್ರೀ ನಾರಾಯಣಸ್ವಾಮಿ ತಂದೆ:ಮುನಿವೆಂಕಟಪ್ಪ, ಸಾ:ಮತ್ತನಹಳ್ಳಿ (ವಿ) ಸರ್ಜಾಪುರ(ಹೆಚ್) ಪೋಸ್ಟ್: ಕುಗರ, ತಾ:ಆನೇಕಲ್, ಜಿ:ಬೆಂಗಳೂರು. 2) ದಿ ಮ್ಯಾನೇಜರ್ ಲೀಗಲ್ ಕ್ಲೈಮ್ಸ್ ಚೋಳಮಂಡಲಂ ಎಮ್.ಎಸ್. ಜನರಲ್ ಇನ್ಸೂರೆನ್ಸ್ ಕಂ.ಲಿ., ಬೆಂಗಳೂರು.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ಶ್ರೀ ವೀರೇಶ ತಂದೆ ಅಮರಪ್ಪ @ ಅಮರಣ್ಣ ಪಟ್ಟಣಶೆಟ್ಟಿ ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:11.04.2010 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಮತ್ತು
ಕಾರ್ಮಿಕ ಅಧಿಕಾರಿ, ಉಪವಿಭಾಗ-2, ವಿಜಾಪುರ.

ಪಿ.ಆರ್.954

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ

ಸಂಖ್ಯೆ:ಕಾ.ಅ.ಬಿ-2:ಕಾ.ನ.ಪ:ಮಪ್ರ:ಎಸ್.ಆರ್.ನಂ.102/2010, ದಿನಾಂಕ:31ನೇ ಮೇ, 2010

ಅರ್ಜಿದಾರರು:		**ಪ್ರತಿವಾದಿಗಳು:**
ಶ್ರೀಮತಿ ಸುರೇಖಾ ಗಂಡ ಆನಂದ ನಾಟೀಕಾರ, ಮತ್ತು ಇತರರು, ಸಾ:ತಿಕೊಟಾ, ತಾ:ಜಿ: ವಿಜಾಪುರ.	ವಿರುದ್ಧ	1) ಶ್ರೀ ನೀಲಕಂಟ ತಂದೆ ಲಕ್ಷ್ಮಣ ಕುಲಕರ್ಣಿ, ಸಾ:ಅಥಣಿ, ಜಿಲ್ಲಾ:ಬೆಳಗಾಂವ. 2) ದಿ ಮ್ಯಾನೇಜರ್, ನ್ಯಾಷನಲ್ ಇನ್ಸೂರೆನ್ಸ್ ಕಂ.ಲಿ., ವಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ರಾಜು ತಂದೆ ದಾವಲ ಜಮಖಂಡಿಕರ್, ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:03.05.2010 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಮತ್ತು
ಪಿ.ಆರ್.955 ಕಾರ್ಮಿಕ ಅಧಿಕಾರಿ, ಉಪವಿಭಾಗ-2, ವಿಜಾಪುರ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ-2, ಬಿಜಾಪುರ ಜಿಲ್ಲೆ, ಬಿಜಾಪುರ

ಸಂಖ್ಯೆ:ಕಾ.ಅ.ಬಿ-2:ಕಾ.ನ.ಪ:ಮಪ್ರ:ಎಸ್.ಆರ್.ನಂ.103/2010, ದಿನಾಂಕ:31ನೇ ಮೇ, 2010

ಅರ್ಜಿದಾರರು:		**ಪ್ರತಿವಾದಿಗಳು:**
ಶ್ರೀ ದಾವಲ ತಂದೆ ಅಲ್ಲಾವುದ್ದೀನ್ ಜಮಖಂಡಿಕರ್, ಮತ್ತು ಇತರರು, ಸಾ:ತಿಕೊಟಾ, ತಾ:ಜಿ: ವಿಜಾಪುರ.	ವಿರುದ್ಧ	1) ಶ್ರೀ ಶಖೀಲ್ ತಂದೆ ಶಾಕೂರ ವಿಜಾಪುರೆ, ಸಾ:ತ್ರಿಮೂರ್ತಿ ಕಾಲೋನಿ, ಗೋಳೇಶ್ವರ ರೋಡ್, ಕರಡ, ತಾ:ಕರಡ, ಜಿಲ್ಲಾ: ಸತಾರಾ. 2) ದಿ ಮ್ಯಾನೇಜರ್, ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ.ಲಿ., ವಿಜಾಪುರ.

ಪ್ರಕಟಣೆ

ಮೇಲ್ಕಾಣಿಸಿದ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಅರ್ಜಿಯೊಂದನ್ನು ಸಲ್ಲಿಸಿ, ರಾಜು ತಂದೆ ದಾವಲ ಜಮಖಂಡಿಕರ್, ಇವರು ಪ್ರತಿವಾದಿಗಳ ಬಳಿ ಕೆಲಸ ನಿರ್ವಹಿಸುವಾಗ ಮತ್ತು ಕೆಲಸದ ಪರಿಣಾಮದಿಂದಾಗಿ ದಿನಾಂಕ:03.05.2010 ರಂದು ಅಪಘಾತಕ್ಕೀಡಾಗಿ ಮೃತನಾಗಿರುತ್ತಾನೆಂದು, ಅಲ್ಲದೇ ತಾವು ಮೃತರ ಅವಲಂಬಿತರಾಗಿರುವುದರಿಂದ ಕಾಯ್ದೆಯನ್ವಯ ತಮಗೆ ಬರಬೇಕಾದ ಪರಿಹಾರದ ಹಣವನ್ನು ಪ್ರತಿವಾದಿಗಳಿಂದ ಕೊಡಿಸಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ, ಹಾಗೂ ಅರ್ಜಿದಾರರಲ್ಲದೇ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂಥವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಪರ ಆಕ್ಷೇಪಣೆಯಾಗಲೀ ಅಥವಾ ಅರ್ಜಿಯಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸಬೇಕು. ಹಾಗೂ ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಮತ್ತು ಅರ್ಜಿಗಳು ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದನಂತರ ಬಂದ ಅರ್ಜಿಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು ಮತ್ತು
ಪಿ.ಆರ್.956 ಕಾರ್ಮಿಕ ಅಧಿಕಾರಿ, ಉಪವಿಭಾಗ–2, ವಿಜಾಪುರ.

ಕಾರ್ಮಿಕ ಅಧಿಕಾರಿಗಳು ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರವರ ನ್ಯಾಯಾಲಯ, ಕೊಪ್ಪಳ ಜಿಲ್ಲೆ, ಕೊಪ್ಪಳ

ಪ್ರಕಟಣೆ ಕಾಅಕೊ/ಕಾನಪ/ಮ.ಪ್ರ/ಸಂಖ್ಯೆ–156/2009, ದಿನಾಂಕ:3ನೇ ಡಿಸೆಂಬರ್, 2009

ಅರ್ಜಿದಾರರು:

1) ಎಂ. ರಾಮಲಕ್ಷ್ಮಿ ಗಂಡ: ಲೇಟ್ ಎಂ. ಸಾಂಬಶಿವರಾವ್, 46 ವರ್ಷ,
ಸಾ: ಸರ್ಜಾಪುರಂ, ತುಣುಕು (ಎ.ಪಿ.) ವಡ್ಡರಹಟ್ಟಿ ಕ್ಯಾಂಪ್, ತಾ: ಗಂಗಾವತಿ.
3) ಅಭ್ಯರ್ಥಿಯ ವಾರ್ಷಿಕ ಆದಾಯವು ರೂ.15000/– ಕ್ಕೆ ಮೀರಿರಬಾರದು. ಪ್ರವರ್ಗ–1ರಡಿ ಬರುವ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಆದಾಯ ಮಿತಿ ಇರುವುದಿಲ್ಲ.

4) ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೊಂದಾಯಿಸಿರಬೇಕು.

5) ಅಭ್ಯರ್ಥಿಯು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ 2 ವರ್ಷದೊಳಗೆ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

6) ಅಭ್ಯರ್ಥಿಯು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕಡೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು 30 ವರ್ಷಗಳ ವಯೋಮಿತಿಯಲ್ಲಿರಬೇಕು.

7) ಆಯ್ಕೆಯಾದ ಅಭ್ಯರ್ಥಿಗಳಿಗೆ 4 ವರ್ಷಗಳ ತರಬೇತಿ ಭತ್ಯೆ ನೀಡಲಾಗುವುದು ಮತ್ತು ಮಾಹೆಯಾನ ರೂ.1000-00 ಗಳ ತರಬೇತಿ ಭತ್ಯೆ ನೀಡಲಾಗುವುದು.

8) ಅಭ್ಯರ್ಥಿಯು ತರಬೇತಿಯನ್ನು ಮಧ್ಯದಲ್ಲಿ ಬಿಡುವಂತಿಲ್ಲ. ಈ ಬಗ್ಗೆ ಒಂದು ಮುಚ್ಚಳಿಕೆ ಪತ್ರ ನೀಡಬೇಕು. ಒಂದು ವೇಳೆ ಸರ್ಕಾರಿ ಉದ್ಯೋಗ ದೊರಕಿದಲ್ಲಿ ಅಥವಾ ನ್ಯಾಯಾಧಿಕಾರಿಯಾಗಿ ನೇಮಕಾತಿ ಹೊಂದಿದಲ್ಲಿ ಜಿಲ್ಲಾ ಸಮಿತಿಯ ಗಮನಕ್ಕೆ ತಂದು ತರಬೇತಿ ಬಿಡಬಹುದು. ವಿಶೇಷ ಸಂದರ್ಭದಲ್ಲಿ ತರಬೇತಿ ಬಿಡಬೇಕಾದಲ್ಲಿ ಸರ್ಕಾರದ ಅನುಮತಿ ಪಡೆಯಬೇಕು.

9) ಆಯ್ಕೆಯಾದ ಅಭ್ಯರ್ಥಿಗಳು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರಿ ವಕೀಲರು ಅಥವಾ ಕನಿಷ್ಠ 20 ವರ್ಷಗಳ ವಕೀಲ ವೃತ್ತಿಯಲ್ಲಿ ಅನುಭವವುಳ್ಳ ಯಾವುದೇ ವಕೀಲರ ಅಧೀನದಲ್ಲಿ ತರಬೇತಿಗೆ ನಿಯೋಜಿಸಲಾಗುವುದು.

10) ಅರ್ಜಿಯ ಜೊತೆಯಲ್ಲಿ ಅವಶ್ಯ ಮಾಹಿತಿಗಳಾದ ಕಾನೂನು ಪದವಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಮಾಣ ಪತ್ರ, ಅಂಕ ಪಟ್ಟಿಗಳ ದೃಢೀಕರಣ ಪ್ರತಿ, ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ವರ್ಗಾವಣೆ ಪತ್ರದ ದೃಢೀಕರಣ ಪ್ರತಿಗಳನ್ನು ದೃಢೀಕರಿಸಿ ಸಲ್ಲಿಸಬೇಕು.

11) ಅರ್ಹ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯ ಸಂದರ್ಶನದ ದಿನಾಂಕ ಹಾಗೂ ಸ್ಥಳವನ್ನು ತಿಳಿಸಲಾಗುವುದು. ಸಂದರ್ಶನಕ್ಕೆ ಅಭ್ಯರ್ಥಿಗಳು ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, 1ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-1, ಇವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು, ಇವರಿಗೆ ಸಲ್ಲಿಸುವುದು. ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಪಿ.ಆರ್.1083

ಸಮಾಜ ಕಲ್ಯಾಣ ಇಲಾಖೆ

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿ, ಸ್ಟೇಷನ್ ಏರಿಯಾ, ಐ.ಬಿ. ರೋಡ್, ರಾಯಚೂರು

ಪ್ರಕಟಣೆ

ಸಂಖ್ಯೆ:ಜಿಸಕಅರಾ/8/ಕಾಪತ/ಸಿಆರ್-1/2010-11, ದಿನಾಂಕ:23ನೇ ಜೂನ್, 2010

ವಿಷಯ: 2010-11ನೇ ಸಾಲಿನಲ್ಲಿ ಕಾನೂನು ಪದವೀಧರರನ್ನು ಆಡಳಿತ ನ್ಯಾಯಾಧೀಕರಣ ತರಬೇತಿಗಾಗಿ ಆಯ್ಕೆ ಮಾಡುವ ಕುರಿತು.

ಉಲ್ಲೇಖ:1) ಸರ್ಕಾರದ ಆದೇಶದ ಸಂಖ್ಯೆ: ಎಸ್‌ಡಬ್ಲ್ಯೂಎಲ್-68:ಎಸ್‌ಡಬ್ಲ್ಯೂ89: ಬೆಂಗಳೂರು ದಿನಾಂಕ: 02.11.1990ರ ಪ್ರಕಾರ.

2) ಸರ್ಕಾರಿ ಆದೇಶ ಸಂಖ್ಯೆ: ಸಕಿ:349:ಪಕವಿ:2005, ಬೆಂಗಳೂರು, ದಿನಾಂಕ:28.01.2006.

ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ 2010-11ನೇ ಸಾಲಿಗೆ ಪರಿಶಿಷ್ಟ ಜಾತಿಯ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣ ತರಬೇತಿ ನೀಡುವ ಕಾರ್ಯಕ್ರಮವಿರುತ್ತದೆ. ಆದಕಾರಣ ಅರ್ಹ ಪರಿಶಿಷ್ಟ ಜಾತಿಯ ಕಾನೂನು ಪದವೀಧರರು ದಿನಾಂಕ:23.07.2010 ರೊಳಗಾಗಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ರಾಯಚೂರು ರವರ ಕಾರ್ಯಾಲಯಕ್ಕೆ ಈ ಕೆಳಗೆ ಕಾಣಿಸಿದ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ. ಅರ್ಜಿಯ ನಮೂನೆಯನ್ನು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ರಾಯಚೂರು ರವರ ಕಛೇರಿಯ ವೇಳೆಯಲ್ಲಿ ಉಚಿತವಾಗಿ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ರಾಯಚೂರು ರವರ ಕಛೇರಿಯಲ್ಲಿ ಸಂಪರ್ಕಿಸಿ ವಿವರಗಳನ್ನು ಪಡೆಯತಕ್ಕದ್ದು.

1) ಅರ್ಜಿದಾರರು ಪರಿಶಿಷ್ಟ ಜಾತಿಯವರಾಗಿರಬೇಕು.

2) ಅರ್ಜಿಯ ಜೊತೆಗೆ ತಹಶೀಲ್ದಾರರಿಂದ ಪಡೆದ ಜಾತಿ ಪ್ರಮಾಣ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ ಲಗತ್ತಿಸಬೇಕು.

3) ಅರ್ಜಿಯ ಜೊತೆಗೆ ತಹಶೀಲ್ದಾರರಿಂದ ಪಡೆದ ಆದಾಯ ಪ್ರಮಾಣ ಪತ್ರದ ದೃಢೀಕರಣ ಜೆರಾಕ್ಸ್ ಪ್ರತಿ ಲಗತ್ತಿಸಬೇಕು.

4) ಕಾನೂನು ತರಬೇತಿಯು ರಾಯಚೂರು ಜಿಲ್ಲೆಗೆ ಮಾತ್ರ ಸೀಮಿತವಾಗಿದ್ದು, ತರಬೇತಿಯನ್ನು ರಾಯಚೂರು ಜಿಲ್ಲೆಯಲ್ಲಿ ಕೊಡಲಾಗುವುದು.

5) ತರಬೇತಿಯ ಅವಧಿಯು ನಾಲ್ಕು ವರ್ಷವಿದ್ದು ಈ ಅವಧಿಯಲ್ಲಿ ಪ್ರತಿ ತಿಂಗಳಿಗೆ ರೂ.1000/- ರಂತೆ ಶಿಷ್ಯ ವೇತನ ಕೊಡಲಾಗುವುದು. ತರಬೇತಿಯನ್ನು ಮಧ್ಯದಲ್ಲಿ ಬಿಟ್ಟ ಪಕ್ಷದಲ್ಲಿ ಅಲ್ಲಿಯವರೆಗೆ ಪಾವತಿಸಿದ ಶಿಷ್ಯವೇತನವನ್ನು ಭೂಕಂದಾಯ ರೂಪದಲ್ಲಿ ಕಾನೂನಿನ ಪ್ರಕಾರ ವಸೂಲಿ ಮಾಡಿ ಸರ್ಕಾರಕ್ಕೆ ವಾಪಸ್ಸು ಕಟ್ಟಬೇಕಾಗಿರುತ್ತದೆ.

6) ಅರ್ಜಿಗಳನ್ನು ದಿನಾಂಕ:23.07.2010ರೊಳಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ರಾಯಚೂರು ರವರಿಗೆ ಸಲ್ಲಿಸತಕ್ಕದ್ದು.

7) ಜೂನ್-2010ಕ್ಕೆ ತರಬೇತಿ ಅರ್ಜಿದಾರರ ವಯಸ್ಸು 35ಕ್ಕೆ ಮೀರಿರಬಾರದು.

8) ದಿನಾಂಕ:ಜೂನ್-2010ರ ಒಳಗಾಗಿ 2 ವರ್ಷದೊಳಗೆ ಕಾನೂನು ಪದವಿಯನ್ನು ಪಾಸಾದ ಅಭ್ಯರ್ಥಿಗಳು ಮಾತ್ರ ಅರ್ಜಿಗಳನ್ನು ಹಾಕತಕ್ಕದ್ದು ಕಾನೂನು ಪದವಿಯಲ್ಲಿ ಪಾಸಾದ ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲೆಯ ನಕಲು ಪ್ರತಿಗಳಿಗೆ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು.

9) ತರಬೇತಿಗೆ ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯಲ್ಲಿ ಸಂದರ್ಶನ ಮುಖಾಂತರ ಆಯ್ಕೆ ಮಾಡಲಾಗುತ್ತಿದೆ.

ಅಪೂರ್ಣ ಹಾಗೂ ಅವಧಿ ಮೀರಿ ಬಂದ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು,
ರಾಯಚೂರು.

ಅನುಬಂಧ-11ರ ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಎಲ್-68:ಎಸ್‌ಇಡಬ್ಲ್ಯೂ:89:ದಿನಾಂಕ:02.11.1990 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಕಾನೂನು ಪದವೀಧರರಿಗೆ ಆಡಳಿತದಲ್ಲಿ ನ್ಯಾಯಾಧೀಕರಣ ತರಬೇತಿ ನೀಡುವ ಬಗ್ಗೆ.

ಕಾರ್ಯದರ್ಶಿಗಳು,
ಜಿಲ್ಲಾ ಮಟ್ಟದಲ್ಲಿ ಕಾನೂನು ಪದವೀಧರರನ್ನು
ಆಡಳಿತ ನ್ಯಾಯಾಧೀಕರಣದಲ್ಲಿ ಆಯ್ಕೆಮಾಡುವ
ಆಯ್ಕೆ ಸಮಿತಿ, ರಾಯಚೂರು.

ಭಾವ ಚಿತ್ರ
ಲಗತ್ತಿಸಬೇಕು

ಮಾನ್ಯರೆ

ನಿಮ್ಮ ಪತ್ರಿಕಾ ಪ್ರಕಟಣೆ ಜಾಹೀರಾತು________________

ಕರ್ನಾಟಕ ಗೆಜೆಟ್ ದಿನಾಂಕ____________ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಕಾನೂನು ಪದವೀಧರರಿಗೆ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿ ನೀಡುವ ಅರ್ಜಿ ಆಹ್ವಾನಿಸಿದಂತೆ ನಾನು ಸದರಿ ತರಬೇತಿಯನ್ನು ಪಡೆಯಲು ಅರ್ಜಿಯನ್ನು ದ್ವಿಪ್ರತಿಯಲ್ಲಿ ಈ ಕೆಳಕಂಡಂತೆ ಮಾಹಿತಿಯನ್ನು ಸಲ್ಲಿಸುತ್ತೇನೆ. ಹಾಗೂ ಸಲ್ಲಿಸಿರುವ ಮಾಹಿತಿಯು ಸತ್ಯವೆಂದು ದೃಢೀಕರಿಸುತ್ತೇನೆ.

ಸ್ಥಳ:
ದಿನಾಂಕ:

ತಮ್ಮ ನಂಬುಗೆಯ
ಅರ್ಜಿದಾರರ ಸಹಿ

ಅರ್ಜಿ ನಮೂನೆ

1)	ಅಭ್ಯರ್ಥಿಯ ಹೆಸರು (ಬಿಡಿ ಅಕ್ಷರದಲ್ಲಿ)	:
2)	ವಿಳಾಸ (ಬಿಡಿ ಅಕ್ಷರದಲ್ಲಿ)	:
3)	ತಂದೆ: ಪೋಷಕರ:ಹೆಸರು ವಿಳಾಸ ಮತ್ತು ವೃತ್ತಿ	:

4)	ಹುಟ್ಟಿದ ದಿನಾಂಕ (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯನ್ನು ದೃಢೀಕರಿಸಿ ಲಗತ್ತಿಸಬೇಕು)	:
5)	ಎ) ಹುಟ್ಟಿದ ಸ್ಥಳ, ಜಿಲ್ಲೆ ಮತ್ತು ರಾಜ್ಯ ಬಿ) ಈಗ ವಾಸಿಸುತ್ತಿರುವ ಜಿಲ್ಲೆ ಮತ್ತು ರಾಜ್ಯದ ಹೆಸರು	: :
6)	ಎ) ನೀವು ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಇತರೆ ಹಿಂದುಳಿದ ವರ್ಗಕ್ಕೆ ಸೇರಿದಲ್ಲಿ ಜಾತಿ ಬಗ್ಗೆ ನಮೂದಿಸುವುದು ಬಿ) ಮೇಲೆ ತಿಳಿಸಿದ ವಿಷಯದಲ್ಲಿ ಹೌದು ಅಂದಿದ್ದಲ್ಲಿ ಸಂಕ್ಷಮಪ್ರಾಧಿಕಾರಿಗಳಿಂದ ಅಂಗೀಕೃತ ಜಾತಿ ಪ್ರಮಾಣ ಪತ್ರವನ್ನು ದೃಢೀಕರಿಸಿ ಲಗತ್ತಿಸಬೇಕು.	: :
ಬಿ-2	ಆದಾಯ ಪ್ರಮಾಣ ಪತ್ರ ಲಗತ್ತಿಸಿದಲ್ಲಿ ಈ ಕೆಳಕಂಡ ವಿವರಗಳನ್ನು ಸಲ್ಲಿಸುವುದು 1) ಅರ್ಜಿದಾರರ ಆದಾಯ 2) ವೃತ್ತಿಯಿಂದ ಬಂದಂತಹ ಆದಾಯ ಅಥವಾ ವೇತನ 3) ಇನ್ನಿತರ ವೇತನ	: : :
ಬಿ-3	ತಂದೆ: ತಾಯಿಗಳ ಆದಾಯ 1) ಉದ್ಯೋಗ ಅಥವಾ ನಿವೃತ್ತಿ ವೇತನದಿಂದ ಬಂದಂತಹ ಆದಾಯ 2) ಜಮೀನು ಅಥವಾ ಕಟ್ಟಡಗಳಿಂದ ಬಂದಂತಹ ಆದಾಯ 3) ಇನ್ನಿತರೆ ವೇತನದಿಂದ ಬಂದಂತಹ ಆದಾಯ	: : :
6-3	ಗಂಡ: ಹೆಂಡತಿಯ ಆದಾಯ 1) ವೃತ್ತಿ ಮತ್ತು ವೇತನದಿಂದ ಬಂದಂತಹ ಆದಾಯ 2) ಇನ್ನಿತರೆ ಆದಾಯ	: :
7)	ಅ) ಗಂಡು: ಹೆಣ್ಣು ಆ) ಮದುವೆಯಾಗಿದೆಯೇ? ಇಲ್ಲವೇ? ಇ) ಮದುವೆಯಾಗಿದ್ದಲ್ಲಿ ಒಂದಕ್ಕಿಂತ ಹೆಚ್ಚು ನಿಮಗೆ ಪತ್ನಿಯರಿದ್ದಾರೆಯೇ? ಈ) ಈಗಾಗಲೇ ಪತ್ನಿಯನ್ನು ಹೊಂದಿದ್ದು, ಇನ್ನೊಬ್ಬರನ್ನು ಮದುವೆಯಾಗಿದ್ದಿರ?	: : : :
1)	ಕಾಲಂರಲ್ಲಿಯ ಮಾಹಿತಿಯ ದೃಢೀಕರಣವಾಗಿ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಹುಟ್ಟಿದ ದಿನಾಂಕವನ್ನು ನಮೂದಿಸಿದ ಅಂಕಪಟ್ಟಿಯನ್ನು ಲಗತ್ತಿಸುವುದು.	

2)	ಕಾಲಂ ಸಂಖ್ಯೆ (8) (ಬಿ) ತಿಳಿಸಿರುವ ವಿದ್ಯಾರ್ಹತೆ ಬಗ್ಗೆ ಅಂಕಪಟ್ಟಿಯನ್ನು ದೃಢೀಕರಿಸಿ ಲಗತ್ತಿಸುವುದು.	:
3)	ಕಾಲಂ ನಂ.-8(ಸಿ) ಯಲ್ಲಿ ತಿಳಿಸಿರುವಂತೆ ಹೆಚ್ಚಿನ ವಿದ್ಯಾರ್ಹತೆಯ ಬಗ್ಗೆ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಲಗತ್ತಿಸಬೇಕು.	:
4)	ಕಾಲಂ ಸಂಖ್ಯೆ-10ರಲ್ಲಿ ತಿಳಿಸಿರುವಂತೆ ಸೇವೆಯ ಅವಧಿಯ ಬಗ್ಗೆ ದೃಢೀಕರಣ ಪ್ರಮಾಣ ಪತ್ರವನ್ನು ಲಗತ್ತಿಸುವುದು.	:

ನಾನು ಈ ಮೇಲೆ ಒದಗಿಸಿರುವ ಮಾಹಿತಿಯನ್ನು ಸತ್ಯವೆಂದು ದೃಢೀಕರಿಸುತ್ತೇನೆ. ನಾನು ಈ ನಾಲ್ಕು ವರ್ಷಗಳ ತರಬೇತಿಯನ್ನು ಪೂರ್ಣಗೊಳಿಸುತ್ತೇನೆಂದು ತಿಳಿಸುತ್ತೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು,

ರಾಯಚೂರು.

ಪಿ.ಆರ್.1084

ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ

ಪತ್ರಿಕಾ ಪ್ರಕಟಣೆ

ನಂ.ಜಿಸಕ:ಕಾ.ತ.ಬೇ:ಪ್ರಕಟಣೆ:ಸಿಆರ್9:2010-11, ದಿನಾಂಕ:13ನೇ ಜುಲೈ, 2010

ವಿಷಯ: 2010-11ನೇ ಸಾಲಿನ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ತರಬೇತಿ ಮತ್ತು ಧನ ಸಹಾಯ ನೀಡುವ ಬಗ್ಗೆ.

2010-11ನೇ ಸಾಲಿಗೆ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ನಿರುದ್ಯೋಗಿ ಕಾನೂನು ಪದವೀಧರರಿಗೆ ಸ್ವತಂತ್ರವಾಗಿ ವಕೀಲ ವೃತ್ತಿ ಪ್ರಾರಂಭಿಸಲು ಸಹಾಯವಾಗುವಂತೆ ಪ್ರತಿಯೊಬ್ಬ ಕಾನೂನು ಪದವೀಧರರಿಗೆ 4 ವರ್ಷಗಳ ತರಬೇತಿ ಮತ್ತು ಬಾರ್ ಕೌನ್ಸಿಲ್‌ನಲ್ಲಿ ಹೆಸರು ನೊಂದಾಯಿಸಲು ಹಾಗೂ ಕಾನೂನು ಗ್ರಂಥಗಳನ್ನು ಖರೀದಿಸಲು ರೂ.5000-00 ಮೀರದಂತೆ ಧನ ಸಹಾಯ ನೀಡಲಾಗುತ್ತದೆ. ಧನ ಸಹಾಯ ಪಡೆಯುವ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ನಿರುದ್ಯೋಗಿ ಕಾನೂನು ಪದವೀಧರರಿಗೆ ವಾರ್ಷಿಕ ವರಮಾನ ರೂ.18000-00 ಮೀರದಂತೆ ಇರುವ ಅಭ್ಯರ್ಥಿಗಳು ಸದರ ಸೌಲಭ್ಯಕ್ಕೆ ಅರ್ಹರಿರುತ್ತಾರೆ. ಆದ್ದರಿಂದ ತರಬೇತಿ ಪಡೆಯಲಿಚ್ಚಿಸುವ ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ದಿನಾಂಕ: 16.08.2010ರೊಳಗಾಗಿ ಸಂಬಂಧಪಟ್ಟ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕಾರವಾರ ಇಲ್ಲಿಗೆ ಅರ್ಜಿ ಸಲ್ಲಿಸುವುದು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳವರ ಕಛೇರಿ ಕಾರವಾರ/ ಸಂಬಂಧಪಟ್ಟ ತಾಲ್ಲೂಕಿನ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಯವರಿಗೆ ಸಂಪರ್ಕಿಸಬಹುದು.

1) ಅರ್ಜಿದಾರರ ಗರಿಷ್ಟ ವಯೋಮಿತಿಯು ಅರ್ಜಿ ಸ್ವೀಕರಿಸಿದ ಕೊನೆಯ ದಿನಾಂಕದಂದು 35 ವರ್ಷ ಮೀರಿರಬಾರದು.

2) ಆಯ್ಕೆಯಾದ ಅಭ್ಯರ್ಥಿಗೆ ಡಿಸ್ಟ್ರಿಕ್ ಪಬ್ಲಿಕ್ ಪ್ರಾಸಿಕ್ಯೂಟರ್ ಗವರ್ನಮೆಂಟ್ ಅಡ್ವೋಕೇಟ್ ಅಥವಾ 20 ವರ್ಷಕ್ಕಿಂತ ಹೆಚ್ಚಿಗೆ ವಕೀಲ ವೃತ್ತಿ ನಡೆಸುತ್ತಿರುವ ವಕೀಲರ ಮುಖಾಂತರ ತರಬೇತಿ ನೀಡಲಾಗುವುದು.

3) ತರಬೇತಿಗಾಗಿ ಆಯ್ಕೆ ಮಾಡಿಕೊಳ್ಳಬೇಕಾದ ಅಭ್ಯರ್ಥಿಯು ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ತಾರೀಖಿನ ಹಿಂದೆ 2 ವರ್ಷಗಳ ವಕೀಲ ಪದವಿ ಪಡೆದು ಸನತ್ ಪಡೆದಿರಬೇಕು.

4) ಅರ್ಜಿ ಸಲ್ಲಿಸುವಾಗ ಎಲ್ಲಾ ದಾಖಲಾತಿ ಪತ್ರಗಳನ್ನು ದೃಢೀಕರಿಸಿ ಸಲ್ಲಿಸುವುದು.

ಜಿಲ್ಲಾ ಸಮಾಜ ಕಲ್ಯಾಣ

ಪಿ.ಆರ್.1105 ಅಧಿಕಾರಿಗಳು,

ಉತ್ತರಕನ್ನಡ, ಕಾರವಾರ.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು, ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/1/ಡಿಟಿಸಿಆರ್/1998-99, ದಿನಾಂಕ:29ನೇ ಜೂನ್, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ನಿರೀಕ್ಷಕರು(2)
ಇ.ಐ.ಬಿ. ಮಂಗಳೂರು
ಮಂಗಳೂರು.

ಎದುರುದಾರರು:

ಶ್ರೀ ಡಿ.ಎಸ್.ಧರ್ಮಪ್ಪ
ಬಿನ್ ಶಾಂತಮಲ್ಲಪ್ಪ, ಕಾಫಿ ಪ್ಲಾಂಟರ್ಸ್
ಕೊಲಗೇರಿ ಎಸ್ಟೇಟ್, ದೋಣಿಗಲ್ ಅಂಚೆ,
ಸಕಲೇಶಪುರ, ಹಾಸನ ಜಿಲ್ಲೆ
(ವಾಹನದ ಮಾಲೀಕರು)
ಮತ್ತು ಇತರೆ ಒಬ್ಬ ಆರೋಪಿ.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ನಿರೀಕ್ಷಕರು(2), ಇ.ಐ.ಬಿ. ಮಂಗಳೂರುರವರು ದಿ:4-7-1998 ರಂದು ಮುಂಜಾನೆ 3:30 ಗಂಟೆ ಸಮಯದಲ್ಲಿ ತಮ್ಮ ಸಿಬ್ಬಂದಿಗಳೊಂದಿಗೆ ರಾ.ಹೆ.48ರಲ್ಲಿ ಪಡೀಲ್ ಕ್ರಾಸಿನ ಬಳಿ ರಸ್ತೆಗಾವಲು ನಡೆಸಿ ವಾಹನ ತಪಾಸಣೆ ನಡೆಸುತ್ತಿರುವ ಸಂದರ್ಭದಲ್ಲಿ ಬಿ.ಸಿ.ರೋಡ್ ಕಡೆಯಿಂದ ಮಂಗಳೂರು ಕಡೆಗೆ ಬರುತ್ತಿದ್ದ ಕೆಎ-21-167 ನೋಂದಣಿ ಸಂಖ್ಯೆ ಇರುವ ಈಚರ್ ಕ್ಯಾಂಟರ್ ಲಾರಿಯನ್ನು ನಿಲ್ಲಿಸಲು ಸೂಚನೆ ನೀಡಿದಾಗ ಚಾಲಕನು ಲಾರಿಯನ್ನು ನಿಲ್ಲಿಸದೇ ಮುಂದಕ್ಕೆ ಸಾಗಿದಾಗ ಅನುಮಾನಗೊಂಡು ಹಿಂಬಾಲಿಸಿ ಪಂಪ್‌ವೆಲ್ ವೃತ್ತದ ಬಳಿ ತಡೆದು ನಿಲ್ಲಿಸಿ, ಚಾಲಕನನ್ನು ಲಾರಿಯಲ್ಲಿರುವ ಸರಕಿನ ಬಗ್ಗೆ ವಿಚಾರಿಸಲಾಗಿ ಸಮರ್ಪಕವಾದ ಉತ್ತರ ನೀಡದ ಹಿನ್ನಲೆಯಲ್ಲಿ ಅನುಮಾನ ಬಲಗೊಂಡು ವಾಹನವನ್ನು ಪರಿಶೀಲಿಸಿದಾಗ ಒಟ್ಟು 1393.200 ಲೀಟರ್ ಮದ್ಯವನ್ನು ಯಾವುದೇ ಪರವಾನಿಗೆ ಇಲ್ಲದೇ ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಆರೋಪಿಗಳಾದ (1) ಕುಮಾರ್, ಬಿನ್ ಈಶ್ವರ ಗೌಡ, ಮಲ್ಲಸಂದ್ರ, ಅರೇಹಳ್ಳಿ, ಹೋಬಳಿ, ಹಾಸನ ಜಿಲ್ಲೆ (ವಾಹನದ ಚಾಲಕ) ಹಾಗೂ ವಾಹನದಲ್ಲಿ ದೊರೆತ ದಾಖಲೆ ಪತ್ರಗಳ ಆಧಾರದಲ್ಲಿ (2) ಡಿಸ್ಟಿಲರಿ ಮಾಲೀಕರು, ಮೆ: ಕರ್ನಾಟಕ ಬ್ರೆವರೀಸ್ ಎಂಡ್ ಡಿಸ್ಟಿಲರೀಸ್ ಪ್ರೈ ಲಿ., 20ನೇ ಮೈಲಿ ಕಲ್ಲು, ತುಮಕೂರು ರಸ್ತೆ, ನೆಲಮಂಗಲ, ಬೆಂಗಳೂರು (3) ಡಿಸ್ಟಿಲರಿ ಮಾಲೀಕರು, ಮೆ: ಕರ್ನಾಟಕ ಬ್ರೆವರೀಸ್ ಎಂಡ್ ಡಿಸ್ಟಿಲರೀಸ್ ಪ್ರೈ ಲಿ., 9ನೇ ಮೈಲಿ ಕಲ್ಲು, ತುಮಕೂರು ರಸ್ತೆ, ಬೆಂಗಳೂರು ಹಾಗೂ (4)ವಾಹನದ ಮಾಲೀಕರಾದ ಶ್ರೀ ಡಿ.ಎಸ್. ಧರ್ಮಪ್ಪ, ಬಿನ್:ಶಾಂತಮಲ್ಲಪ್ಪ, ಕಾಫಿ ಪ್ಲಾಂಟರ್ಸ್, ಕೊಲಗೇರಿ ಎಸ್ಟೇಟ್, ದೋಣಿಗಲ್ ಅಂಚೆ, ಸಕಲೇಶಪುರ, ಹಾಸನ ಜಿಲ್ಲೆ ಇವರ ವಿರುದ್ಧ ಪ್ರಥಮ ಮಾಹಿತಿ ಸಂಖ್ಯೆ 1/98-99, ದಿ: 4-07-1998 ರಲ್ಲಿ ಮೊಕದ್ದಮೆಯನ್ನು ದಾಖಲು ಮಾಡಿ, ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ನಕಲನ್ನು ಸೊತ್ತುಪಟ್ಟಿಯೊಂದಿಗೆ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರು ಇವರಿಗೆ ಸಲ್ಲಿಸಿ ವಶಪಡಿಸಿಕೊಂಡ ಸೊತ್ತುಗಳನ್ನು ಹಾಗೂ ವಾಹನ ವನ್ನು ಮುಂದಿನ ತನಿಖೆಗಾಗಿ ಅಂದಿನ ಕಂಕನಾಡಿ ವಲಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸುವ ಬಗ್ಗೆ ಆದೇಶಕ್ಕಾಗಿ ಕೋರಿರುತ್ತಾರೆ. ಅದರಂತೆ ಅನುಮತಿಯನ್ನು ನೀಡಲಾಗಿರುತ್ತದೆ.

ಜಪ್ತುಪಡಿಸಿಕೊಳ್ಳಲಾದ ಸೊತ್ತುಗಳು:

1) ಒಂದು ನೀಲಿ ಬಣ್ಣದ ಈಚರ್ ಕ್ಯಾಂಟರ್ ಲಾರಿ ನಂ:KA-21-167
2) ಪ್ರತಿ ಪೆಟ್ಟಿಗೆಯಲ್ಲಿ ತಲಾ 180 ಮಿಲಿಯ 48 ಬಾಟ್ಲಿಗಳಿರುವ 100 ಪೆಟ್ಟಿಗೆಗಳಲ್ಲಿ 864 ಲೀ. ಬ್ಯಾಗ್‌ಪೈಪರ್ ವಿಸ್ಕಿ
3) ಪ್ರತಿ ಪೆಟ್ಟಿಗೆಯಲ್ಲಿ ತಲಾ 750 ಮಿಲಿಯ 12 ಬಾಟ್ಲಿಗಳಿರುವ 10ಪೆಟ್ಟಿಗೆಗಳಲ್ಲಿ 90 ಲೀ. ವಿನ್ ವಿಸ್ಕಿ
4) ಪ್ರತಿ ಪೆಟ್ಟಿಗೆಯಲ್ಲಿ ತಲಾ 375 ಮಿಲಿಯ 24 ಬಾಟ್ಲಿಗಳಿರುವ 20 ಪೆಟ್ಟಿಗೆಗಳಲ್ಲಿ 180 ಲೀ. ವಿನ್ ವಿಸ್ಕಿ
5) ಪ್ರತಿ ಪೆಟ್ಟಿಗೆಯಲ್ಲಿ ತಲಾ 180 ಮಿಲಿಯ 48 ಬಾಟ್ಲಿಗಳಿರುವ 30 ಪೆಟ್ಟಿಗೆಗಳಲ್ಲಿ 259 ಲೀ. ವಿನ್ ವಿಸ್ಕಿ

(ಮೇಲಿನ ಮದ್ಯದ ಪೈಕಿ ಬ್ಯಾಗ್ ಪೈಪರ್ ವಿಸ್ಕಿಯಿಂದ 180 ಎಂ ಎಲ್ ನ 4 ಬಾಟಲಿಗಳು, ವಿನ್ ವಿಸ್ಕಿಯಿಂದ 750 ಎಂ ಎಲ್ ನ 3 ಬಾಟಲಿಗಳು, 375 ಎಂಎಲ್ ನ 6 ಬಾಟಲಿಗಳು, 180 ಎಂ ಎಲ್ ನ 3 ಬಾಟಲಿಗಳು ಒಟ್ಟು 16 ಮದ್ಯದ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆಯಲಾಗಿದೆ)

6) ಸ್ಟೆಪಿನಿ ಟೈರ್.ಜಾಕ್‌ಲಿವರ್, ಸ್ಪಾನರ್ ಸೆಟ್, ವೀಲ್ ಸೆಟ್ಸ್, ಸುತ್ತಿಗೆ ಹಾಗೂ 3 ಟಾರ್ಪಾಲ್‌ಗಳು ಮತ್ತು ಹಗ್ಗ

7) ಆರ್.ಸಿ ಪುಸ್ತಕ ನಂ:36455

8) ಮೋಟಾರ್ ಡ್ರೈವಿಂಗ್ ಲೈಸನ್ಸ್ ನಂ:534775 ರ ಜೆರಾಕ್ಸ್ ಪ್ರತಿ.

ಮೇಲ್ಕಂಡ ವಾಹನ ಸಂ: KA-21-167 ಈಚರ್ ಕ್ಯಾಂಟರ್ ಇದರ ಮಾಲೀಕರು ದಿ:10-7-1998ರಂದು ವಾಹನದ ಮಧ್ಯಂತರ ಬಿಡುಗಡೆಗೆ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ ಜಿಲ್ಲೆ ಮಂಗಳೂರುರವರ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ:ಡಿಟಿಸಿಆರ್:1:98-99 ದಿ:5-9-1998 ರಲ್ಲಿ ರೂ. 1,50,000/- ಮೊತ್ತದ ಬ್ಯಾಂಕ್ ಭದ್ರತೆಯನ್ನು ಪ್ರಾಧಿಕಾರಕ್ಕೆ ಒದಗಿಸುವ ಹಾಗೂ ಇತರೆ ಷರತ್ತುಗಳ ಮೇಲೆ ಮಧ್ಯಂತರ ಬಿಡುಗಡೆ ಆದೇಶ ಹೊರಡಿಸಲಾಗಿದ್ದು,ಸದ್ರಿ ಮಧ್ಯಂತರ ಆದೇಶದ ವಿರುದ್ಧ ವಾಹನದ ಮಾಲೀಕರು ಮಾನ್ಯ ದ.ಕ ಜಿಲ್ಲಾ 3ನೇ ಹೆಚ್ಚುವರಿ ಸೆಷನ್ ಜಡ್ಜ್ ನ್ಯಾಯಾಲಯ ಮಂಗಳೂರು ಇದರ ಕ್ರಿಮಿನಲ್ ಅಪೀಲ್ ಸಂ:137/98ರಲ್ಲಿ ಮೇಲ್ಮನವಿ ಸಲ್ಲಿಸಿ ಮಾನ್ಯ ನ್ಯಾಯಾಲಯವು ಸದ್ರಿ ಮೇಲ್ಮನವಿಯ ವಿಚಾರಣೆ ನಡೆಸಿ ದಿನಾಂಕ 29-10-1998ರಂದು ಹೊರಡಿಸಿದ ತೀರ್ಪು ಆದೇಶದಲ್ಲಿ ಪ್ರಾಧಿಕಾರದ ಮಧ್ಯಂತರ ಆದೇಶದಲ್ಲಿ ವಿಧಿಸಿರುವ ಷರತ್ತುಗಳ ಪೈಕಿ ರೂ.150,000/- ಮೌಲ್ಯದ ಬ್ಯಾಂಕ್ ಗ್ಯಾರಂಟಿಯ ಬದಲಾಗಿ ರೂ. 1,50,000/- ಮೌಲ್ಯದ ಇಂಡೆಮ್ನಿಟಿ ಬಾಂಡ್‌ನ್ನು ಪಡೆದುಕೊಂಡು ಹಾಗೂ ಇತರೇ ಷರತ್ತುಗಳ ಅನುಸಾರ ವಾಹನದ ಮಧ್ಯಂತರ ಬಿಡುಗಡೆಗೆ ಆದೇಶ ನೀಡಿರುತ್ತದೆ. ಸತ್ರ ನ್ಯಾಯಾಲಯದ ಮೇಲಿನ ಆದೇಶವನ್ನು ಗೌರವಿಸಿ, ಪ್ರಾಧಿಕಾರದಿಂದ ದಿನಾಂಕ 5-11-1998ರಲ್ಲಿ ಹೊರಡಿಸಿದ ಆದೇಶದಲ್ಲಿ ವಾಹನವನ್ನು ವಾಹನದ ಮಾಲಿಕರಿಗೆ ಮಧ್ಯಂತರ ಬಿಡುಗಡೆಗೊಳಿಸಿ ಆದೇಶಿಸಲಾಗಿರುತ್ತದೆ. ಆ ಪ್ರಕಾರ ವಾಹನದ ಮಾಲೀಕರು ರೂ.1,50,000/-ಮೌಲ್ಯದ ಇಂಡೆಮ್ನಿಟಿ ಬಾಂಡನ್ನು ಮತ್ತು ಶ್ರೀ.ಕೃಷ್ಣಸ್ವಾಮಿ, ಬಿನ್: ಹನುಮಂತಪ್ಪ, ಕೆಳಕೋಟೆ ಎಕ್ಸ್‌ಟೆನ್ಸನ್, ಚಿತ್ರದುರ್ಗ ಎಂಬವರನ್ನು ಶ್ಯೂರಿಟಿಯನ್ನಾಗಿ ಪ್ರಾಧಿಕಾರಕ್ಕೆ ಒದಗಿಸಿ, ವಾಹನವನ್ನು ತನ್ನ ಮಧ್ಯಂತರ ಸುಪರ್ದಿಗೆ ಪಡೆದುಕೊಂಡಿರುತ್ತಾರೆ.

ಸದ್ರಿ ಪ್ರಕರಣದ ಮುಟ್ಟುಗೋಲು ನಡವಳಿಯನ್ನು ದಿ:12-7-2001ರಿಂದ ಪ್ರಾರಂಭಿಸಿ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಯಶವಂತ ಕುಮಾರ್, ಅಬಕಾರಿ ನಿರೀಕ್ಷಕರು,ಉಳ್ಳಾಲ ವಲಯ,ಉಳ್ಳಾಲ ಇವರನ್ನು ಪಿಡಬ್ಲ್ಯೂ-1 ರನ್ನರಾಗಿ ದಿನಾಂಕ:13-12-2001ರಂದು, ಪ್ರಕರಣದ ಫಿರ್ಯಾದುದಾರರಾದ ಶ್ರೀ.ಕೆ.ಗುರುಮೂರ್ತಿ ಅಬಕಾರಿ ನಿರೀಕ್ಷಕರು ಇವರನ್ನು ಪಿಡಬ್ಲ್ಯೂ-2 ರನ್ನರಾಗಿ ದಿ:12-9-2002ರಂದು ಮತ್ತು ಪ್ರಕರಣದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಕರವರಿಗೆ ಒಪ್ಪಿಸಿರುವ ಶ್ರೀ.ಯು.ರಾಮ ಅಬಕಾರಿ ಮುಖ್ಯ ರಕ್ಷಕ ಇವರನ್ನು ಪಿಡಬ್ಲ್ಯೂ-3 ರನ್ನಾಗಿ ದಿ:17-10-2007ರಂದು ಅಭಿಯೋಗದ ಪರ ಸಾಕ್ಷಿ ವಿಚಾರಣೆ ನಡೆಸಲಾಗಿರುತ್ತದೆ. ಸಾಕ್ಷಿ ವಿಚಾರಣಾ ಸಂದರ್ಭದಲ್ಲಿ ವಾಹನದ ಮಾಲೀಕರು, ವಾಹನದ ಮಾಲೀಕರ ಪರ ಜಿ.ಪಿ.ಎ.ದಾರರು ಹಾಗೂ ವಾಹನದ ಮಾಲೀಕರ ರಕ್ಷಣಾ ವಕೀಲರಿಗೆ ಹಲವಾರು ಬಾರಿ ನೋಟಿಸುಗಳನ್ನು ನೀಡಿ ರಕ್ಷಣಾ ಸಾಕ್ಷಿ ವಿಚಾರಣೆಗೆ ಅವಕಾಶವನ್ನು ಕಲ್ಪಿಸಿದ್ದರೂ ಸದ್ರಿಯವರು ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದರಿಂದ ರಕ್ಷಣಾ ಪರ ಹೇಳಿಕೆಗಳು ಇಲ್ಲವೆಂದು ತೀರ್ಮಾನಿಸಿ ಮುಟ್ಟುಗೋಲು ನಡವಳಿಯನ್ನು ಮುಕ್ತಾಯಗೊಳಿಸಿ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ,ದ.ಕ ಜಿಲ್ಲೆ, ಮಂಗಳೂರು ಇಲ್ಲಿ ಪ್ರಾಧಿಕಾರದ ಮುಟ್ಟುಗೋಲು ಅದೇಶ ಸಂ:ಎಸ್‌ಡಿಕೆ:1: ಡಿಟಿಸಿಆರ್: 1998-99 ದಿನಾಂಕ:24-10-2007ರಂತೆ ವಾಹನವನ್ನು ಮುಟ್ಟುಗೋಲು ಹಾಕಿಕೊಂಡು ಪ್ರಾಧಿಕಾರದ ಮಧ್ಯಂತರ ಬಿಡುಗಡೆಗೆ ಆದೇಶವನ್ನು ರದ್ದುಗೊಳಿಸಿ, ವಾಹನವನ್ನು ತಕ್ಷಣ ಪ್ರಾಧಿಕಾರದ ವಶಕ್ಕೆ ಒಪ್ಪಿಸಲು ಆದೇಶಿಸಲಾಗಿರುತ್ತದೆ.

ಪ್ರಾಧಿಕಾರದ ಮುಟ್ಟುಗೋಲು ಅದೇಶದ ವಿರುದ್ಧ ವಾಹನದ ಮಾಲೀಕರಾದ ಶ್ರೀ.ಡಿ.ಎಸ್. ಧರ್ಮಪ್ಪ, ಬಿನ್:ಶಾಂತ ಮಲ್ಲಪ್ಪ, ಕಾಫಿ ಪ್ಲಾಂಟರ್ಸ್, ಕೊಲಗೇರಿ ಎಸ್ಟೇಟ್, ದೋಣಿಗಲ್ ಅಂಚೆ, ಸಕಲೇಶಪುರ, ಹಾಸನ ಜಿಲ್ಲೆ ಇವರು ಮಾನ್ಯ 3ನೇ ಜಿಲ್ಲಾ ಹೆಚ್ಚುವರಿ ಸೆಷನ್ ಜಡ್ಜ್ ನ್ಯಾಯಾಲಯ, ದ.ಕ ಜಿಲ್ಲೆ ಮಂಗಳೂರು ಇಲ್ಲಿ ಕ್ರಿಮಿನಲ್ ಅಪೀಲ್ ಸಂ: 324/2007 ರಂತೆ ಮೇಲ್ಮನವಿ ಸಲ್ಲಿಸಿದ್ದು,ಮಾನ್ಯ ಸತ್ರ ನ್ಯಾಯಾಲಯವು ದಿ:18-2-2009ರಂದು ಆದೇಶ ಹೊರಡಿಸಿ ಈ ಕೆಳಕಂಡಂತೆ ತೀರ್ಪು ನೀಡಿರುತ್ತಾರೆ.

1) Crl.A.No:324/2007 is allowed.

2) The order of the learned respondent No:2 in SDK/DTCR/1/ 98-99, dated:24-10-2007 is hereby set aside.

3) The matter is remanded back to the learned respondent No:2 to dispose of the matter in accordance with law and interms of the observation made in the body of the judgment.

4) The respondent No:2 shall permit the prosecution to produce the certified copies of the documents relied on by the prosecution witnesses or attested copies from the investigating officer and thereafter, providing opportunity to the appellant to pass appropriate order in accordance with law.

5) Send back the records to the lower court.

ಮಾನ್ಯ 3ನೇ ಜಿಲ್ಲಾ ಹೆಚ್ಚುವರಿ ಸೆಷನ್ ಜಡ್ಜ್ ನ್ಯಾಯಾಲಯ, ದ.ಕ ಜಿಲ್ಲೆ, ಮಂಗಳೂರು ಇವರ ಕ್ರಿಮಿನಲ್ ಅಪೀಲ್ ಸಂ: 324/2007 ರ ದಿ:18-2-2009ರ ಆದೇಶದಂತೆ ಪ್ರಕರಣದಲ್ಲಿ ಕಕ್ಷಿದಾರರಿಗೆ ಅವಕಾಶ ಕೊಟ್ಟು ಹಾಗೂ ಅಭಿಯೋಗ ಸಾಕ್ಷಿದಾರರ ಪಾಟೀ ಸವಾಲಿಗೆ ಅವಕಾಶ ನೀಡುವ ಪ್ರಯುಕ್ತ ಪ್ರಕರಣದಲ್ಲಿ ಪಾಟೀ ಸವಾಲಿಗಾಗಿ ದಿನಾಂಕ:10-6-09, 12-8-09, 13-10-2009,15-12-2009,16-2-2010,27-4-2010 ಮತ್ತು 15-6-2010 ರಂದು ಮರು ವಿಚಾರಣಾ ದಿನಾಂಕ ನಿಗದಿ ಪಡಿಸಿ ಈ ಕೆಳಕಂಡಂತೆ ಪಾಟೀ ಸವಾಲು ಹಾಗೂ ವಾದ ವಿವಾದ ನಡೆಸಿ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸಬೇಕಾಗಿರುವುದು ಅಗತ್ಯವಾಗಿದ್ದು ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:04.07.1998ರಂದು KA-21-167 ಈಚರ್ ಕ್ಯಾಂಟರ್ ಲಾರಿಯಲ್ಲಿ ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ 1387.440 ಲೀ.ಭಾ.ತ. ಮದ್ಯವನ್ನು ಸಾಗಾಣಿಕೆ ಮಾಡಲಾಗಿದೆಯೇ?

2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಮದ್ಯ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದಾರೆಯೇ?

3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ ಹೌದು ಎಂದು. ಎರಡನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಶ್ರೀ.ಯಶವಂತ ಕುಮಾರ್, ಅಬಕಾರಿ ನಿರೀಕ್ಷಕರು, ಉಳ್ಳಾಲ ವಲಯ ಪಿಡಬ್ಲ್ಯೂ-1 ಇವರನ್ನು ದಿನಾಂಕ:16-2-2010ರಂದು ರಕ್ಷಣಾ ಪರ ವಕೀಲರಾದ ಶ್ರೀ.ಸುಬ್ಬಯ್ಯ ರೈ ಇವರು ಸದ್ರಿಯವರ ದಿನಾಂಕ:13-12-2001ರ ಸಾಕ್ಷಿ ವಿಚಾರಣೆಯನ್ನು ಮುಂದುವರಿಸಿ ಪಾಟೀ ಸವಾಲು ನಡೆಸಿ ಸಾಕ್ಷಿದಾರರು ಪಾಟೀಸವಾಲಿಗೆ ಉತ್ತರಿಸುತ್ತಾ ಈ ಪ್ರಕರಣಕ್ಕೆ ಸಂಬಂಧಪಟ್ಟ ವಾಹನದ ಮಾಲೀಕರ ಹೇಳಿಕೆ ನಾನು ಪಡೆದುಕೊಂಡಿಲ್ಲ,ವಾಹನದಲ್ಲಿ ಆರ್.ಸಿ ದೊರೆತ ಕಾರಣ ಅವರನ್ನು ಆರೋಪಿಯಾಗಿ ವಿಚಾರಿಸಿರುತ್ತೇನೆ, ಬೇರೆ ದಾಖಲೆಗಳನ್ನು ಅವರು ನೇರವಾಗಿ ಪ್ರಕರಣದಲ್ಲಿ ಶಾಮೀಲಾದ ಬಗ್ಗೆ ನನಗೆ ದೊರೆತಿರುವುದಿಲ್ಲ, ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಮಾದರಿ ಬಾಟಲಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿಲ್ಲ ಹಾಗೂ ಅವರಿಂದ ವರದಿ ಪಡೆದುಕೊಂಡಿಲ್ಲವೆಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ನ್ಯಾಯಾಲಯದಲ್ಲಿ ಸುಳ್ಳು ಅಪಾದನೆ ಪಟ್ಟಿ ಸಲ್ಲಿಸಿ ಅಪಾದನೆ ಮಾಡಿದ್ದೇನೆ ಎಂದರೆ ಸರಿಯಲ್ಲ, ತಕ್ಷೀರಿಗೂ, ವಾಹನ ಮಾಲೀಕರಿಗೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ ,ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸುತ್ತಾರೆ.

ವಿಚಾರಣೆ ವೇಳೆಯಲ್ಲಿ ಮಾನ್ಯ ಸತ್ರ ನ್ಯಾಯಾಲಯದ ಆದೇಶದ ಖಂಡಿಕೆ 4ರಲ್ಲಿ ಸೂಚಿಸಿರುವ ತನಿಖಾದಿಕಾರಿಗಳಿಂದ ಗುರುತು ಮಾಡಲ್ಪಟ್ಟಿರುವ ನಿಶಾನೆ ಪಿ-1 (ರಾಸಾಯನಿಕ ವಿಶ್ಲೇಷಣೆ ಪ್ರತಿ) ನಿಶಾನೆ ಪಿ-2 (ಸೊತ್ತು ಪಟ್ಟಿ ಪ್ರತಿ) ನಿಶಾನೆ ಪಿ-3 (ಸ್ಥಳ ಮಹಜರು ಪ್ರತಿ) ರ ನಕಲು ಪ್ರತಿಗಳನ್ನು ದೃಡೀಕರಿಸಿ ಪಡೆಯಲಾಗಿರುತ್ತದೆ.

ಶ್ರೀ.ಕೆ.ಗುರುಮೂರ್ತಿ ಅಬಕಾರಿ ನಿರೀಕ್ಷಕರು ಪಿಡಬ್ಲ್ಯೂ-2 ಇವರನ್ನು ದಿನಾಂಕ:12-9-2002 ರ ಮುಖ್ಯ ಸಾಕ್ಷಿ ವಿಚಾರಣೆಯನ್ನು ಮುಂದುವರಿಸಿ ರಕ್ಷಣಾ ಪರ ವಕೀಲರಾದ ಶ್ರೀ.ಸುಬ್ಬಯ್ಯ ರೈ ಇವರ ಪರವಾಗಿ ಶ್ರೀ.ಎಂ.ಕೆ ಆಳ್ವ ಇವರು ದಿನಾಂಕ:16-2-2010ರಂದು ಪಾಟೀ ಸವಾಲು ನಡೆಸಿ ಅಭಿಯೋಗದ ಪರ ಪಿ.ಡಬ್ಲ್ಯೂ-1ರವರು ಉತ್ತರಿಸುತ್ತಾ ಆ ದಿನ ನಮಗೆ ಈ ಪ್ರಕರಣದ ಬಗ್ಗೆ ವರ್ತಮಾನ ಬಂದಿರುವುದಿಲ್ಲ. ಆದರೆ ಅಬಕಾರಿ ಜಂಟಿ ಆಯುಕ್ತರು ರಸ್ತೆಗಾವಲು ನಡೆಸಲು ಸೂಚಿಸಿದ ಪ್ರಕಾರ ನಾವು ಆ ದಿವಸ ರಸ್ತೆಗಾವಲು ನಡೆಸಿರುತ್ತೇವೆ. ಆ ದಿನ ರಾತ್ರಿ 2 ಗಂಟೆ ಸಮಯ ನಾವು ಇಲಾಖಾ

ವಾಹನದಲ್ಲಿ ಕಚೇರಿಯಿಂದ ಹೊರಟಿರುತ್ತೇನೆ. ಆ ದಿನ ನಮ್ಮ ಜೊತೆ ಅಬಕಾರಿ ಉಪ ಅಧೀಕ್ಷಕರು, ಇಬ್ಬರು ಅಬಕಾರಿ ರಕ್ಷಕರು ಮತ್ತು ಒಬ್ಬರು ಚಾಲಕರು ನಮ್ಮ ಜೊತೆ ಇದ್ದರು, ನಾವು ಗಸ್ತು ಕರ್ತವ್ಯಕ್ಕೆ ಹೋಗಿರುವ ಬಗ್ಗೆ ನಮೂದಿಸಿರುತ್ತೇವೆ. ತಕ್ಷೀರು ಸ್ಥಳಕ್ಕೆ 15 ನಿಮಿಷ ದಲ್ಲಿ ತಲುಪಿರುತ್ತೇವೆ. ಆ ದಿನ ಕೆಲವೊಂದು ವಾಹನ ತಪಾಸಣೆ ಮಾಡಿದ್ದು ಅದರ ನಿಖರವಾದ ಸಂಖ್ಯೆ ತಿಳಿದಿರುವುದಿಲ್ಲ. ತಕ್ಷೀರು ಸ್ಥಳ ರಾಷ್ಟ್ರೀಯ ಹೆದ್ದಾರಿ ಆಗಿದ್ದು ಬಿ.ಸಿ ರೋಡಿನಿಂದ ಮಂಗಳೂರಿಗೆ ಹೋಗುವ ರಸ್ತೆಯಾಗಿರುತ್ತದೆ. ಸದ್ರಿ ರಸ್ತೆಯಲ್ಲಿ ಸದಾ ವಾಹನ ಸಂಚಾರ ಇರುತ್ತದೆ. ಆ ದಿನ ನಾವು ನಮ್ಮ ವಾಹನವನ್ನು ಯಾವ ಕಡೆಗೆ ಮುಖ ಮಾಡಿ ನಿಲ್ಲಿಸಿದ್ದೆವು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ, ಏಕೆಂದರೆ ಅದನ್ನು ಯಾವ ಕಡೆಗೂ ತಿರುಗಿಸುವ ರೀತಿಯಲ್ಲಿ ನಿಲ್ಲಿಸಿದ್ದೆವು. ಮಹಜರಿನಲ್ಲಿ ತಕ್ಷೀರು ಸ್ಥಳದ ಚೆಕ್ ಬಂದಿ ನಮೂದಿಸಿಲ್ಲ. ತಕ್ಷೀರಿಗೆ ಸಂಬಂಧಪಟ್ಟ ವಾಹನವನ್ನು 3 ಗಂಟೆ ಸಮಯಕ್ಕೆ ನಾವು ಪ್ರಥಮವಾಗಿ ನೋಡಿರುತ್ತೇವೆ. ನನ್ನ ಜೊತೆ ಇದ್ದ ಸಿಬ್ಬಂಧಿ ಚೆನಿಯಪ್ಪ ನಾಯ್ಕ ವಾಹನವನ್ನು ನಿಲ್ಲಿಸಲು ಸನ್ನೆ ಮಾಡಿರುತ್ತಾರೆ. ನಾವು ವಾಹನ ಶೋಧಿಸುವ ಪೂರ್ವದಲ್ಲಿ ಸರ್ಚ್ ವಾರೆಂಟ್ ಪಡೆದಿರುವುದಿಲ್ಲ. ಹಾಗೂ ಪಡೆಯದೇ ಇರುವ ಕಾರಣದ ಬಗ್ಗೆ ದಾಖಲೆ ತಯಾರಿಸಿದ್ದು, ಆದರೆ ಈ ಬಗ್ಗೆ ಮಹಜರಿನಲ್ಲಿ ಉಲ್ಲೇಖ ಮಾಡಿರುವುದಿಲ್ಲ. ನಮ್ಮ ಸಿಬ್ಬಂಧಿಯವರು ವಾಹನದ ಟರ್ಪಾಲನ್ನು ತೆಗೆದಿರುತ್ತಾರೆ, ನಮ್ಮ ಸಿಬ್ಬಂಧಿಗಳ ಮೂಲಕನೇ ಮದ್ಯವನ್ನು ಲಾರಿಯಿಂದ ಕೆಳಗಿಳಿಸಿರುತ್ತೇವೆ, ಎಲ್ಲಾ 160 ಮದ್ಯದ ಬಾಟಲಿಗಳು ತುಂಬಿದ ಪೆಟ್ಟಿಗೆಗಳಿಗೆ ಕ್ರಮ ಸಂಖ್ಯೆ ನೀಡಿರುವುದಿಲ್ಲ. ಅವುಗಳನ್ನು ಪರಿಶೀಲನೆ ಮಾತ್ರ ಮಾಡಿರುತ್ತೇವೆ, ಎಲ್ಲಾ ಪೆಟ್ಟಿಗೆಗಳಲಿದ್ದ ಬಾಟಲಿಗಳನ್ನು ತೆಗೆದು ಮಾದರಿ ಸಂಗ್ರಹಿಸಿ ರುವುದಿಲ್ಲ. ಮಾದರಿ ಮೊಹರು ಚೀಟಿಯನ್ನು ಸ್ಥಳದಲ್ಲೇ ತಯಾರಿಸಿರುತ್ತೇವೆ. ನಿಶಾನೆ ಪಿ–3 ಮಹಜರು ನನ್ನ ಕೈಬರಹದಲ್ಲಿರುತ್ತದೆ. ತಕ್ಷೀರು ಸ್ಥಳದ ಬಳಿ ವಾಸದ ಮನೆ ಇರುವುದಿಲ್ಲ. ಆದರೆ ವಾಣಿಜ್ಯ ಕಟ್ಟಡ ಗಳಿರುತ್ತದೆ. ಸ್ವತಂತ್ರ ವ್ಯಕ್ತಿಗಳ ಸಾಕ್ಷಿ ಗಳಿಸಲು ನಾವು ಪ್ರಯತ್ನಿಸಿರುತ್ತೇವೆ ಆದರೆ ಯಾರೂ ಲಭ್ಯವಾಗಿರುವುದಿಲ್ಲ. ತಕ್ಷೀರು ಮುಂಜಾನೆ ಪತ್ತೆಯಾದ ಕಾರಣ ನಾವು ನಿಶಾನೆ ಪಿ–3 ನ್ನು ಸ್ಥಳದಲ್ಲಿಯೇ ತಯಾರಿಸಿಲ್ಲ, ಕಛೇರಿಯಲ್ಲೇ ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಆದಿನ ತಕ್ಷೀರು ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿದಂತ ವಾಹನದಿಂದ ಯಾವುದೇ ಮದ್ಯ ವಶಪಡಿಸಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮುಲಾಜಿಗೆ ತಕ್ಷೀರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ವಾಹನಕ್ಕೂ ತಕ್ಷೀರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ, ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಎಲ್ಲಾ ದಾಖಲಾತಿಗಳನ್ನು ಕಛೇರಿಯಲ್ಲಿ ನಮ್ಮ ಅನುಕೂಲಕ್ಕೆ ತಕ್ಕಂತೆ ತಯಾರಿಸಿದ್ದೇವೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಡಿಡಬ್ಲ್ಯೂ–1

ರಕ್ಷಣಾ ಸಾಕ್ಷಿದಾರರಾದ ಶ್ರೀ.ಡಿ.ಎಸ್.ಧರ್ಮಪ್ಪ, ಕೊಲ್ಲಗೇರಿ ಎಸ್ಟೇಟ್, ಹಾಸನ ಜಿಲ್ಲೆ ಇವರನ್ನು ರಕ್ಷಣಾ ಪರ ವಕೀಲರು ಡಿಡಬ್ಲ್ಯೂ–1 ರನ್ನಾಗಿ ದಿ:15–6–2010ರಂದು ಪ್ರಾಧಿಕಾರದ ಮುಂದೆ ಹಾಜರು ಪಡಿಸಿ, ಸದ್ರಿ ರಕ್ಷಣಾ ಸಾಕ್ಷಿದಾರರು ಸಾಕ್ಷ್ಯ ನೀಡುತ್ತಾ ತಾನು ಈ ಕೇಸಿನ ಅರ್ಜಿದಾರನಾಗಿದ್ದು, ಈಚರ್ ಲಾರಿ ಸಂ:KA-21-167 ರ ಮಾಲೀಕನಾಗಿರುತ್ತೇನೆ. ತಾನು ಸಕಲೇಶಪುರದಲ್ಲಿ ಕಾಫಿ ಪ್ಲಾಂಟರ್‌ನಾಗಿರುತ್ತೇನೆ. ತಾನು ನನ್ನ ವಾಹನವನ್ನು ಹಾಸನದಿಂದ ಮಂಗಳೂರಿಗೆ ತರಕಾರಿ ಸಾಗಿಸಲು ಮತ್ತು ತನ್ನ ಸ್ವಂತ ತೋಟದ ಉಪಯೋಗಕ್ಕಾಗಿ ಬಳಸುತ್ತಿದ್ದೆ. ಮೇಲೆ ಹೇಳಿದ ವಾಹನಕ್ಕೆ ತಾನು ಬೇಲೂರು ಕೂಮಾರ ಎಂಬವರನ್ನು ಚಾಲಕನನ್ನಾಗಿ ತೆಗೆದು ಕೊಂಡಿದ್ದೆ. ಈ ಘಟನೆ ನಡೆಯುವ 4 ವರ್ಷದ ಹಿಂದೆ ಅವರನ್ನು ನೇಮಕ ಮಾಡಿದ್ದೆ. ಚಾಲಕ ನನ್ನು ನೇಮಿಸುವಾಗ ಅತನಿಗೆ ಯಾವುದೇ ಕೆಟ್ಟ ಕೆಲಸ ಮಾಡಬಾರದೆಂದು ಹಾಗೂ ಬೇಡದ ವಸ್ತುಗಳನ್ನು ಸಾಗಾಣಿಕೆ ಮಾಡಬಾರದೆಂದು ತಿಳಿಸಿದ್ದೆ. ಆ ಸಮಯದಲ್ಲಿ ನಾನು ಅವನ ಪೂರ್ವಾಪರಗಳನ್ನು ವಿಚಾರಿಸಿದ್ದೆ. ದಿ:3–7–98 ರಂದು ಹಾಸನದಿಂದ ಮೇಲೆ ಹೇಳಿದ ಲಾರಿಗೆ ತರಕಾರಿ ಲೋಡ್ ಮಾಡಿ ಮಂಗಳೂರಿಗೆ ಕಳುಹಿಸಿದ್ದೆ, ಮಾರನೇ ದಿವಸ ಬೆಳಿಗ್ಗೆ ಪೇಪರ್ ನೋಡಿದಾಗ ತನಗೆ ತನ್ನ ವಾಹನವನ್ನು ಅಬಕಾರಿ ಪೊಲೀಸರು ವಶಪಡಿಸಿಕೊಂಡ ಸುದ್ದಿ ಗೊತ್ತಾಗಿ ತಾನು ಮಂಗಳೂರಿಗೆ ಕೂಡಲೇ ಬಂದು ಅಬಕಾರಿ ನಿರೀಕ್ಷಕರನ್ನು ವಿಚಾರಿಸಿದಾಗ ಆ ವಾಹನದಲ್ಲಿ ಅಕ್ರಮ ಮದ್ಯ ಸಾಗಾಟ ಮಾಡುತ್ತಿದ್ದುದರಿಂದ ಅದನ್ನು ನಾವು ಜಪ್ತು ಮಾಡಿದ್ದೇವೆಂದು ಅವರು ತಿಳಿಸಿದರು. ಸದ್ರಿ ಸಾಗಾಟದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲದ ಕಾರಣ ತನ್ನ ವಾಹನವನ್ನು ಬಿಟ್ಟು ಕೊಡಲು ಅಬಕಾರಿ ನಿರೀಕ್ಷಕರ ಹತ್ತಿರ ಕೇಳಿದೆ, ವಾಹನವನ್ನು ಬಿಟ್ಟುಕೊಡಲು ಸಾಧ್ಯವಿಲ್ಲ, ನೀವು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಎಂದು ತಿಳಿಸಿದರು. ಆ ಪ್ರಕಾರ ತಾನು ಈ ಪ್ರಾಧಿಕಾರದ ಮುಂದೆ ತನ್ನ ವಾಹನವನ್ನು ವಶಕ್ಕೆ ಕೇಳಿ ಅರ್ಜಿ ಸಲ್ಲಿಸಿದ್ದೆ. ಈ ಮದ್ಯ ಸಾಗಾಣಿಕೆಯಲ್ಲಿ ತಾನು ಪ್ರತ್ಯೇಕ ಅಥವಾ ಪರೋಕ್ಷವಾಗಿ ಭಾಗಿಯಾಗಿಲ್ಲ ತನ್ನ ಪ್ರಕಾರ ಈ ವಾಹನದಲ್ಲಿ ಯಾವುದೇ ಮದ್ಯ: ಇತರ ಮಾಲನ್ನು ಸಾಗಾಟ ಮಾಡಿಲ್ಲ. ಆದ

ಕಾರಣ ತನಗೆ ವಾಹನವನ್ನು ಬಿಟ್ಟು ಕೊಡಬೇಕಾಗಿ ತಾನು ಈ ಪ್ರಾಧಿಕಾರದ ಮುಂದೆ ಕೇಳಿಕೊಳ್ಳುತ್ತೇನೆ. ತನ್ನ ಮೇಲೆ ಯಾವುದೇ ಕ್ರಿಮಿನಲ್ ಮೊಕದ್ದಮೆ ಇರುವುದಿಲ್ಲ ಎಂದು ರಕ್ಷಣಾ ಸಾಕ್ಷಿ ನೀಡಿರುತ್ತಾರೆ.

ಪಾಟೀ ಸವಾಲು:ಎ.ಡಿ.ಪಿ ರವರಿಂದ:

ತಾನು ನನ್ನ ಚಾಲಕನನ್ನು ವಾಹನಕ್ಕೆ ನೇಮಿಸುವ ಹಿಂದೆ ಸುಮಾರು 4 ವರ್ಷಗಳ ಪರಿಚಯ ತನಗಿತ್ತು ,ಅತನ ಎಲ್ಲಾ ಕುಟುಂಬದ ಪರಿಚಯ ತನಗಿತ್ತು. ತಾನು ಮೇಲೆ ಹೇಳಿದ ವಾಹನವನ್ನು ಮೊದಲ ಬಾರಿಗೆ ಖರೀದಿಸಿದ್ದೆ. ಅದರ ಹಿಂದೆ ತಾನು ಯಾವುದೇ ವಾಹನ ಖರೀದಿಸಿರುವುದಿಲ್ಲ. ಚಾಲಕನನ್ನು ಮೇಲೆ ಹೇಳಿದ ವಾಹನಕ್ಕೆ ನೇಮಿಸುವಾಗ ಕಾನೂನು ಬಾಹಿರ ಕೆಲಸಕ್ಕೆ ವಾಹನವನ್ನು ಬಳಸಬಾರದು ಎಂದು ಆತನಿಗೆ ಲಿಖಿತವಾಗಿ ತಿಳಿಸಿರುವುದಿಲ್ಲ. ತಾನು ತನ್ನ ಚಾಲಕನಲ್ಲಿ ಮೇಲೆ ಹೇಳಿದಂತೆ ಕಾನೂನುಬಾಹಿರ ಕೃತ್ಯ ನಡೆಸಬಾರದಾಗಿ ಆಗಿಂದಾಗ್ಗೆ ಹೇಳುತ್ತಿದ್ದೆ, ಆತನ ಚಟುವಟಿಕೆಗಳ ಬಗ್ಗೆ ಬೇರೆಯಾರಿಂದಲೂ ತಿಳಿದುಕೊಂಡಿರುವುದಿಲ್ಲ. ಆತನ ಪೂರ್ವಾಪರದ ಬಗ್ಗೆ ಚಾಲಕ ನಲ್ಲದೇ ಬೇರೆ ಯಾರಿಂದಲೂ ವಿಚಾರಿಸಿರುವುದಿಲ್ಲ. ನಾನು ಮಾರನೇ ದಿವಸ ಕನ್ನಡ ಪ್ರಭಧಲ್ಲಿ ವಾಹನವನ್ನು ಮಂಗಳೂರಿನಲ್ಲಿ ಅಬಕಾರಿ ಅಧಿಕಾರಿಗಳು ಅಮಾನತ್ತು ಪಡಿಸಿರುವ ಬಗ್ಗೆ ಓದಿರುತ್ತೇನೆ. ನನ್ನ ಚಾಲಕನು ಮೇಲೆ ಹೇಳಿದ ಘಟನೆಯ ನಂತರ ತನ್ನ ಲಾರಿಯನ್ನು ಬಿಟ್ಟುಹೋಗಿರುತ್ತಾನೆ. ನಾನು ಮಂಗಳೂರಿಗೆ ಬಂದು ಅಬಕಾರಿ ಅಧಿಕಾರಿಗಳಲ್ಲಿ ತನ್ನ ವಾಹನದಲ್ಲಿದ್ದ ಅಕ್ರಮ ಮದ್ಯದ ಬಾಟಲಿಗಳ ಬಗ್ಗೆ ವಿಚಾರಿಸಿರುವುದಿಲ್ಲ. ಆ ರೀತಿ ವಿಚಾರಿಸದೇ ಇರಲು ಕಾರಣಗಳಿರುವುದಿಲ್ಲ. ಘಟನೆ ನಂತರ ಚಾಲಕ ಎಲ್ಲಿದ್ದಾನೆಂದು ತನಗೆ ಗೊತ್ತಿಲ್ಲ. ಆತನನ್ನು ತಾನು ಹುಡುಕಿದ್ದರೂ ಅತ ಸಿಗಲಿಲ್ಲ. ಆತ ಊರಿನಲ್ಲಿದ್ದಾನೋ ಇಲ್ಲವೋ ಎಂದು ಹೇಳಲು ತನಗೆ ಬರುವುದಿಲ್ಲ, ದಿ:4–7–1998ರಂದು ತನಗೆ ಸೇರಿದ ಈಚರ್ ಕ್ಯಾಂಟರ್ ವಾಹನದಲ್ಲಿ ಚಾಲಕನು ಅಕ್ರಮವಾಗಿ ಮದ್ಯದ ಪೆಟ್ಟಿಗೆಗಳನ್ನು ಸಾಗಾಟ ಮಾಡುತ್ತಿದ್ದುದರಿಂದ ಅಬಕಾರಿ ನಿರಿಕ್ಷಕರು ಹಾಗೂ ಇತರ ಸಿಬ್ಬಂಧಿಗಳು ತನ್ನ ವಾಹನವನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ, ಹಾಗೂ ಸದ್ರಿ ವಾಹನದಲ್ಲಿ ಆ ಸಂದರ್ಭದಲ್ಲಿ ಮದ್ಯದ ಪಟ್ಟಿಗೆಗಳನ್ನು ಅಕ್ರಮವಾಗಿ ಸಾಗಾಟ ಮಾಡುವ ವಿಚಾರ ತನಗೆ ಖುದ್ದಾಗಿ ಗೊತ್ತಿರುತ್ತದೆ ಹಾಗೂ ಈ ಬಗ್ಗೆ ಯಾವುದೇ ಮುಂಜಾಗ್ರತೆ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ, ಹಾಗೂ ತನ್ನ ವಾಹನವನ್ನು ಅಬಕಾರಿ ಕಾಯಿದೆ ಅಡಿ ಅಕ್ರಮ ಮದ್ಯದ ಪೆಟ್ಟಿಗೆಗಳನ್ನು ಸಾಗಾಣಿಕೆ ಮಾಡಿರುವ ಕಾರಣ ಮುಟ್ಟುಗೋಲು ಹಾಕಿಕೊಳ್ಳಲು ಅರ್ಹ ಎಂದರೆ ಸರಿಯಲ್ಲ, ತಾನು ಈ ಪ್ರಾಧಿಕಾರದಲ್ಲಿ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸುತ್ತಾರೆ.

ಪ್ರಕರಣದಲ್ಲಿ ಈ ಹಿಂದಿನ ಅಭಿಯೋಗದ ಪರ ಸಾಕ್ಷಿ ವಿಚಾರಣೆಯನ್ನು ಮುಂದುವರಿಸಿ ಮೇಲಿನಂತೆ ನಡೆಸಲಾದ ಪಿಡಬ್ಲ್ಯೂ–1 ಮತ್ತು ಪಿಡಬ್ಲ್ಯೂ–2 ರವರ ಪಾಟೀ ಸವಾಲು ವಿವರಣೆ ಹಾಗೂ ರಕ್ಷಣಾ ಪರ ಸಾಕ್ಷಿ ವಿಚಾರಣಾ ಅಂಶಗಳು ಮತ್ತು ರಕ್ಷಣಾ ವಕೀಲರ ಹಾಗೂ ಅಭಿಯೋಗದ ವಾದ ವಿವಾದವನ್ನು ಆಲಿಸಿ, ಈ ಹಿಂದಿನ ವಿಚಾರಣೆ ಸಂದರ್ಭದಲ್ಲಿ ಗುರುತಿಸಲಾಗಿರುವ ನಿಶಾನೆ ಪಿ–1, 2 ಮತ್ತು 3 ರವರೆಗಿನ ದಾಖಲಾತಿಗಳನ್ನು ಅವಲೋಖನೆ ಮಾಡಿ ದಿನಾಂಕ:4–7–1998 ರಂದು ಜಪ್ತು ಪಡಿಸಿರುವ ಈಚರ್ ಕ್ಯಾಂಟರ್ ಲಾರಿ ಸಂ:KA-21-167 ರಲ್ಲಿ 1387.440 ಲೀಟರು ಭಾರತೀಯ ತಯಾರಿಕಾ ಮದ್ಯವನ್ನು ಅಕ್ರಮವಾಗಿ ಸಾಗಾಟ ಮಾಡಿರುವುದನ್ನು ಕಾನೂನಿನಂತೆ ಕ್ರಮ ಜರುಗಿಸಿ ಮಹಜರು ತಯಾರಿಸಲು ಸ್ಥಳೀಯ ಸಾಕ್ಷಿದಾರರನ್ನು ಪಡೆಯಲು ಸಾಕಷ್ಟು ಪ್ರಯತ್ನ ಪಟ್ಟರೂ ದೊರೆಯದ ಕಾರಣ ಸಿಬ್ಬಂಧಿ ಸಮಕ್ಷಮದಲ್ಲಿ ವಾಹನ ಪರಿಶೀಲನೆ ಪೂರ್ವದಲ್ಲಿ ಸರ್ಚ್ ಮೆಮೋ ತಯಾರಿಸಿ ಸೊತ್ತು ಸಮೇತ ವಾಹನ ವಶಪಡಿಸಿಕೊಂಡಿದ್ದು, ಅಕ್ರಮ ಮದ್ಯ ಸಾಗಾಣಿಕೆಗೆ ಈಚರ್ ಕ್ಯಾಂಟರ್ ಲಾರಿ ಸಂ:KA-21-167ನ್ನು ಬಳಸಿರುವುದು ಪ್ರಾಧಿಕಾರದ ಮುಂದೆ ವಿಚಾರಣೆಗೆ ಒಳಪಟ್ಟಿರುವ ಸಾಕ್ಷ್ಯಾಧಾರಗಳಿಂದ ಸಾಭೀತಾಗಿರುವುದರಿಂದ ಅಂದಿನ ಪ್ರಾಧಿಕಾರದ ದಿನಾಂಕ:24–10–2007ರ ಅಂತಿಮ ಆದೇಶವನ್ನು ಎತ್ತಿ ಹಿಡಿದು ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನದ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಈಚರ್ ಕ್ಯಾಂಟರ್ ಲಾರಿ ಸಂ:KA-21-167 ಇದರ ಮಾಲೀಕರು ಪ್ರಕರಣದಲ್ಲಿ ವಾಹನ ಜಪ್ತಾದ ತಕ್ಷಣದಲ್ಲಿ ವಾಹನದ ಮಧ್ಯಂತರ ಬಿಡುಗಡೆ ಬಗ್ಗೆ ಅರ್ಜಿ ಸಲ್ಲಿಸಿ ಮಧ್ಯಂತರ ಬಿಡುಗಡೆಗೆ ಕೋರಿರುವರಾದರೂ ವಾಹನವನ್ನು ತನ್ನ ಗಮನಕ್ಕೆ ಬಾರದೇ ಅಕ್ರಮ ಮದ್ಯ ಸಾಗಾಣಿಕೆಗೆ ಚಾಲಕನಿಂದ ಬಳಸಲಾಗಿತ್ತು ಎಂಬ ಬಗ್ಗೆ ಪುರಾವೆಗಳೊಂದಿಗೆ ಸಾಬೀತುಪಡಿಸಲು ಪ್ರಯತ್ನಿಸಿರುವುದು ಕಂಡುಬರುವುದಿಲ್ಲ. ಈ ಹಿಂದಿನ ವಿಚಾರಣೆ ಸಂದರ್ಭಗಳಲ್ಲಿ ಸಾಕಷ್ಟು ಕಾಲಾವಕಾಶ ನೀಡಿ ಪ್ರಾಧಿಕಾರದ ಮುಂದೆ ಹಾಜರಾಗಲು ವಾಹನದ ಮಾಲೀಕರಿಗೆ/ ಪರ ವಕೀಲರಿಗೆ ನೋಟಿಸುಗಳನ್ನು ನೀಡಲಾಗಿದ್ದರೂ. ವಾಹನದ ಮಾಲೀಕರು

ಪ್ರಾಧಿಕಾರದ ಮುಂದ ಹಾಜರಾಗಿ ವಿಚಾರಣೆಗೆ ಸಹಕರಿಸಿರುವುದಿಲ್ಲ. ಹಾಗೂ ಸದ್ರಿ ಮುಟ್ಟುಗೋಲು ಆದೇಶದ ಕಾರಣಗಳನ್ನು ಸಮರ್ಥಿಸಿ ಮಾನ್ಯ ಹೆಚ್ಚುವರಿ ಸತ್ರ ನ್ಯಾಯಾಲಯವು ಪ್ರಾಧಿಕಾರದ ಆದೇಶವನ್ನು ತಳ್ಳಿಹಾಕಿ ಮರು ವಿಚಾರಣೆಗೆ ಹೊರಡಿಸಿದ ತೀರ್ಪು ಆದೇಶದ ನಂತರದಲ್ಲಿ ವಾಹನದ ಮಾಲೀಕರು ಎಚ್ಚೆತ್ತು ಪ್ರಾಧಿಕಾರ ನಡೆಸಿದ ಮುಟ್ಟುಗೋಲು ನಡವಳಿ ಅಭಿಯೋಗದ ಸಾಕ್ಷ ಹಾಗೂ ರಕ್ಷಣಾ ಸಾಕ್ಷಿ ವಿಚಾರಣಾ ಸಂದರ್ಭದಲ್ಲಿ ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಹೇಳಿಕೆಗಳನ್ನು ನೀಡಿದ್ದು, ಸದ್ರಿ ಸಾಕ್ಷಿಯಲ್ಲಿ ವಿವರಣೆ ನೀಡುತ್ತಾ ತನ್ನ ವಾಹನಕ್ಕೆ ನೇಮಿಸಲಾದ ಚಾಲಕನಿಗೆ ನೇಮಕ ಪೂರ್ವದಲ್ಲಿ ವಾಹನವನ್ನು ಯಾವುದೇ ಅಕ್ರಮ ಚುಟುವಟಿಕೆಗಳಿಗೆ ಅಥವಾ ಅಕ್ರಮ ಸೊತ್ತುಗಳ ಸಾಗಾಣಿಕೆಗೆ ಉಪಯೋಗಿಸಬಾರದೆಂದು ಸೂಕ್ತ ಎಚ್ಚರಿಕ ನೀಡಲಾಗಿದೆ ಎಂದು ಮೌಖಿಕ ಹೇಳಿಕೆ ನೀಡಿರುವವರಾದರೂ ಈ ಬಗ್ಗೆ ಲಿಖಿತ ಎಚ್ಚರಿಕೆ ಪತ್ರ ವಾಹನದ ಮಾಲೀಕರಿಂದ ಚಾಲಕನಿಗೆ ನೀಡಿರುವುದಾಗಲೀ ಅಥವಾ ವಾಹನದ ಮಾಲೀಕರು ಚಾಲಕನಿಂದ ಈ ಬಗ್ಗೆ ಯಾವುದೇ ಭದ್ರತಾ ಲಿಖಿತ ಹೇಳಿಕೆಗಳನ್ನು ಪಡೆದಿರುವ ಬಗ್ಗೆಯಾಗಲೀ ಪುರಾವೆಗಳೊಂದಿಗೆ ಸಾಬೀತುಪಡಿಸಿರುವುದಿಲ್ಲ. ಇದರಿಂದ ವಾಹನದ ಮಾಲೀಕರು ಮಾನ್ಯ ಸತ್ರ ನ್ಯಾಯಾಲಯದಲ್ಲಿ ಪ್ರಾಧಿಕಾರದ ಮುಟ್ಟುಗೋಲು ಆದೇಶ ತಳ್ಳಿಹಾಕಲ್ಪಟ್ಟಿರುವುದರ ಲಾಭಾಂಶ ವನ್ನು ಪಡೆದು ತಾನು ಅಪರಾಧವೆಸಗಿರುವುದನ್ನು ಮರೆಮಾಚಿ ಕೊಳ್ಳುವ ಸಲುವಾಗಿ ಪ್ರಾಧಿಕಾರದ ವಿಚಾರಣಾ ವೇಳೆಯಲ್ಲಿ ರಕ್ಷಣಾ ಸಾಕ್ಷಿ ನುಡಿಯಲು ಮುಂದಾಗಿರುತ್ತಾರೆ. ಹಾಗೂ ವಾಹನದ ಮಾಲೀಕರು ವಾಹನದ ಬಗ್ಗೆ ತನ್ನ ನೈಜ ಜವಾಬ್ದಾರಿಕೆಯಿಂದ ನುಸುಳಿ ಕೊಂಡಿರುವುದು ಕೂಡಾ ಪ್ರಾಧಿಕಾರದ ಗಮನಕ್ಕೆ ಬಂದಿರುತ್ತದೆ. ಇದರಿಂದ ಸದ್ರಿ ಈಚರ್ ಕ್ಯಾಂಟರ್ ಲಾರಿಯ ಮಾಲೀಕನು ಚಾಲಕನೊಂದಿಗೆ ಶಾಮೀಲಾಗಿ ಈ ಕೃತ್ಯ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಕಾರಣ ಪತ್ತೆಯಾಗಿರುವ ಅಪರಾಧ ವಾಹನದ ಮಾಲೀಕರ ಅಥವಾ ವಾಹನದ ಸುಪರ್ಧಿ ಹೊಂದಿರುವವರ ತಿಳುವಳಿಕೆಯಿಂದಲೇ ನಡೆದಿದೆ ಎಂಬುದು ಪ್ರಾಧಿಕಾರಕ್ಕೆ ಮನದಟ್ಟಾಗಿರುವುದರಿಂದ ಎರಡನೆಯ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಪ್ರಕರಣದ ಮರು ವಿಚಾರಣೆ ನಡೆಸಿ ಅಭಿಯೋಗದ ಪರ ಸಾಕ್ಷಿಗಳ ಹಾಗೂ ರಕ್ಷಣಾ ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ಈಚರ್ ಕ್ಯಾಂಟರ್ ಲಾರಿ ಸಂ:KA-21-167 ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಾಧಿಕಾರದಲ್ಲಿ ನಡೆಸಲಾದ ಮರು ವಿಚಾರಣೆಯಿಂದ ಸಾಕ್ಷ್ಯದಾರ ಸಾಬೀತಾಗಿರುವುದಾಗಿ ಈ ಪ್ರಾಧಿಕಾರಕ್ಕೆ ಮನದಟ್ಟಾಗಿರುವ ಕಾರಣ ಈ ಆದೇಶ.

ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಈ ಹಿಂದೆ ಪ್ರಾಧಿಕಾರದಿಂದ ಹೊರಡಿಸಲಾದ ಮುಟ್ಟುಗೋಲು ಆದೇಶದ ವಿರುದ್ಧ ವಾಹನದ ಮಾಲೀಕರು ಮಾನ್ಯ 3ನೇ ಹೆಚ್ಚುವರಿ ಸತ್ರ ನ್ಯಾಯಾಲಯ, ದ.ಕ. ಜಿಲ್ಲೆ, ಮಂಗಳೂರು ಇಲ್ಲಿ ಸಲ್ಲಿಸಿದ ಕ್ರಿಮಿನಲ್ ಅಪೀಲ್ ಸಂ:324/2007 ದಿ:18–2–2009ರ ತೀರ್ಪು ಆದೇಶವನ್ನು ಗೌರವಿಸಿ ಪ್ರಕರಣದಲ್ಲಿ ಮರು ವಿಚಾರಣೆ ನಡೆಸಿ ಅಬಕಾರಿ ನಿರೀಕ್ಷಕರು(2), ಗುಪ್ತ ವಾರ್ತದಳ, ಮಂಗಳೂರು ಇವರ ತಕ್ಷೀರು ಸಂ: 1/98–99, ದಿ:4–7–98ರಲ್ಲಿ ಜಪ್ತುಪಡಿಸಿರುವ ಈಚರ್ ಕ್ಯಾಂಟರ್ ಲಾರಿ ಸಂ:KA-21-167 (ನಂಬ್ರ:HD31-501882, ಚಾಸಿಸ್ ನಂಬ್ರ :HEC 00313145) ನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ನಿಯಮ 43ಎ(2) ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಪ್ರಾಧಿಕಾರದಿಂದ ದಿ:05.1.1998ರಂದು ವಾಹನ ಈಚರ್ ಕ್ಯಾಂಟರ್ ಲಾರಿ ಸಂ:KA-21-167ನ್ನು ತಾತ್ಕಾಲಿಕವಾಗಿ ಮದ್ಯಂತರ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಈಚರ್ ಕ್ಯಾಂಟರ್ ಲಾರಿ ಸಂ:KA-21-167ನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–II ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ ಭದ್ರತೆಯಾಗಿ ನೀಡಿರುವ ರೂ.1,50,000/– ಮೌಲ್ಯದ ಇಂಡೆಮಿನಿಟಿ ಬಾಂಡ್ ಮೊತ್ತ ಸರ್ಕಾರಕ್ಕೆ ಪಡೆಯಲು ಭದ್ರತೆ ನೀಡಿರುವ ಶ್ಯೂರಿಟಿದಾರರಾದ ಶ್ರೀ.ಕೃಷ್ಣ ಸ್ವಾಮಿ ಬಿನ್ ಹನುಮಂತಪ್ಪ, ಕಳಕೋಟೆ ಎಕ್ಸ್‌ಟೆಷನ್, ಚಿತ್ರದುರ್ಗ ಜಿಲ್ಲೆ ಇವರು ಹೊಂದಿರುವ ಜಮೀನನ್ನು ಸರ್ಕಾರದ ಪರ ವರ್ಗಾವಣೆ ಮಾಡಿಕೊಳ್ಳುವರೇ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಿದೆ. ಈ ಆದೇಶದ

ಪಾಲನೆ ಹಾಗೂ ಸದ್ರಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನವನ್ನು ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-II ಇವರು 30 ದಿನಗಳೊಳಗೆ ತನ್ನ ಸ್ವಾಧೀನಕ್ಕೆ ವಶಪಡಿಸಿಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಆದೇಶಿಸಿದೆ.

ಈ ಆದೇಶವನ್ನು ದಿ:29-06-2010ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್
ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:-

ಪ್ರಾ.ಸಾ-I : ಶ್ರೀ.ಯಶವಂತ ಕುಮಾರ್,
ನಿವೃತ್ತ ಅಬಕಾರಿ ನಿರೀಕ್ಷಕರು, ಉಳ್ಳಾಲ ವಲಯ

ಪ್ರಾ.ಸಾ-2 : ಶ್ರೀ . ಕೆ.ಗುರುಮೂರ್ತಿ,
ನಿವೃತ್ತ ಅಬಕಾರಿ ನಿರೀಕ್ಷಕರು
ಗುಪ್ತವಾರ್ತದಳ ಉಡುಪಿವಿಭಾಗ.

ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:-

1) ನಿಶಾನೆ ಪಿ-1 : ರಾಸಾಯನಿಕ ತಜ್ಞರ ವರದಿ ದಿ:13.12.2001 ರ ಪ್ರತಿ
2) ನಿಶಾನೆ ಪಿ-2 : ಸರ್ಚ್ & ಮೆಮೋ ಪ್ರತಿ
3) ನಿಶಾನೆ ಪಿ-3 : ಮಹಜರು ಪ್ರತಿ
4) ನಿಶಾನೆ ಪಿ-3ಎ : ಮಹಜರು ಪ್ರತಿಯ ಮೇಲಿನ ಸಹಿ

ಅನುಬಂಧ-III

ವಾಹನ ಮಾಲೀಕರ ಪರವಾಗಿ ರಕ್ಷಣಾ ವಿಚಾರಣೆ ಮಾಡಲಾದ ಸಾಕ್ಷಿದಾರರು :-

ಡಿಡಬ್ಲ್ಯೂ-1 : ಶ್ರೀ.ಡಿ.ಎಸ್.ಧರ್ಮಪ್ಪ ,
ಬಿನ್:ಶಾಂತಮಲ್ಲಪ್ಪ, ಕಾಷಿ ಪ್ಲಾಂಟರ್ಸ್
ಕೊಲ್ಲಗೇರಿ ಎಸ್ಟೇಟ್, ದೋಣಿಗಲ್ ಅಂಚೆ,
ಸಕಲೇಶಪುರ, ಹಾಸನ ಜಿಲ್ಲೆ

ಅನುಬಂಧ-IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :-

- ಯಾವುದು ಇಲ್ಲ -

ನೂರ್ ಮಹಮ್ಮದ್ ಹುಸೇನ್
ಪಿ.ಆರ್.1089 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್
ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/68/ಡಿಟಿಸಿಆರ್/2009-10, ದಿನಾಂಕ:19ನೇ ಜೂನ್, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ
ಮಂಗಳೂರು.

ಫಿರ್ಯಾದುದಾರರು:
ಪೊಲೀಸ್ ನಿರೀಕ್ಷಕರು
ವಿಶೇಷ ಪೊಲೀಸ್ ಠಾಣೆ,
ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ
ಬಂದರು, ಮಂಗಳೂರು.

ಆರೋಪಿಗಳು:
1) ನಾರಾಯಣ, ಬಿನ್ ವೆಂಕಪ್ಪ ಮೂಲ್ಯ
ವಾಸ:ಮೈಂದಾಳ ಮನೆ, ನಾವೂರು
ಗ್ರಾಮ & ಅಂಚೆ, ಬಂಟ್ವಾಳ ತಾಲೂಕು
2) ಕೆ.ಎಂ.ಪ್ರವೀಣ ಬಿನ್ ದಿ:ಮಲ್ಲೇಗೌಡ,
ಕೆನಗನ ಹಳ್ಳಿ, ಹೆತ್ತೂರು ಹೊಬಳಿ,
ನಿಡಿಗೇರಿ ಅಂಚೆ, ಹಾಸನ ಜಿಲ್ಲೆ.

ಪ್ರಕರಣದ ಮುಖ್ಯಾಂಶಗಳು:

ಫಿರ್ಯಾದುದಾರರು ದಿನಾಂಕ:15-8-2009 ರಂದು ಬೆಳಿಗ್ಗೆ 7-45 ಗಂಟೆ ಸಮಯಕ್ಕೆ ಅವರ ಠಾಣಾ ಸಿಬ್ಬಂದಿಯವರೊಂದಿಗೆ ಕೂಡಿಕೊಂಡು ಇಲಾಖಾ ಜೀಪಿನಲ್ಲಿ ಮಂಗಳೂರು ನಗರದ ಪಂಪುವೆಲ್ ಪರಿಸರದಲ್ಲಿ ಗಸ್ತು ಕರ್ತವ್ಯದಲ್ಲಿರುವಾಗ ವಾಹನ ಸಂ:KA-21-647 ನಂಬರಿನ ಬಿಳಿ ಬಣ್ಣದ ಅಂಬಾಸಿಡರ್ ಕಾರಿನಲ್ಲಿ ಗೋವಾ ರಾಜ್ಯದಲ್ಲಿ ತಯಾರಾದ ಮದ್ಯವನ್ನು ಕಂಕನಾಡಿ ರೈಲ್ವೆ ನಿಲ್ದಾಣದಿಂದ ಪಂಪುವೆಲ್ ಮೂಲಕ ಕೇರಳ ರಾಜ್ಯಕ್ಕೆ ಅಕ್ರಮವಾಗಿ ಸಾಗಾಟ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿಯಂತೆ ಇಬ್ಬರು ಪಂಚರನ್ನು ಕರೆದುಕೊಂಡು ಪಂಪುವೆಲ್‌ನ ವಲೇರಿಯನ್ ವೈನ್ ಶಾಪ್ ಮುಂಭಾಗದಲ್ಲಿರುವ ಸಾರ್ವಜನಿಕ ಬಸ್ ನಿಲ್ದಾಣದ ಬಳಿ ವಾಹನಗಳನ್ನು ತಪಾಸಣೆ ನಡೆಸುತ್ತಿರುವಾಗ ದೊರೆತ ಖಚಿತ ವರ್ತಮಾನದ ಮಾಹಿತಿಯಂತೆ ಅಂಬಾಸಿಡರ್ ಕಾರು ಸಂ:KA-21-647 ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ ಕಾರಿನ ಚಾಲಕ ಕಾರನ್ನು ನಿಲ್ಲಿಸಿ ಚಾಲಕನ ಎಡಭಾಗದಲ್ಲಿದ್ದ ಇನ್ನೊಬ್ಬ ವ್ಯಕ್ತಿ ಸೇರಿ ಓಡಲು ಪ್ರಯತ್ನಿಸಿದ್ದು, ಸಿಬ್ಬಂಧಿಯವರು ಮೂರು ಕಡೆಯಿಂದ ಸುತ್ತುವರಿದು ಇಬ್ಬರನ್ನು ಹಿಡಿದು ಅವರ ವಶಕ್ಕೆ ತೆಗೆದು ಕೊಂಡಿರುತ್ತಾರೆ. ಸದ್ರಿ ವ್ಯಕ್ತಿಗಳನ್ನು ವಿಚಾರಿಸಲಾಗಿ ಕಾರಿನ ಚಾಲಕ ಹಾಗೂ ಮಾಲೀಕನಾದ ನಾರಾಯಣ ,ಬಿನ್:ವೆಂಕಪ್ಪ ಮೂಲ್ಯ ,ವಾಸ:ಮೈಂದಾಳ ಮನೆ, ನಾವೂರು ಗ್ರಾಮ & ಅಂಚೆ, ಬಂಟ್ವಾಳ ತಾಲೂಕು ಮತ್ತು ಚಾಲಕನ ಪಕ್ಕದ ಸೀಟಿನಲ್ಲಿ ಕುಳಿತ್ತಿದ್ದ ವ್ಯಕ್ತಿಯ ಹೆಸರು ಕೆ.ಎಂ.ಪ್ರವೀಣ ಬಿನ್:ದಿ:ಮಲ್ಲೇಗೌಡ, ಕೆನಗನ ಹಳ್ಳಿ, ಹೆತ್ತೂರು ಹೋಬಳಿ, ನಿಡಿಗೇರಿ ಅಂಚೆ, ಹಾಸನ ಜಿಲ್ಲೆ ಎಂದು ತಿಳಿಸಿರುತ್ತಾನೆ. ಹಾಗೂ ಇನ್ನಿತರು ಓಡಿ ಪರಾರಿಯಾಗಿರುತ್ತಾರೆ. ಕಾರನ್ನು ನೋಡಲಾಗಿ ಹಾಗೂ ಕಾರಿನೊಳಗೆ ಏನಿದೆ ಎಂದು ಕೇಳಲಾಗಿ ಕಾರಿನಲ್ಲಿ ಅಕ್ರಮವಾಗಿ ಗೋವಾದಲ್ಲಿ ತಯಾರಿಸಿರುವ ಮದ್ಯದ ಬಾಟಲಿಗಳನ್ನು ಸಾಗಾಟ ಮಾಡಿರುವುದಾಗಿ ಚಾಲಕನು ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಕಾರಿನ ಡಿಕ್ಕಿಯನ್ನು ನೋಡಲಾಗಿ ಡಿಕ್ಕಿಯಲ್ಲಿ ಮದ್ಯದ ಬಾಟಲಿಗಳನ್ನು ಇಡಲಾಗಿದ್ದು, ನದನ್ ಮಾಲ್ಟ್ ವಿಸ್ಕಿ 750 ಎಂಎಲ್‌ನ 72 ಸೀಸೆಗಳಂತೆ ಒಟ್ಟು 54 ಲೀಟರು ಮದ್ಯ ಮತ್ತು ಪೀಟರ್ ಪೋರ್ಟ್ ತ್ರಿಬಲ್ ಎಕ್ಸ್ ರಂ 750 ಎಂ ಎಲ್ ನ 12 ಸೀಸೆಗಳಂತೆ ಒಟ್ಟು 9.000 ಲೀಟರು ಮದ್ಯವು ಕಂಡುಬಂದಿರುತ್ತದೆ. ಸದ್ರಿ ಕಾರಿನ ಚಾಲಕನಲ್ಲಿ ಸದ್ರಿ ಮದ್ಯವನ್ನು ಎಲ್ಲಿಂದ ತಂದದ್ದು ಎಂಬ ಬಗ್ಗೆ ವಿಚಾರಣೆ ಮಾಡಲಾಗಿ ತಾವುಗಳು ಗೋವಾ ರಾಜ್ಯದಿಂದ ರೈಲಿನ ಮುಂಖಾತರ ತಂದು ಮಂಗಳೂರು ಕಂಕನಾಡಿ ರೈಲ್ವೆ ನಿಲ್ದಾಣದಲ್ಲಿ ಇಳಿದು ಹೆಚ್ಚಿನ ಹಣ ಸಂಪಾದಿಸುವ ಪ್ರಯುಕ್ತ ಕೇರಳ ರಾಜ್ಯಕ್ಕೆ ಸಾಗಾಟ ಮಾಡುವ ಉದ್ದೇಶದಿಂದ ಕೊಂಡೊಯ್ಯುವುದಾಗಿ ತಿಳಿಸಿರುತ್ತಾರೆ. ಸದ್ರಿ ಅಂಬಾಸಿಡರ್ ಕಾರನ್ನು ಪರಿಶೀಲಿಸಿದಾಗ ಅದು ಬಿಳಿ ಬಣ್ಣದ ಅಂಬಾಸಿಡರ್ ನೋವಾ ಕಾರಾಗಿದ್ದು, ಇದರ ನೊಂದಾಣಿ ಸಂ:KA-21-647 ಆಗಿದ್ದು ,ಹಿಂಬದಿಯ ಗ್ಲಾಸಿನಲ್ಲಿ ಭವ್ಯ, ಅಕ್ಷತಾ ಮತ್ತು ಭರತ್ ಅಂತ ಇಂಗ್ಲೀಷ್‌ನಲ್ಲಿ ಬರೆದಿರುತ್ತದೆ.ಇದರ ಚಾಸೀಸ್ ನಂ:111-654969 ಮತ್ತು ಇಂಜಿನ್ ನಂ:6ED072654 ಆಗಿರುತ್ತದೆ. ಸದ್ರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗಾಗಿ ನದನ್ ಮಾಲ್ಟ್ ವಿಸ್ಕಿಯಿಂದ ಮತ್ತು ಪೀಟರ್ ಪೋರ್ಟ್ ತ್ರಿಬಲ್ ಎಕ್ಸ್ ರಂ ನಿಂದ ತಲಾ ಒಂದು ಬಾಟಲಿಯನ್ನು ತೆಗೆದು ಬಾಟಲಿಯ ಮುಚ್ಚಳಕ್ಕೆ ಬಿಳಿಯ ಬಟ್ಟೆ ಸುತ್ತಿ ಅದಕ್ಕೆ ಅರಗು ಸೀಲು ಮಾಡಿ ಪಂಚರ ಸಹಿಯುಳ್ಳ ಬಿಳಿ ಚೀಟಿಯನ್ನು ಸ್ಯಾಂಪಲ್ ಬಾಟಲಿಗಳಿಗೆ ಅಂಟಿಸಲಾಯಿತು.ಮಾದರಿ ಸೀಸೆಗಳಿಗೆ ಕ್ರಮವಾಗಿ ಎ ಮತ್ತು ಬಿ ಎಂದು ಹೆಸರು ಕೊಡಲಾಯಿತು. ನಂತರ ಅರೋಪಿಗಳಾದ ನಾರಾಯಣ ಮತ್ತು ಪ್ರವೀಣ್ ಕೆ. ಎಂಬವರನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿ ಅಕ್ರಮವಾಗಿ ಸಾಗಾಟಕ್ಕೆ ಬಳಸಿದ ಅಂಬಾಸಿಡರ್ ಕಾರು ಹಾಗೂ ಗೋವಾ ಮದ್ಯವನ್ನು ಸ್ವಾಧೀನಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದ ಲ್ಲಿಯೇ ಬರೆದು, ಮಹಜರಿನಲ್ಲಿ ಸ್ಥಳ ಚೆಕ್ ಬಂಧಿ ನಮೂದಿಸಿ, ಮಹಜರಿಗೆ ಪಂಚರ ಮತ್ತು ಸಿಬ್ಬಂಧಿಯವರ ಸಹಿ ಪಡೆದು ಅರೋಪಿಗಳ ವಿರುದ್ಧ ತಕ್ಷೀರು ಸಂ:6/2009 ದಿ:15-8-2009 ರಂದು ಪ್ರಕರಣವನ್ನು ನೊಂದಾಯಿಸಿ ತಮ್ಮ ಮೇಲಾಧಿಕಾರಿಗಳಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ಮತ್ತು ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಪೊಲೀಸ್ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ ಬಂದರು, ಮಂಗಳೂರು ಇವರು ದಿ:16-8-2009ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರು ಹಾಗೂ ಮದ್ಯವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-2 ಇವರಿಗೆ ಹಸ್ತಾಂತರಿಸಲು ಈ ಪ್ರಾಧಿಕಾರದಿಂದ ಅನುಮತಿ ಕೋರಿರುವ ಮೇರೆಗೆ ಈ ಪ್ರಾಧಿಕಾರದ ಅದೇಶ ಸಂ: ಎಸ್‌ಡಿಕೆ: 68: ಡಿಟಿಸಿಆರ್: 2009-10 ದಿ:25-9-2009ರ ಅದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳ ಪೂರ್ಣ ದಾಖಲಾತಿಗಳೊಂದಿಗೆ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-2 ಇವರಿಗೆ ಹಸ್ತಾಂತರಿಸಲು ಅನುಮತಿಯನ್ನು ನೀಡಲಾಗಿರುತ್ತದೆ.

ಈ ಪ್ರಾಧಿಕಾರದಿಂದ ದಿ:17-2-2010ರಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಪುತ್ತೂರು ಇವರಿಗೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರು ಸಂ:KA-21-647 ರ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಲ್ಲಿಸಲು ಹಾಗೂ ಆರ್.ಸಿ ಮಾಲೀಕತ್ವ ವರ್ಗಾವಣೆ ಯನ್ನು ತಡೆಹಿಡಿಯಬೇಕಾಗಿ ಕೋರಲಾಗಿತ್ತು.

ತಕ್ಷೀರಿನಲ್ಲಿ ದಸ್ತಗಿರಿಯಾದ ಅರೋಪಿಗಳಾದ ನಾರಾಯಣ ಮೂಲ್ಯ ಮತ್ತು ಕೆ.ಎಂ.ಪ್ರವೀಣ್ ಇವರಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43 ಬಿ ಪ್ರಕಾರ ಕಾರಣ ಕೇಳಿ ನೋಟಿಸನ್ನು ದಿ:24-4-2010ರಂದು ನೊಂದಾಣಿ ಅಂಚೆಯ ಮೂಲಕ ನೀಡಲಾಗಿದ್ದು, ಸದ್ರಿ ನೋಟಿಸುಗಳು ಜ್ಯಾರಿಯಾಗಿ, ಅಂಚೆ ಸ್ವೀಕೃತಿ ಈ ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುತ್ತದೆ. ಆದರೆ ವಾಹನದ ಮಾಲೀಕರಾಗಲಿ, ಅವರ ಪರ ವಕೀಲರಾಗಲಿ ಮತ್ತು ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿಯಾಗಲಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಾಹನದ ಬಿಡುಗಡೆ ಪಡೆಯಲು ಯಾವುದೇ ಅರ್ಜಿಯನ್ನು ಇದುವರೆಗೂ ಸಲ್ಲಿಸಿರುವುದಿಲ್ಲ.

ಅಬಕಾರಿ ನಿರೀಕ್ಷಕರು,ಮಂಗಳೂರು ದಕ್ಷಿಣ ವಲಯ-2 ಮಂಗಳೂರು ಇವರ ತನಿಖಾ ವರದಿ ಸಂ:ಎಂಎಸ್‌ಆರ್-2/21/2009-10 ದಿ:29-3-2010ರ ತನಿಖಾ ವರದಿಯಲ್ಲಿ ಪೊಲೀಸ್ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ,ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ಇವರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ ಜಿಲ್ಲೆ, ಮಂಗಳೂರು ಇವರಿಂದ ಪಡೆದು ಸಲ್ಲಿಸಿದ್ದ, ಅಂಬಾಸಿಡರ್ ಕಾರು ಸಂ:KA-21-0647 ರ ಬಿ ಎಕ್ಸ್ ಟ್ರಾಕ್ಟ್ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಬಿ ಎಕ್ಸ್‌ಟ್ರಾಕ್ಟ್ ವರದಿಯಲ್ಲಿ ವಾಹನದ ನೊಂದಾಣಿ ಮಾಲೀಕ ಶ್ರೀ.ನಾರಾಯಣ ಮೂಲ್ಯ ಬಿನ್:ವೆಂಕಪ್ಪ ಮೂಲ್ಯ, ಮೈಂದಾಳ ಹೌಸ್,ನಾವೂರು, ಬಂಟ್ವಾಳ ಹಾಗೂ ವಾಹನದ ಚಾಸೀಸ್ ನಂ:111654969 ಮತ್ತು ಇಂಜಿನ್ ನಂ:6ED072654 ಆಗಿರುತ್ತದೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದ ರಾಸಾಯನಿಕ ಕೆಮಿಕಲ್ ವರದಿಯನ್ನು ಪೊಲೀಸ್ ಉಪ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ,ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ಇವರ ಮೂಲಕ ಪಡೆಯಲಾಗಿದ್ದು, ಕರ್ನಾಟಕ ಸರ್ಕಾರ ಸಹಾಯಕ ರಾಸಾಯನಿಕ ವಿಶ್ಲೇಷಕರ ಕಛೇರಿ,ಚಿಕ್ಕಮಗಳೂರು ಇವರ ವರದಿ ಸಂ:05-2 ದಿ:5-2-2010ರ ವರದಿಯಲ್ಲಿ ತಕ್ಷೀರಿನಲ್ಲಿ ತೆಗೆದ ಸ್ಯಾಂಪಲ್‌ಗಳ ಮದ್ಯದಲ್ಲಿ ಕ್ರಮವಾಗಿ 41.3% ಮತ್ತು 42.1% ಮದ್ಯದ ಮದ್ಯಸಾರ ಇರುವುದಾಗಿ ದೃಡೀಕರಣ ಪತ್ರ ನೀಡಿರುತ್ತಾರೆ. ಹಾಗೂ ಪ್ರಕರಣದ ಕೇಸು ಡೈರಿ, ಪ್ರಥಮ ಮಾಹಿತಿ ವರದಿ, ಮಹಜರು ಹಾಗೂ ಇನ್ನಿತರ ದಾಖಲಾತಿಗಳನ್ನು ಸಲ್ಲಿಸಿದ್ದು ಸದ್ರಿ ಮೊದಕ್ಧಮೆಯಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರಿನ ಮಾಲೀಕನೇ ಅಕ್ರಮವಾಗಿ ಮದ್ಯ ಸಾಗಾಟ ಮಾಡಿರುವುದು ಖಚಿತವಾಗಿರುವುದರಿಂದ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯ ಹಾಗೂ ಅಂಬಾಸಿಡರ್ ಕಾರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಆದೇಶ ನೀಡಬೇಕೆಂದು ಅವರ ತನಿಖಾ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ತಕ್ಷೀರಿನಲ್ಲಿ ವಶಪಡಿಸಿಕೊಂಡ 750 ಎಂ ಎಲ್ ನ ಗೋವಾ ನಿರ್ಮಿತ ನಾದನ್ ಮಾಲ್ಟ್ ವಿಸ್ಕಿ 72 ಪ್ಲಾಸ್ಟಿಕ್ ಸೀಸೆಗಳ ಪೈಕಿ ರಾಸಾಯನಿಕ ವಿಶ್ಲೇಷಣೆಗೆ ತೆಗೆದ 1 ಬಾಟಲಿಯನ್ನು ಹೊರತುಪಡಿಸಿ ಉಳಿದ 71 ಪ್ಲಾಸ್ಟಿಕ್ ಬಾಟಲಿಗಳಲ್ಲಿ ಒಟ್ಟು 53.250 ಲೀಟರು ಮದ್ಯ ಮತ್ತು 750 ಎಂ ಎಲ್ ನ ಗೋವಾ ನಿರ್ಮಿತ ಪೀಟರ್ ಪೋರ್ಟ್ ಟ್ರಿಬಲ್ ಎಕ್ಸ್ ರಮ್ 12 ಪ್ಲಾಸ್ಟಿಕ್ ಸೀಸೆಗಳ ಪೈಕಿ ರಾಸಾಯನಿಕ ವಿಶ್ಲೇಷಣೆಗೆ ತೆಗೆದ 1 ಬಾಟಲಿಯನ್ನು ಹೊರತುಪಡಿಸಿ ಉಳಿದ 11 ಪ್ಲಾಸ್ಟಿಕ್ ಬಾಟಲಿಗಳಲ್ಲಿ ಒಟ್ಟು 8.250 ಲೀಟರು ಮದ್ಯವನ್ನು ಈ ಪ್ರಾಧಿಕಾರದ ಆದೇಶ ಸಂ: ಎಸ್‌ಡಿಕೆ:68: ಡಿಟಿಸಿಆರ್:2009-10 ದಿ:28-5--2010ರ ಆದೇಶದಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43 ಸಿ ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮಹಜರು ಜರುಗಿಸಿ ಮದ್ಯವನ್ನು ಪ್ಲಾಸ್ಟಿಕ್ ಬಾಟಲಿಗಳ ಸಮೇತ ನಾಶ ಪಡಿಸಲು ಆದೇಶಿಸಲಾಗಿರುತ್ತದೆ.

ಮೊಕದ್ದಮೆಯಲ್ಲಿ ವಶಪಡಿಸಿಕೊಳ್ಳಲಾಗಿರುವ ಅಂಬಾಸಿಡರ್ ಕಾರು ಸಂ:KA-21-647 ಇದರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿದಂತೆ ಸಾಕ್ಷಿ ವಿಚಾರಣೆಗಾಗಿ ಹಾಜರಾತಿ ನೋಟಿಸುಗಳನ್ನು ಸಾಕ್ಷಿದಾರರಿಗೂ ಹಾಗೂ ವಾಹನದ ಮಾಲೀಕರಿಗೆ ನೊಂದಾವಣೆ ಅಂಚೆ ಮೂಲಕ ನೀಡಲಾಗಿದ್ದರೂ ವಾಹನದ ಮಾಲೀಕರು ಪ್ರಾಧಿಕಾರದ ಮುಂದೆ ಹಾಜರಾಗಿ ಯಾವುದೇ ಸಾಕ್ಷಿ ವಿಚಾರಣೆ ಹೇಳಿಕೆಯನ್ನು ನೀಡಿರುವುದಿಲ್ಲ.

ಪ್ರಕರಣದ ವಿಚಾರಣೆಯನ್ನು ಆರಂಭಿಸಿ ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ: 15-8-2009 ರಂದು ಅಂಬಾಸಿಡರ್ ಕಾರು ಸಂ: KA-21-647 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:-

ಶ್ರೀ.ಬಿ.ಜಿ.ಆಚಾರ್ ,ಪೊಲೀಸ್ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರುರವರು ಪ್ರಕರಣದ ಫಿರ್ಯಾದುದಾರರಾಗಿದ್ದು ಇವರು ದಿನಾಂಕ:15-6-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿಯನ್ನು ನೀಡಿರುತ್ತಾರೆ. ತಾನು ಜುಲೈ-2009ರಿಂದ ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ವಿಶೇಷ ಪೊಲೀಸ್ ಠಾಣೆ ಇಲ್ಲಿ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿ:15-8-2009ರಂದು ಬೆಳಿಗ್ಗೆ ತಮ್ಮ ಇಲಾಖಾ ಜೀಪಿನಲ್ಲಿ ಸಿಬ್ಬಂಧಿಗಳಾದ ರಾಜೇಶ್ ,ಪ್ರದೀಪ ಮತ್ತು ಚಾಲಕ ರಾಜೇಶ್ ಡ್ಯಾನಿ ಇವರನ್ನು ಕರೆದುಕೊಂಡು ಮಂಗಳೂರು ನಗರದ ಪಂಪುವೆಲ್ ಪರಿಸರದಲ್ಲಿ ರೌಂಡ್ಸ್‌ನಲ್ಲಿದ್ದಾಗ ಮಧ್ಯಾಹ್ನ ವಲೇರಿಯನ್ ವೈನ್ ಶಾಪ್ ಬಳಿ ವಾಹನಗಳ ತಪಾಸಣೆ ನಡೆಸುತ್ತಿದ್ದಾಗ, ಮಂಗಳೂರು- ಕಂಕನಾಡಿ ರೈಲ್ವೆ ನಿಲ್ದಾಣದ ಕಡೆಯಿಂದ ಕೇರಳ ಕಡೆಗೆ ಬರುತ್ತಿದ್ದ ಬಿಳಿ ಅಂಬಾಸಿಡರ್ ಕಾರು ಸಂ:KA-21-647 ಕಾರನ್ನು ನಿಲ್ಲಿಸಿದಾಗ ಚಾಲಕನು ಮತ್ತು ಆತನ ಪಕ್ಕದಲ್ಲಿದ್ದ ವ್ಯಕ್ತಿಗಳು ಓಡಿ ಪರಾರಿಯಾಗಲು ಯತ್ನಿಸಿದಾಗ ಅವರನ್ನು ತಾವು ಹಿಡಿದುಕೊಂಡೆವು. ಪಂಚರ ಸಮಕ್ಷಮ ತಾವು ಅವರನ್ನು ವಿಚಾರಿಸಿದಾಗ ಆತನು ಕಾರಿನಲ್ಲಿ ಗೋವಾದಿಂದ ಅಕ್ರಮವಾಗಿ ಮದ್ಯವನ್ನು ಕೇರಳ ರಾಜ್ಯಕ್ಕೆ ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ತೆಗೆದು ಹೋಗುತ್ತಿದ್ದು ಆತನ ಹೆಸರು ನಾರಾಯಣ ಮತ್ತೊಬ್ಬನ ಹೆಸರು ಪ್ರವೀಣ ಎಂದು ಹೇಳಿದರು. ನಂತರ ಕಾರಿನಲ್ಲಿದ್ದ ಸೊತ್ತುಗಳನ್ನು ಪರಿಶೀಲಿಸಿದಾಗ 72 ಬಾಟಲು ನದನ್ ವಿಸ್ಕಿ ತಲಾ 750 ಎಂ ಎಲ್ ಹೊಂದಿದ್ದ ಬಾಟಲಿಗಳು ಇದ್ದವು. ತಾವು ಪಂಚರ ಸಮಕ್ಷಮ ವಿಸ್ಕಿಯ ಬಾಟಲಿಗಳಿಂದ ಸ್ಯಾಂಪಲ್‌ಗಾಗಿ 1 ಬಾಟಲಿಯನ್ನು ಮತ್ತು ರಮ್ ನ ಬಾಟಲಿಗಳಿಂದ 1 ಬಾಟಲ್ ತೆಗೆದು ಅದಕ್ಕೆ ಬಿಳಿ ಬಟ್ಟೆ ಸುತ್ತಿ ಸೀಲು ಹಾಕಿ ಅದಕ್ಕೆ ಎ ಮತ್ತು ಬಿ ಎಂದು ಗುರುತು ನಮೂದಿಸಿ ಪಂಚರ ಸಹಿಯುಳ್ಳ ಬಿಳಿ ಚೀಟಿಗಳನ್ನು ಅಂಟಿಸಿದೆವು. ಕಾರಿನ ಮತ್ತು ಮದ್ಯದ ಮೌಲ್ಯ ಒಟ್ಟು ಮೌಲ್ಯವನ್ನು ತಮ್ಮ ಮಹಜರಿನಲ್ಲಿ ನಮೂದಿಸಿದ್ದೇವೆ. ತಾವು ಸ್ವಾಧೀನ ಪಡಿಸಿದ ವಸ್ತುಗಳ ಬಗ್ಗೆ ಸ್ಥಳದಲ್ಲಿ ವಿವರವಾದ ಮಹಜರು ಮಾಡಿದ್ದು, ಅದನ್ನು ಈಗ ನೋಡುತ್ತಿದ್ದು, ಅದು ನಿಶಾನೆ ಪಿ-1ಎಂದು, ಅದರಲ್ಲಿರುವ ತನ್ನ ಸಹಿ ಇದ್ದು ಅದು ನಿಶಾನೆ ಪಿ-1 ಎ ಗುರುತಿಸಿದೆ. ಸದ್ರಿ ಅಂಬಾಸಿಡರ್ ಕಾರಿನ ಚಾಲಕ ನಾರಾಯಣ ಆಗಿರುತ್ತಾರೆ. ತಾವು ಅಮಾನತು ಪಡಿಸಿದ ಮದ್ಯಕ್ಕೆ ಯಾವುದೇ ಪರವಾನಿಗೆ ಇರಲಿಲ್ಲ. ನಂತರ ತಾನು ಅರೋಪಿಗಳನ್ನು ಮತ್ತು ವಶಪಡಿಸಿದ ಸೊತ್ತು ಸಮೇತ ಠಾಣೆಗೆ ಬಂದು ಒಂದು ವಿವರವಾದ ವರದಿ ತಯಾರಿಸಿದೆ. ಸದ್ರಿ ವರದಿ ಆಧಾರದಲ್ಲಿ ಪ್ರಕರಣ ನೊಂದಾಯಿಸಲು ತನ್ನ ವರದಿಯನ್ನು ಠಾಣಾದಿಕಾರಿ ಶ್ರೀಮತಿ. ಕಮಲಾ ರವರಿಗೆ ನೀಡಿರುತ್ತೇನೆ. ಅವರು ತಮ್ಮ ಠಾಣೆಯಲ್ಲಿ ಕ್ರೈಂ ನಂ:6/2009 ರಂತೆ ಪ್ರ.ಮಾ.ವ ತಯಾರಿಸಿರುತ್ತಾರೆ. ತಾನು ತಯಾರಿಸಿದ ವರದಿ ಈಗ ನೋಡುತ್ತಿದ್ದು ಅದು ನಿಶಾನೆ ಪಿ-2 ಎಂದು ,ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-2 ಎ ಎಂದು ಗುರುತಿಸ ಲಾಯಿತು. ತನ್ನ ವರದಿ

ಆಧಾರದಲ್ಲಿ ತಯಾರಿಸಿದ ಪ್ರಥಮ ಮಾಹಿತಿ ವರದಿ ನಿಶಾನೆ ಪಿ-2 ರಲ್ಲಿದೆ. ಈ ಪ್ರಕರಣದಲ್ಲಿ ಮುಂದಿನ ತನಿಖೆಯನ್ನು ಶ್ರೀಮತಿ.ಕಮಲರವರು ನಡೆಸಿ ಸಾಕ್ಷಿ ಗಳ ಹೇಳಿಕೆ ಪಡೆದುಕೊಂಡಿರುತ್ತಾರೆ. ಶ್ರೀಮತಿ.ಕಮಲಾ ರವರಿಂದ ತಾನು ಈ ಪ್ರಕರಣದಲ್ಲಿ ಮುಂದಿನ ತನಿಖೆ ಕೈಗೆತ್ತಿಕೊಂಡು ದಿ:10-11-2009ರಂದು ಪ್ರಕರಣ ದಲ್ಲಿ ವಶಪಡಿಸಿದ ಸೊತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ ಜಿಲ್ಲೆ ಮಂಗಳೂರು ಇವರಿಗೆ ಸೊತ್ತುಗಳನ್ನು ಹಸ್ತಾಂತರ ಪಡಿಸುವರೇ ವರದಿ ಮುಖೇನಾ ಅದೇಶ ಕೋರಿದ್ದು,ಈ ಬಗ್ಗೆ ಸ್ವೀಕೃತಿ ಪಡೆದು ಠಾಣೆಯಲ್ಲಿ ವರದಿ ಮಾಡಲು ಪಿಸಿ 1009ರಿಗೆ ನಿರ್ದೇಶಿಸಿರುತ್ತೇನೆ.ದಿ:30-11-2009 ರಂದು ತಜ್ಞರ ಪರೀಕ್ಷೆಗೆ ಇರಿಸಿದ ಸೊತ್ತುಗಳನ್ನು ಸೊತ್ತು ಪಟ್ಟಿ ತಯಾರಿಸಿ ರಾಸಾಯನಿಕ ವಿಶ್ಲೇಷಣೆಗಾಗಿ ಚಿಕ್ಕಮಗಳೂರು ಇಲ್ಲಿಗೆ ಮೇಲಾಧಿಕಾರಿಗಳ ಮುಖಾಂತರ ಪಿಸಿ-999 ಲೋಕನಾಥರವರ ಮುಖಾಂತರ ಕಳುಹಿಸಿ ಕೊಟ್ಟಿರುತ್ತೇನೆ. ದಿ:26-2-2010ರಂದು ರಾಸಾಯನಿಕ ತಜ್ಞರ ಅಭಿಪ್ರಾಯ ಪಡೆದು ಅರೋಪಿಗಳ ವಿರುದ್ದ ಮಾನ್ಯ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ರಾಸಾಯನಿಕ ತಜ್ಞರ ವರದಿ ನಿಶಾನೆ ಪಿ-4 ರಲ್ಲಿದೆ, ನಿಶಾನೆ ಪಿ-4 ಎ ರನ್ನು ಸ್ವೀಕರಿಸಿದ ಬಗ್ಗೆ ತನ್ನ ಸಹಿ ಇದ್ದು ಅದನ್ನು ನಿಶಾನೆ ಪಿ-4 ಬಿ ಎಂದು ಗುರುತಿಸಲಾಯಿತು.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಪಿಡಬ್ಲ್ಯೂ-1 ಸಾಕ್ಷಿ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ. ಎಂ.ಕೆ.ಕೇಶವ ಮೂರ್ತಿ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-2 ಮಂಗಳೂರು ಇವರು ದಿ: 15-6-2010 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ತಕ್ಷೀರಿಗೆ ಸಂಬಂಧಿಸಿದ ಸೊತ್ತುಗಳನ್ನು ದಿ:18-11-2009 ರಂದು ಫಿರ್ಯಾದುದಾರರಿಂದ ಪಡೆದುಕೊಂಡಿದ್ದು, ಈ ಬಗ್ಗೆ ತನಿಖಾ ವರದಿಯನ್ನು ಈ ಪ್ರಾದಿಕಾರಕ್ಕೆ ದಿ:29-3-2010ರಂದು ಸಲ್ಲಿಸಿರುತ್ತೇನೆ. ತನ್ನ ತನಿಖಾ ವರದಿಯನ್ನು ನಿಶಾನೆ ಪಿ-5 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-5 ಎ ಎಂದು ಗುರುತಿಸಲಾಯಿತು. ಪ್ರಾದೇಶಿಕ ಸಾರಿಗೆ ಅಧಿಕಾರಿಯವರ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ನಿಶಾನೆ ಪಿ-6 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ -6 ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಪಿಡಬ್ಲ್ಯೂ-2 ನೇ ಸಾಕ್ಷಿಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ: 15-8-2009 ರಂದು ಜಪ್ತುಪಡಿಸಿಕೊಂಡಿರುವ ಅಂಬಾಸಿಡರ್ ಕಾರು ಸಂ:KA-21-647ರಲ್ಲಿ ಅಕ್ರಮವಾಗಿ ನಾದನ್ ಮಾಲ್ಟ್ ವಿಸ್ಕಿ 750 ಎಂಎಲ್‌ನ 72 ಸೀಸೆಗಳಲ್ಲಿ 54 ಲೀಟರು ಮದ್ಯ ಮತ್ತು ಫೀಟರ್ ಪೋರ್ಟ್ ತ್ರಿಬಲ್ ಎಕ್ಸ್ ರಮ್ 750 ಎಂಎಲ್‌ನ 12 ಸೀಸೆಗಳಲ್ಲಿ 9.000 ಲೀಟರು ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಈ ಪ್ರಾಧಿಕಾರದಿಂದ ದಿನಾಂಕ:24-4-2010ರಂದು ಕಾಲಂ 43(ಬಿ) ರಡಿ ನೀಡಲಾಗಿರುವ ಕಾರಣ ಕೇಳಿ ನೋಟೀಸನ್ನು ಆರೋಪಿ 1ನೇಯವರು ದಿ:29-4-2010ರಂದು ಸ್ವೀಕರಿಸಿಕೊಂಡಿದ್ದು, ಅವರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಅವರ ತಿಳುವಳಿಕೆಗೆ ಬಾರದೆ ಸದ್ರಿ ಅಪರಾಧವೆಸಗಲಾಗಿದೆ ಎಂಬ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳನ್ನು ಒಪ್ಪಿಸಲು ಮುಂದಾಗಿರುವುದಿಲ್ಲ. ಮತ್ತು ದಿನಾಂಕ:24.04.2010ರಂದು ನೀಡಲಾಗಿರುವ ಕಾರಣ ಕೇಳಿ ನೋಟಿಸಿಗೆ ಯಾವುದೇ ಉತ್ತರ ನೀಡಿರುವುದಿಲ್ಲ.

1965 ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳ ಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಪೊಲೀಸ್ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ,ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬಂದರು, ಮಂಗಳೂರು ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಗೋವಾ ರಾಜ್ಯದಿಂದ ಅಕ್ರಮವಾಗಿ ಮದ್ಯವನ್ನು ಕೇರಳ ರಾಜ್ಯಕ್ಕೆ ಸಾಗಾಣಿಕೆ ಮಾಡುವಾಗ ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆಯಡಿ ಅಪರಾಧವೆಸಗಲು ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರು ಸಂ:KA-21-647 ನ್ನು ವಶಪಡಿಸಿ ಕೊಂಡು ಸುಮಾರು 10 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಪೊಲೀಸ್ ನಿರೀಕ್ಷಕರು,ವಿಶೇಷ ಪೊಲೀಸ್ ಠಾಣೆ ,ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬಂದರು, ಮಂಗಳೂರುರವರ ಕಛೇರಿಯಲ್ಲಿ ಕೂಡಾ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರಾಗಲೀ ಅಥವಾ ಆರೋಪಿಗಳಾಗಲೀ ವಾಹನವು ತನ್ನದೆಂದು ತಿಳಿಸಿ ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ಈ ಪ್ರಾಧಿಕಾರದಿಂದ ದಿನಾಂಕ:24-4-2010ರಂದು ವಾಹನದ ನೋಂದಣಿ ಮಾಲೀಕರಿಗೆ ಮತ್ತು ಆರೋಪಿಗೆ ಕಾರಣ ಕೇಳಿ ನೋಟೀಸನ್ನು ನೀಡಲಾಗಿದ್ದರೂ, ಸದರಿ ನೋಟೀಸುಗಳನ್ನು ಒಂದನೇ ಆರೋಪಿ ಇವರು ದಿನಾಂಕ:29-4-2010ರಂದು ಸ್ವೀಕರಿಸಿಕೊಂಡಿದ್ದು ಯಾವುದೇ ಉತ್ತರವನ್ನು ಈ ಪ್ರಾಧಿಕಾರಕ್ಕೆ ನೀಡಿರುವುದಿಲ್ಲ ಹಾಗೂ ಮುಟ್ಟುಗೋಲು ನಡವಳಿ ಹಾಜರಾತಿ ನೋಟೀಸು ಗಳನ್ನು ನೀಡಲಾಗಿದ್ದರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿದಾರರ ಪಾಟೀ ಸವಾಲು ಹಾಗೂ ರಕ್ಷಣಾ ಸಾಕ್ಷಿಯನ್ನು ಹಾಜರುಪಡಿಸಿರುವುದಿಲ್ಲ. ಆದುದರಿಂದ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತು ಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ತನಿಖಾದಿಕಾರಿಯವರು ಸಲ್ಲಿಸಿದ್ದ ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯ ಪ್ರಕಾರ ವಾಹನದ ನೊಂದಾಣಿ ಮಾಲೀಕ ಶ್ರೀ.ನಾರಾಯಣ ಮೂಲ್ಯ ಬಿನ್:ವೆಂಕಪ್ಪ ಮೂಲ್ಯ, ಮೈಂದಾಳ ಹೌಸ್, ನಾವೂರು, ಬಂಟ್ವಾಳ ಇವರು ಆರ್.ಸಿ ಮಾಲೀಕರಾಗಿದ್ದು,ಸದ್ರಿ ಮೊಕದ್ದಮೆಯಲ್ಲಿ ಇವರು ದಿನಾಂಕ:15-8-09 ರಂದು ಖುದ್ದಾಗಿ ತನ್ನ ವಾಹನದಲ್ಲಿ ಗೋವಾದಿಂದ ಮದ್ಯವನ್ನು ಕೇರಳ ರಾಜ್ಯಕ್ಕೆ ಅಕ್ರಮವಾಗಿ ಸಾಗಾಟ ಮಾಡಿರುವುದು ಮೆಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ದಸ್ತಗಿರಿಯಾದ ಆರೋಪಿಯು ಇದುವರೆಗೂ ವಾಹನದ ಬಿಡುಗಡೆಗಾಗಿ ಅರ್ಜಿ ಸಲ್ಲಿಸದಿರುವ ಕಾರಣಕ್ಕೆ, ವಾಹನದಲ್ಲಿ ಮದ್ಯ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಂಬಾಸಿಡರ್ ಕಾರನ್ನು ಈಗಾಗಲೇ 10 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಗೋವಾ ರಾಜ್ಯದಿಂದ ಅಕ್ರಮವಾಗಿ ಮದ್ಯವನ್ನು ಕೇರಳ ರಾಜ್ಯಕ್ಕೆ ಸಾಗಾಟ ಮಾಡಲು ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಅಂಬಾಸಿಡರ್ ಕಾರು ಸಂ:KA-21-647wನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/68/ಡಿಟಿಸಿಆರ್/2009-10, ದಿನಾಂಕ:19ನೇ ಜೂನ್, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ನಿರೀಕ್ಷಕರು, ವಿಶೇಷ ಪೊಲೀಸ್ ಠಾಣೆ, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಬಂದರು, ಮಂಗಳೂರು ಇವರ ತಕ್ಷೀರು ಸಂ: 6/2009 ದಿ:15-8-2009 ರಲ್ಲಿ ಅಕ್ರಮ ಸಾಗಾಟಕ್ಕೆ ಬಳಸಿದ ಜಪ್ತುಪಡಿಸಿಕೊಂಡಿರುವ ಅಂಬಾಸಿಡರ್ ಕಾರು ಸಂ:KA-21-647 ನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿರುತ್ತೇನೆ.

ಈ ಆದೇಶವನ್ನು ದಿನಾಂಕ:19-06-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್
ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ.ಬಿ.ಜಿ.ಆಚಾರ್, ಪೊಲೀಸ್ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳ, ಬಂದರು, ಮಂಗಳೂರು.

ಪ್ರಾ.ಸಾ-2: ಶ್ರೀ.ಎಂ.ಕೆ.ಕೇಶವಮೂರ್ತಿ ಅಬಕಾರಿ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ-2, ಮಂಗಳೂರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರು.

ನಿಶಾನೆ ಪಿ-1ಎ : ಮಹಜರಿನಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ-2 : ಪ್ರಥಮ ಮಾಹಿತಿ ವರದಿ

ನಿಶಾನೆ ಪಿ-2ಎ : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ-3 : ಫಿರ್ಯಾದುದಾರರ ವರದಿ

ನಿಶಾನೆ ಪಿ-4 : ರಾಸಾಯನಿಕ ವಿಶ್ಲೇಷಣಾ ವರದಿ

ನಿಶಾನೆ ಪಿ-4ಎ : ಅದರಲ್ಲಿರುವ ಫಿರ್ಯಾದುದಾರರ ಸಹಿ.

ನಿಶಾನೆ ಪಿ-5 : ಪ್ರಾ.ಸಾ -2 ರವರ ತನಿಖಾ ವರದಿ

ನಿಶಾನೆ ಪಿ-5ಐ : ಪ್ರಾ.ಸಾ -2 ರವರ ಸಹಿ

ನಿಶಾನೆ ಪಿ-6 : ಬಿ ಅಬ್‌ಸ್ಟ್ರ್ಯಾಕ್ಟ್ ವರದಿ.

ನಿಶಾನೆ ಪಿ-6ಐ : ಪ್ರಾ.ಸಾ -2 ರವರ ಸಹಿ

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1090

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು, ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/377/ಡಿಟಿಸಿಆರ್/2008-09, ದಿನಾಂಕ:18ನೇ ಜೂನ್, 2010

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು.

ಫಿರ್ಯಾದುದಾರರು:

ಪೊಲೀಸ್ ಉಪ ನಿರೀಕ್ಷಕರು, ವೇಣೂರು ಪೊಲೀಸ್ ಠಾಣೆ, ವೇಣೂರು.

ಆರೋಪಿ ಮತ್ತು ವಾಹನದ ಮಾಲೀಕರು:

1) ಅನಿಲ್ ಕುಮಾರ್, ಬಿನ್ ಚಿನ್ನಪ್ಪ ಪೂಜಾರಿ ಪಂಚರತ್ನ ನಿವಾಸ: ಕುದ್ಯಾಡಿ ಗ್ರಾಮ ಮತ್ತು ಅಂಚೆ.ಬೆಳ್ತಂಗಡಿ ತಾಲ್ಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:28-4-2009 ರಂದು ಬೆಳಿಗ್ಗೆ ಸುಮಾರು 10-30 ಗಂಟೆ ಸಮಯದಲ್ಲಿ ಪೊಲೀಸ್ ಉಪಾಧೀಕ್ಷಕರು,ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಪಶ್ಚಿಮ ವಲಯ,ಮಂಗಳೂರು ಇವರಿಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಸಿಬ್ಬಂಧಿಯವರೊಂದಿಗೆ ಕೂಡಿಕೊಂಡು ಬೆಳ್ತಂಗಡಿ ತಾಲೂಕಿನ ವೇಣೂರು ಎಂಬಲ್ಲಿ ಒಂದು ಆಟೋ ರಿಕ್ಷಾ ಬರುತ್ತಿರುವುದನ್ನು ಕಂಡು ಚಾಲಕನಿಗೆ ನಿಲ್ಲಿಸುವಂತೆ ಸೂಚಿಸಿದಾಗ ಆತನು ಆಟೊ ರಿಕ್ಷಾವನ್ನು ರಸ್ತೆಬದಿಯಲ್ಲಿ ನಿಲ್ಲಿಸಿ ಆತನ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಅನಿಲ್ ಕುಮಾರ್ ಬಿನ್:ಚಿನ್ನಪ್ಪ ಪೂಜಾರಿ ಪಂಚರತ್ನ ನಿವಾಸ: ಕುದ್ಯಾಡಿ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲ್ಲೂಕು, ಎಂದು ತಿಳಿಸಿರುತ್ತಾರೆ. ಆಟೋ ರಿಕ್ಷಾವನ್ನು ತಪಾಸಣೆ ಮಾಡಿದಾಗ ಸಾರ್ವಜನಿಕರ ಪ್ರಯಾಣಿಕರು ಕುಳಿತುಕೊಳ್ಳುವ ಹಿಂಬದಿಯಲ್ಲಿ ಒಂದು ರಟ್ಟಿನ ಬಾಕ್ಸ್ ಇದ್ದು, ಆ ಬಾಕ್ಸಿನ ಒಳಗಡೆ ಹೈವೇ ನಂ:1ವಿಸ್ಕಿ ಎಂದು ಬರೆದಿರುವ 180 ಎಂಎಲ್ ನ 48 ಸೀಸೆಗಳು ಇರುವುದು ಕಂಡುಬಂತು.ಸದ್ರಿ ಮದ್ಯವನ್ನು ಸಾಗಾಟ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಿದಾಗ ಆತನಲ್ಲಿ ಯಾವುದೇ ಪರವಾನಿಗೆ ಇಲ್ಲದೇ ಆತನು ಯಾವಾಗಲೂ ಮದ್ಯದ ರಟ್ಟಿನ ಪೆಟ್ಟಿಗೆ ಯನ್ನು ತುಂಬಿಕೊಂಡು ತನ್ನ ಮನೆಯಾದ ಕುದ್ಯಾಡಿ ಗ್ರಾಮದ ಪಂಚರತ್ನ ನಿವಾಸದಲ್ಲಿ ಮಾರಾಟ ಮಾಡಲೆಂದು ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದ್ರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗಾಗಿ 180 ಎಂಎಲ್‌ನ ಒಂದು ಬಾಟಲಿಯನ್ನು ತೆಗೆದು ಅದಕ್ಕೆ ಬಟ್ಟೆ ದಾರ ಸುತ್ತಿ ಅರಗು ಸೀಲಿನಿಂದ ಸೀಲು ಮಾಡಿ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಯಿತ್ತು. ಸದ್ರಿ ಆಟೋ ರಿಕ್ಷಾವನ್ನು ಪರಿಸೀಲಿಸಿದಾಗ ಇದರ ನೊಂದಾವಣೆ ಸಂ: KA-21-7803 ಆಗಿದ್ದು, ರಿಕ್ಷಾದ ಹಿಂಭಾಗದಲ್ಲಿ ಪಂಚರತ್ನ ಎಂಬ ಹೆಸರಿನಿಂದ ಬರೆದಿರುವುದು. ಇದರ ಚಾಸೀಸ್ ನಂ:24FBMD25107 ಆಗಿದ್ದು, ಇಂಜಿನ್ ನಂ: AEMBMD26434 ಆಗಿರುತ್ತದೆ. ಸದ್ರಿ ಆಟೋ ರಿಕ್ಷಾವನ್ನು ಹಾಗೂ ಮದ್ಯವನ್ನು ಇಲಾಖಾ ವಶಕ್ಕೆ ತೆಗೆದುಕೊಂಡು, ಆಟೋ ರಿಕ್ಷಾದ ಚಾಲಕನನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ, ಮಹಜರನ್ನು ಸ್ಥಳದಲ್ಲಿಯೇ ಬರೆದು ಮಹಜರಿನಲ್ಲಿ ಸ್ಥಳ ಚೆಕ್ ಬಂಧಿಯನ್ನು ನಮೂದಿಸಿ ಮಹಜರಿಗೆ ಪಂಚರ ಹಾಗೂ ಸಿಬಂದಿಯವರ ಸಹಿಯನ್ನು ಪಡೆದು ಕೊಂಡಿರುತ್ತಾರೆ. ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 32,34 ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಜಪ್ತು ಮಾಡಲಾದ ಸೊತ್ತುಗಳನ್ನು ಮತ್ತು ದಸ್ತಗಿರಿಯಾದ ಆರೋಪಿಯನ್ನು ಹಾಗೂ ಸ್ಥಳದಲ್ಲಿ ತಯಾರಿಸಿದ ಮಹಜರಿನೊಂದಿಗೆ ಠಾಣಾಧಿಕಾರಿಗಳು, ವೇಣೂರು ಪೊಲೀಸ್ ಠಾಣೆ, ವೇಣೂರು ಇವರಿಗೆ ತಕ್ಷೀರು ದಾಖಲಿಸಲು ಹಸ್ತಾಂತರಿಸಲಾಗಿದ್ದು, ಪೊಲೀಸ್ ಉಪ ನಿರೀಕ್ಷಕರು, ವೇಣೂರು ಪೊಲೀಸ್ ಠಾಣೆ, ವೇಣೂರು ಬೆಳ್ತಂಗಡಿ ತಾಲೂಕು ದಕ್ಷಿಣ ಕನ್ನಡ ಜಿಲ್ಲೆ ಇವರು ಅರೋಪಿ ಅನಿಲ್ ಕುಮಾರ್ ಬಿನ್:ಚಿನ್ನಪ್ಪ ಪೂಜಾರಿ ಪಂಚರತ್ನ ನಿವಾಸ: ಕುದ್ಯಾಡಿ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲ್ಲೂಕು, ಇವರ ವಿರುದ್ಧ ತಕ್ಷೀರು ಸಂ:25/2009 ದಿ:28-4-2009 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಪೊಲೀಸ್ ಉಪ ನಿರೀಕ್ಷಕರು, ವೇಣೂರು ಪೊಲೀಸ್ ಠಾಣೆ, ವೇಣೂರು ಬೆಳ್ತಂಗಡಿ ತಾಲೂಕು ಇವರ ಪತ್ರ ಸಂಖ್ಯೆ ದಿ:29-4-2009ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯ ಹಾಗೂ ಆಟೋ ರಿಕ್ಷಾವನ್ನು ಮುಂದಿನ ಮುಟ್ಟುಗೋಲು ನಡವಳಿಗೆ ಸಂಬಂಧಿಸಿ ವಲಯ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ ಇವರಿಗೆ ಹಸ್ತಾಂತರಿಸಲು ಅನುಮತಿ ನೀಡಬೇಕೆಂದು ಕೋರಿರುವ ಮೇರೆಗೆ ಈ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ:377: ಡಿಟಿಸಿಆರ್:2008-09 ದಿ:12-5-2009ರಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯ ಹಾಗೂ ಆಟೋ ರಿಕ್ಷಾವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ,ಬೆಳ್ತಂಗಡಿ ಇವರಿಗೆ ಹಸ್ತಾಂತರಿಸಲು ಆದೇಶ ನೀಡಲಾಗಿರುತ್ತದೆ.

ಅನಿಲ್ ಕುಮಾರ್ ಬಿನ್:ಚಿನ್ನಪ್ಪ ಪೂಜಾರಿ ಪಂಚರತ್ನ ನಿವಾಸ: ಕುದ್ಯಾಡಿ ಗ್ರಾಮ ಮತ್ತು ಅಂಚೆ, ಬೆಳ್ತಂಗಡಿ ತಾಲ್ಲೂಕು, ಇವರು ತಮ್ಮ ವಕೀಲರ ಮುಖಾಂತರ ದಿ:27-5-2009ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಅಟೋ ರಿಕ್ಷಾ ಸಂ:KA-21-7803ರ ಆರ್.ಸಿ. ಮಾಲೀಕರು ತಾನೆಂದು, ಈ ಬಗ್ಗೆ ವಾಹನದ ಆರ್.ಸಿ ಪುಸ್ತಕದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿ ಸದ್ರಿ ಆಟೋ ರಿಕ್ಷಾವು ಯಾವುದೇ ಅಕ್ರಮ ಮದ್ಯ ಸಾಗಾಣಿಕೆಯಲ್ಲಿ ಒಳಗೊಂಡಿರುವುದಿಲ್ಲ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾ ವನ್ನು ತನಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ತಮ್ಮ ಅರ್ಜಿಯಲ್ಲಿ ಕೋರಿರುತ್ತಾರೆ.

ವಾಹನದ ಮಾಲೀಕರ ಅರ್ಜಿಯ ಕುರಿತು ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ ಇವರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ವಾಹನದ ಮೌಲ್ಯ ಮಾಪನ ವರದಿ ಮತ್ತು ವಾಹನದ ಬಿ ರಿಜಿಸ್ಟಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆದು

ದಿನಾಂಕ:13-7-2010ರಂದು ಈ ಪ್ರಾಧಿಕಾರಕ್ಕೆ ಒಪ್ಪಿಸಿರುತ್ತಾರೆ. ಸದ್ರಿ ಪತ್ರದ ಅನುಸಾರ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ತನಿಖಾ ವರದಿ ಸಂ:ಬಿಎಲ್‌ಡಿ:ಇಎಕ್ಸ್‌ಇ:ಸಿಆರ್‌ಎಂ:10: 2009-10 ದಿ:13-7-2009ರ ವರದಿಯಲ್ಲಿ ಮೋಟಾರು ವಾಹನ ನಿರೀಕ್ಷಕರು ಇವರ ಮೌಲ್ಯ ಮಾಪನ ಪತ್ರ ದಿ:24-6-2009 ರಲ್ಲಿ ಬಜಾಜ್ ಆಟೋ ರಿಕ್ಷಾ ವಾಹನದ ಈಗಿನ ಮೌಲ್ಯ ರೂ.16000/- ಆಗಬಹುದೆಂದು ದೃಡೀಕರಣ ಪತ್ರ ನೀಡಿರುತ್ತಾರೆ. ಹಾಗೂ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಲ್ಲಿಸಲಾಗಿದ್ದು, ಸದ್ರಿ ವರದಿಯಲ್ಲಿ ವಾಹನದ ಮಾಲೀಕ ಶ್ರೀ. ಅನಿಲ್ ಕುಮಾರ್ ಬಿನ್: ಚೆನ್ನಪ್ಪ ಪೂಜಾರಿ ಪಂಚರತ್ನ ನಿವಾಸ, ಕುದ್ಯಾಡಿ ಬೆಳ್ತಂಗಡಿ ತಾಲೂಕು ಹಾಗೂ ವಾಹನದ ಚಾಸೀಸ್ ನಂಬರ್ ಮತ್ತು ಇಂಜಿನ್ ನಂಬರ್ ಒಂದಕ್ಕೊಂದು ತಾಳೆಯಾಗಿರುತ್ತದೆ. ಹಾಗೂ ತಕ್ಷೀರಿನಲ್ಲಿ ತೆಗೆದ ಸ್ಯಾಂಪಲ್‌ಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರಿಂದ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರು ದ.ಕ ಜಿಲ್ಲೆ ಮಂಗಳೂರುರವರ ಪತ್ರ ಸಂ:ಇ-180 ದಿ:16-5-2009ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ 42% ಇರುವುದಾಗಿ ದೃಡೀಕರಣ ಪತ್ರ ನೀಡಿರುತ್ತಾರೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವನ್ನು ಹಾಗೂ ಮದ್ಯವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆಟೋ ರಿಕ್ಷಾವನ್ನು ಬಹಿರಂಗ ಹರಾಜಿನಲ್ಲಿ ಮತ್ತು ಮದ್ಯವನ್ನು ನಾಶಪಡಿಸಲು ಆದೇಶ ನೀಡಬೇಕೆಂದು ತನಿಖಾಧಿಕಾರಿಯವರು ಶಿಫಾರಸ್ಸು ಮಾಡಿರುತ್ತಾರೆ. ಸದ್ರಿ ವರದಿಯನ್ನು ಅವಲೋಕನೆ ಮಾಡಿ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ವರದಿ ಸಂ:102/2008-09 ದಿ:18-7-2009ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯ ಹಾಗೂ ಆಟೋ ರಿಕ್ಷಾವನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43 ಸಿ ರೀತ್ಯಾ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ವಾಹನದ ಆರ್.ಸಿ ಮಾಲೀಕರಾದ ಶ್ರೀ. ಅನಿಲ್ ಕುಮಾರ್ ಬಿನ್: ಚೆನ್ನಪ್ಪ ಪೂಜಾರಿ ಪಂಚರತ್ನ ನಿವಾಸ, ಕುದ್ಯಾಡಿ ಬೆಳ್ತಂಗಡಿ ತಾಲೂಕು ಇವರಿಗೆ ಈ ಪ್ರಾಧಿಕಾರದಿಂದ ದಿ:27-7-2009ರಂದು, ಮೋಟಾರು ವಾಹನ ನಿರೀಕ್ಷಕರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಪುತ್ತೂರು ಇವರು ದಿ:24-6-2009ರಂದು ಸದ್ರಿ ವಾಹನದ ಪ್ರಸ್ತುತ ಮಾರುಕಟ್ಟೆ ಅಂದಾಜು ಮೌಲ್ಯ ರೂ.16000/-ಗಳಾಗಬಹುದೆಂದು ದೃಡೀಕರಣ ಪತ್ರ ನೀಡಿರುವುದ ರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನ ಸಂ:KA-21-7803 ಆಟೋ ರಿಕ್ಷಾದ ಮೌಲ್ಯ ರೂ.16000/-ಕ್ಕೆ ಸಮಾನವಾದ ಬ್ಯಾಂಕ್ ಗ್ಯಾರೆಂಟಿಯನ್ನು ಯಾವುದೇ ಸ್ಥಳೀಯ ರಾಷ್ಟ್ರೀಕೃತ ಬ್ಯಾಂಕ್ ಶಾಖೆಯಿಂದ ಈ ಪ್ರಾಧಿಕಾರದ ಪರ ಪಡೆದು ಒಪ್ಪಿಸಲು ಹಾಗೂ ವಾಹನದ ಮೌಲ್ಯಕ್ಕೆ ಒಬ್ಬ ಶ್ಯೂರಿಟಿದಾರರಿಂದ ರೂ.100/- ಮುಖ ಬೆಲೆಯ ಛಾಪಾ ಕಾಗದದಲ್ಲಿ ಬಾಂಡ್ ಪತ್ರವನ್ನು ಪಡೆದು ಈ ಪ್ರಾಧಿಕಾರಕ್ಕೆ ಒಪ್ಪಿಸಲು ಸೂಚಿಸಿ ನೋಟಿಸು ನೀಡಲಾಗಿದ್ದು, ಸದ್ರಿ ನೋಟಿಸಿಗೆ ಅನುಗುಣವಾಗಿ ವಾಹನದ ಮಾಲೀಕರು ಈ ಪ್ರಾಧಿಕಾರಕ್ಕೆ ದಿನಾಂಕ:29-7-2009ರಂದು ಸಿಂಡಿಕೇಟ್ ಬ್ಯಾಂಕ್, ಬೆಳ್ತಂಗಡಿ ಶಾಖೆ, ಬೆಳ್ತಂಗಡಿ ಇವರಿಂದ ರೂ.16000/-ದ ಮೌಲ್ಯಕ್ಕೆ ಸಮಾನವಾದ ಬ್ಯಾಂಕ್ ಭದ್ರತೆ ಸಂಖ್ಯೆ:E54BGJGF 09212000 ದಿ:31-7-2009ರಂತೆ ಭದ್ರತಾ ಪತ್ರ ಒಪ್ಪಿಸಿ, ಅಷ್ಟೇ ಮೊತ್ತಕ್ಕೆ ಜಾಮೀನು ದಾರರಾದ ಶ್ರೀ.ಬಾಬು ಪೂಜಾರಿ ಬಿನ್:ಕೊರಗಪ್ಪ ಪೂಜಾರಿ,38 ವರ್ಷ ,ವಾಸ ನಂ:64, ಹಿಮರಾದ ಹೌಸ್, ನಾವಾರ ವಿಲೇಜ್, ಸುಲ್ಕೇರಿ ಅಂಚೆ ಬೆಳ್ತಂಗಡಿ ತಾಲೂಕು ಇವರಿಂದ ಸದ್ರಿ ಮೊತ್ತಕ್ಕೆ ಬಾಂಡ್ ಪತ್ರ ಮತ್ತು ಸದ್ರಿ ವ್ಯಕ್ತಿಗಳಿಂದ ಅಫಿದಾವಿತ್‌ಗಳನ್ನು ಹಾಜರು ಪಡಿಸುತ್ತಾರೆ. ಹಾಗೂ ಬ್ಯಾಂಕ್ ಗ್ಯಾರೆಂಟಿಯನ್ನು ನೀಡಿದ್ದ ಬಗ್ಗೆ ಪ್ರಭಂದಕರು, ಸಿಂಡಿಕೇಟ್ ಬ್ಯಾಂಕ್ ಬೆಳ್ತಂಗಡಿ ಶಾಖೆ, ಬೆಳ್ತಂಗಡಿ ಇವರಿಂದ ಸ್ಥಿರೀಕರಣ ಪತ್ರ ಪ್ರಾಧಿಕಾರ ದಲ್ಲಿ ಸ್ವೀಕೃತವಾಗಿರುತ್ತದೆ.

ವಾಹನದ ಮಾಲೀಕರು ವಾಹನದ ಮೌಲ್ಯಕ್ಕೆ ಅನುಗುಣವಾಗಿ ರೂ.16,000/- ಸಮಾನವಾದ ಬ್ಯಾಂಕ್ ಭದ್ರತೆ ನೀಡಿರುವುದರಿಂದ ಪೊಲೀಸ್ ಉಪ ನಿರೀಕ್ಷಕರು, ವೇಣೂರು ಪೊಲೀಸ್‌ಠಾಣೆ, ವೇಣೂರು ಇವರ ತಕ್ಷೀರು ಸಂ:25/2009ಕ್ಕೆ ಸಂಬಂಧಿಸಿ ಜಪ್ತು ಮಾಡಿರುವ ಆಟೋ ರಿಕ್ಷಾ ನೊಂದಣಿ ಸಂ: KA-21-7803ನ್ನು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಎ ಮತ್ತು ಬಿ ರಡಿಯಲ್ಲಿ ಮುಂದಿನ ಮುಟ್ಟುಗೋಲು ವಿಚಾರಣೆಯನ್ನು ಕಾಯ್ದಿರಿಸಿ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಎ (2)(1) ತಿದ್ದುಪಡಿ ನಿಯಮನುಸಾರ ಕೆಲವು ಷರತ್ತುಗಳ ಅನ್ವಯ ವಾಹನದ ಮಾಲೀಕರಾದ ಶ್ರೀ.ಅನಿಲ್ ಕುಮಾರ್ ಇವರ ಮಧ್ಯಂತರ ಸುಪರ್ಧಿಗೆ ಬಿಡುಗಡೆಗೊಳಿಸಿ, ಈ ಪ್ರಾಧಿಕಾರದ ಆದೇಶ ಸಂ: ಎಸ್‌ಡಿಕೆ: 377: ಡಿಟಿಸಿಆರ್:2008-09 ದಿ:10-8-2009ರಂದು ಆದೇಶ ನೀಡಲಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ 180 ಎಂಎಲ್‌ನ 48 ಸೀಸೆಗಳಲ್ಲಿ ರಾಸಯನಿಕ ವಿಶ್ಲೇಷಣೆಗೆ ತೆಗೆದು ಉಳಿದ 180 ಎಂ ಎಲ್ ನ 48 ಸೀಸೆಗಳಂತೆ ಒಟ್ಟು 8.460 ಲೀ ಹೈವೇ ನಂ:1 ವಿಸ್ಕಿ ಮದ್ಯದ ಸೊತ್ತುಗಳಿಗೆ ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಈ ಪ್ರಾಧಿಕಾರದಲ್ಲಿ ಯಾರೊಬ್ಬರೂ ಬೇಡಿಕೆ ಅರ್ಜಿ ಸಲ್ಲಿಸದೇ ಇರುವುದು ಹಾಗೂ ವಾರುಸುದಾರರು ಮುಂದೆ ಬಂದು ಸದ್ರಿ

ಸೊತ್ತುಗಳು ತಮ್ಮದೆಂದು ತಿಳಿಸಿ ಬಿಡುಗಡೆ ಅರ್ಜಿ ಸಲ್ಲಿಸದೇ ಇದ್ದು ಮತ್ತು ಸದ್ರಿ ಸೊತ್ತುಗಳಿಗೆ ಸಂಬಂಧಿಸಿ ದಾಖಲಾಗಿರುವ ಮೊಕದ್ದಮೆಯಲ್ಲಿ ಆರೋಪಿ ಮತ್ತು ಮಾಲೀಕರನಾಗಿರುವ ಅನಿಲ್ ಕುಮಾರ್ ಇವರು ಸಹ ಸೊತ್ತುಗಳು ತನ್ನದೆಂದು ಪಡೆಯಲು ಮುಂದೆ ಬಾರದಿರುವ ಕಾರಣ ಪ್ರಕರಣದಲ್ಲಿ ಜಪ್ತಾದ ಸೊತ್ತುಗಳ ಪೈಕಿ ಆಟೋ ರಿಕ್ಷಾವನ್ನು ಹೊರತುಪಡಿಸಿ ಉಳಿದ 8.460 ಲೀ ಹೈವೇ ನಂ:1 ವಿಸ್ಕಿ ಮದ್ಯವನ್ನು ಈ ಪ್ರಾದಿಕಾರದ ಆದೇಶ ಸಂ:ಎಸ್ ಡಿಕೆ:377:ಡಿಟಿಸಿಆರ್:2008–09 ದಿ:10–8–2009ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಅದೇಶ ನೀಡಲಾಗಿರುತ್ತದೆ.

ವಾಹನದ ಮಾಲೀಕರಾದ ಶ್ರೀ.ಅನಿಲ್ ಕುಮಾರ್ ಇವರಿಗೆ ಈ ಪ್ರಾಧಿಕಾರದಿಂದ ದಿ:10–8–2009ರಂದು ಕರ್ನಾಟಕ ಅಬಕಾರಿ ಕಾಯಿದೆ 1965ರ ಸೆಷನ್ 43 ಬಿ ಪ್ರಕಾರ ಕಾರಣ ಕೇಳಿ ನೋಟಿಸನ್ನು ನೊಂದಾವಣೆ ಅಂಚೆ ಮೂಲಕ ನೀಡಲಾಗಿದ್ದು,ಸದ್ರಿ ನೋಟಿಸನ್ನು ಸ್ವೀಕರಿಸಿ ಸದ್ರಿ ನೋಟಿಸಿಗೆ ಉತ್ತರವನ್ನು ಅವರ ವಕೀಲರ ಮುಖಾಂತರ ಈ ಪ್ರಾದಿಕಾರಕ್ಕೆ ದಿ:25–8–2009ರಂದು ಸಲ್ಲಿಸಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ: 28–4–2009 ರಂದು ಬಜಾಜ್ ಆಟೋರಿಕ್ಷಾ ಸಂಖ್ಯೆ: KA-21-7803 ರಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾಸಾ: 1

ಪ್ರಾಸಿಕ್ಯೂಷನ್ ಪರ ಪ್ರಕರಣದ ಮಹಜರು ಸಾಕ್ಷಿದಾರರಾದ ಶ್ರೀ.ಪಾಪಯ್ಯ, ಪೊಲೀಸ್ ಉಪಾಧೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಪಶ್ಚಿಮ ವಲಯ,ಮಂಗಳೂರು ಇವರು ದಿ:8–12–2009ರಂದು ಈ ಪ್ರಾದಿಕಾರದ ಮುಂದೆ ಎ.ಡಿ.ಪಿರವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ ತಾನು ದಿ:28–4–2009ರಂದು ದೊರೆತ ಖಚಿತ ವರ್ತಮಾನದ ಮೇರೆಗೆ ತಮ್ಮ ಸಿಬ್ಬಂಧಿಯವರೊಂದಿಗೆ ವೇಣೂರು–ಮೂಡಬಿದ್ರೆ ಕಡೆಗೆ ಹೋಗುವ ದಾರಿ ಮದ್ಯದಲ್ಲಿ ಒಂದು ಅಟೋ ರಿಕ್ಷಾವನ್ನು ನಿಲ್ಲಿಸಿ ತಪಾಸಣೆ ಮಾಡಿದಾಗ ಅದರ ಹಿಂಬದಿ ಸೀಟಿನಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇರುವುದು ಕಂಡು ಬಂತು. ಸದರಿ ಪೆಟ್ಟಿಗೆಯ ಮೇಲೆ ನಂ:1 ಹೈವೇ ವಿಸ್ಕಿ, ಜೆ.ಪಿ. ಡಿಸ್ಟಿಲರಿ ಪ್ರೈವೇಟ್ ಲಿಮಿಟೆಡ್ ಎಂದು ಬರೆದಿದು, ರಟ್ಟಿನ ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ 180 ಎಂಎಲ್‌ನ ಮದ್ಯ ತುಂಬಿದ 48 ಸೀಸೆಗಳಿರುವುದು ಕಂಡು ಬಂತು. ಸದ್ರಿ ಅಟೋ ರಿಕ್ಷಾದ ಚಾಲಕನನ್ನು ವಿಚಾರಿಸಲಾಗಿ ಅತನ ಹೆಸರು ಅನಿಲ್ ಕುಮಾರ್ ಬಿನ್ ಚೆನ್ನಪ್ಪ ಪೂಜಾರಿ,ಬೆಳ್ತಂಗಡಿ ತಾಲೂಕು ಎಂದು ತಿಳಿಸಿದನು. ಸದ್ರಿ ಮದ್ಯವನ್ನು ಸಾಗಾಟ ಮಾಡಲು ಪರವಾನಿಗೆ ಇದೆಯೇ ಎಂದು ವಿಚಾರಿಸಲಾಗಿ ಅತನ ಬಳಿ ಯಾವುದೇ ಪರವಾನಿಗೆ ಇಲ್ಲವೆಂದು ತಿಳಿಸಿದನು. ಸದ್ರಿ ಆಟೋ ರಿಕ್ಷಾವನ್ನು ಪರಿಶೀಲಿಸಿದಾಗ ಇದರ ನೊಂದಣಿ ಸಂ:KA-21-7803 ಆಗಿದ್ದು, ಸದ್ರಿ ಆಟೋ ರಿಕ್ಷಾ ಹಾಗೂ ಮದ್ಯವನ್ನು ಪಂಚರ ಸಮಕ್ಷಮ ಮಹಜರು ಮುಖೇನಾ ಸ್ವಾಧೀನ ಪಡಿಸಿಕೊಳ್ಳಲಾಯಿತು.ಸದ್ರಿ ಮದ್ಯದಿಂದ ಒಂದು ಬಾಟಲಿಯನ್ನು ರಾಸಯನಿಕ ಪರೀಕ್ಷೆಗೆ ತೆಗೆದು ಪಂಚರ ಸಹಿಯಿರುವ ಚೀಟಿಯನ್ನು ಅಂಟಿಸಲಾಯಿತು. ಸದ್ರಿ ಮಹಜರನ್ನು ಬೆಳಿಗ್ಗೆ 10–40ರಿಂದ 11–45 ರವರೆಗೆ ಸ್ಥಳದಲ್ಲಿಯೇ ತಯಾರಿಸಿ ಆ ಸಮಯ ಪಂಚರು ಕೂಡಾ ಹಾಜರಿದ್ದು,ನಂತರ ಆರೋಪಿ, ಸೊತ್ತು ಹಾಗೂ ದಾಖಲೆಗಳೊಂದಿಗೆ ವೇಣೂರು ಠಾಣೆಗೆ ಬೇಟಿ ಕೊಟ್ಟು ವರದಿಯನ್ನು ನೀಡಿ ಮುಂದಿನ ತನಿಖೆಗಾಗಿ ಹಸ್ತಾಂತರಿಸಲಾಗಿದೆ. ಸ್ಥಳದಲ್ಲಿಯೇ ತಯಾರಿಸಿದ ಮಹಜರನ್ನು ನಿಶಾನೆ ಪಿ–1 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ–1 ಎ ಎಂದು ಗುರುತಿಸಲಾಯಿತು. ವೇಣೂರು ಠಾಣೆಯಲ್ಲಿ ತಯಾರಿಸಿದ ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–2 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ–2 ಎ

ಎಂದು ಗುರುತಿಸಲಾಯಿತು.ತಾನು ಸ್ವಾಧೀನಪಡಿಸಿದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಅರ್ಜಿದಾರರ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತ ತನ್ನ ಕೇಂದ್ರ ಕಛೇರಿ ಮಂಗಳೂರು ಮಹಾನಗರ ಪಾಲಿಕಯಲ್ಲಿರುತ್ತದೆ. ತಾನು ದಿ:28-4-2009ರಂದು ತನ್ನ ಕಛೇರಿಯಿಂದ ಬೆಳಿಗ್ಗೆ 8-00 ಗಂಟೆಗೆ ಹೊರಟಿರುತ್ತೇನೆ. ದಿ:30-4-2009ಕ್ಕೆ ಸಾರ್ವತ್ರಿಕ ಚುನಾವಣೆ ಇದೆ ಎಂದರೆ ಸರಿ, ಚುನಾವಣೆ ಸಂದರ್ಭದಲ್ಲಿ ಇಲಾಖಾ ಪ್ರಗತಿ ಉದ್ದೇಶದಿಂದ ಸುಳ್ಳು ಮೊಕದ್ದಮೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಮಹಜರು ಸಾಕ್ಷಿದಾರರು ನೀಡಿರುವ ಹೇಳಿಕೆಯು ಮಹಜರಿನಲ್ಲಿ ನಮೂದಿಸಿರುವ ಅಂಶಕ್ಕೆ ಒಂದಕ್ಕೊಂದು ತಾಳೆಯಾಗಿದ್ದು,ಇದರಿಂದ ಅರ್ಜಿದಾರರಿಗೆ ಯಾವುದೇ ಪ್ರಯೋಜನಕರ ಅಂಶವು ಸಾಬೀತಾಗಿರುವುದಿಲ್ಲ.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ.ಎಂ.ವಾಸುದೇವ ನಾಯ್ಕ್,ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ವೇಣೂರು ಪೊಲೀಸ್ ಠಾಣೆ,ವೇಣೂರು ಇವರು ದಿನಾಂಕ:9-2-2010ರಂದು ಎ.ಡಿ.ಪಿರವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ ತಾನು ದಿ:28-4-2009ರಂದು ಠಾಣೆಯಲ್ಲಿ ಇದ್ದಾಗ ಮಧ್ಯಾಹ್ನ 2-00 ಗಂಟೆ ಸಮಯದಲ್ಲಿ ತಕ್ಷೀರಿಗೆ ಸಂಬಂಧಿಸಿದ ಸೊತ್ತುಗಳನ್ನು ಹಾಗೂ ಆರೋಪಿ ಅನಿಲ್ ಕುಮಾರನ್ನು ಠಾಣೆಗೆ ತಂದು, ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿರುವ ಮೇರೆಗೆ ಆರೋಪಿಯ ವಿರುದ್ದ ತಕ್ಷೀರು ಸಂ:25/2009 ಕರ್ನಾಟಕ ಅಬಕಾರಿ ಕಾಯಿದೆ ಕಲಂ 32 ಮತ್ತು 34 ರಡಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿದೆನು. ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-2 ಎಂದು ಗುರುತಿಸಲಾಗಿದ್ದು, ನಂತರ ಸದ್ರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗಾಗಿ ಒಂದು ಬಾಟಲಿಯನ್ನು ತೆಗೆದು ರಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ. ತಕ್ಷೀರಿಗೆ ಸಂಬಂಧಿಸಿದ ಪಿ.ಎಫ್‌ನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಹಾಗೂ ಅರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು,ಮುಂದಿನ ತನಿಖೆಗಾಗಿ ಪೊಲೀಸ್ ಉಪ ನಿರೀಕ್ಷಕರಿಗೆ ಹಸ್ತಾಂತರಿಸಿ ರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ ತಾನು ಪಾಪಯ್ಯರವರಿಂದ ಯಾವುದೇ ಸೊತ್ತುಗಳನ್ನು ಪಡೆದುಕೊಂಡಿರುವುದಿಲ್ಲ, ಹಾಗೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಫಿರ್ಯಾದುದಾರರು ನೀಡಿದ ಸಾಕ್ಷಿ ಹೇಳಿಕೆಗಳು ಒಂದಕ್ಕೊಂದು ಪೂರಕವಾಗಿದ್ದು ಇದರಿಂದ ವಾಹನದ ಮಾಲೀಕರು ಮದ್ಯ ವನ್ನು ಅಕ್ರಮವಾಗಿ ಸಾಗಾಟವಾಗದ ಬಗ್ಗೆ ಯಾವುದೇ ಅಂಶಗಳು ಸಾಬೀತಾಗಿರುವುದಿಲ್ಲ.

ಪ್ರಾ.ಸಾ: 3

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಸಿಹೆಚ್, ಸೋಮಶೇಖರ್ ಅಬಕಾರಿ ನಿರೀಕ್ಷಕರು, ಪುತ್ತೂರು ಉಪ ವಿಭಾಗ,ಪುತ್ತೂರು ಇವರು ದಿ:9-2-2010ರಂದು ಎ.ಡಿ.ಪಿ.ರವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ ತಾನು ತಕ್ಷೀರಿಗೆ ಸಂಬಂಧಿಸಿದ ಸೊತ್ತುಗಳನ್ನು ವೇಣೂರು ಪೊಲೀಸ್ ಠಾಣೆಯಿಂದ ಪಡೆದುಕೊಂಡಿರುತ್ತೇನೆ. ತನಿಖೆಯನ್ನು ಮುಂದುವರಿಸಿ ಸದ್ರಿ ವಾಹನದ ಬಿ ಎಕ್ಸ್ ಟ್ರಾಕ್ಟ್ ವರದಿಯನ್ನು ಹಾಗೂ ಮೌಲ್ಯ ಮಾಪನ ವರದಿಯನ್ನು ತರಿಸಿರುತ್ತೇನೆ. ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ನಿಶಾನೆ ಪಿ-3 ಎಂದು ಗುರುತಿಸ ಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ ತಾನು ಯಾವುದೇ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಪ್ರಾ.ಸಾ:4

ಪ್ರಾಸಿಕ್ಯೂಶನ್ ಪರ ಪ್ರಕರಣದ ಪಂಚ ಸಾಕ್ಷಿದಾರರಾದ ಶ್ರೀ.ಮಾರ್ಕ್ ಪಿರೇರಾ ಇವರು ದಿನಾಂಕ:9-2-2010ರಂದು ಎ.ಡಿ.ಪಿ.ರವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ ತಾನು ದಿ:28-4-2009ರಂದು ತನ್ನ ಸಮಕ್ಷಮ ನಿಶಾನೆ ಪಿ-1 ರ ಮಹಜರಿಗೆ ಸಹಿ ಮಾಡಿರುವ ಬಗ್ಗೆ ತನಗೆ ತಿಳಿದಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿಯು ಈ ಹಂತದಲ್ಲಿ ಮಹಜರಿಗೆ ವಿರುದ್ದವಾಗಿ ಸಾಕ್ಷಿ ನುಡಿದಿರುವುದರಿಂದ ಮಾನ್ಯ ಸಹಾಯಕ ಅಭಿಯೋಗ ನಿರ್ದೇಶಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ.

ಅರ್ಜಿದಾರರಿಗೆ ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ರಕ್ಷಣಾ ಸಾಕ್ಷಿ ವಿಚಾರಣೆಯನ್ನು ನಡೆಸಲು ಹಲವಾರು ಬಾರಿ ಹಾಜರಾತಿ ನೋಟೀಸುಗಳನ್ನು ನೀಡಲಾಗಿದ್ದು, ಸದರಿ ನೋಟೀಸುಗಳು ಸ್ವೀಕೃತವಾದ ಬಗ್ಗೆ ಸ್ವೀಕೃತಿ ರಶೀದಿ

ಈ ಪ್ರಾಧಿಕಾರದಲ್ಲಿ ತಲುಪಿರುತ್ತದೆ. ರಕ್ಷಣಾ ಪರ ವಕೀಲರು ಈ ಪ್ರಾಧಿಕಾರದಲ್ಲಿ ದಿನಾಂಕ:9-2-2010, 13-4-2010, 18-5-2010ರಂದು ನಡೆದ ವಿಚಾರಣೆಯಲ್ಲಿ ಹಾಜರಿದ್ದು. ಮೂರು ಬಾರಿ ರಕ್ಷಣಾ ಸಾಕ್ಷಿ ವಿಚಾರಣೆಗೆ ಕಾಲವಕಾಶ ಪಡೆದುಕೊಂಡಿದ್ದರೂ ಸಹ ರಕ್ಷಣಾ ವಿಚಾರಣೆ ನಡೆಸಲು ಮುಂದಾಗಿರುವುದಿಲ್ಲ.

ಪ್ರಕರಣದ ಫಿರ್ಯಾದುದಾರರು ಮತ್ತು ಮಹಜರು ಸಾಕ್ಷಿದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:28-4-2009 ರಂದು ಜಪ್ತುಪಡಿಸಿಕೊಂಡಿರುವ ಆಟೋರಿಕ್ಷಾ ಸಂ: KA-21-7803 ರಲ್ಲಿ 8.640 ಲೀಟರ್ ಮದ್ಯವನ್ನು ಅಕ್ರಮವಾಗಿ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಮೊಕದ್ದಮೆಯಲ್ಲಿ ಖುದ್ದು ವಾಹನದ ಮಾಲೀಕರೇ ಅರೋಪಿಯಾಗಿ ಅಪರಾಧವೆಸಗಿರುವುದು ಮತ್ತು ಅಪರಾಧ ಸ್ಥಳದಲ್ಲಿ ಅವರನ್ನು ದಸ್ತಗಿರಿ ಮಾಡಲಾಗಿದೆ. ಆ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೆ ಈ ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಸಾಕ್ಷಿ ನೀಡಿರುವುದಿಲ್ಲ. ಪೊಲೀಸ್ ಉಪಾಧೀಕ್ಷಕರು,ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ಇವರು ದಿ:28-4-2009-ರಂದು ರಸ್ತೆ ಕಾವಲು ನಡೆಸುತ್ತಿದ್ದ ಸಂದರ್ಭದಲ್ಲಿ ಆರ್.ಸಿ. ಮಾಲೀಕರು ಖುದ್ದು ಅಕ್ರಮ ಮದ್ಯ ಸಾಗಾಟ ಮಾಡುತ್ತಿದ್ದು, ದಸ್ತಗಿರಿಯಾದ ಆರೋಪಿ ವಾಹನದ ಚಾಲಕ ಹಾಗೂ ಮಾಲೀಕನಾಗಿದ್ದು, ತಾನೇ ಸ್ವತ: ಮದ್ಯವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಆದುದರಿಂದ ವಾಹನ ಮಾಲೀಕನೇ ಸ್ವತ: ತನ್ನ ಆಟೋರಿಕ್ಷಾವನ್ನು ಅಕ್ರಮ ಮದ್ಯ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಆಟೋರಿಕ್ಷಾದಲ್ಲಿ ಅಕ್ರಮವಾಗಿ 8.640 ಲೀಟರ್ ಮದ್ಯ ಸಾಗಾಟ ಮಾಡಲು ಬಳಸಲಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತು ಪಡಿಸ ಲಾಗಿರುವ ಆಟೋರಿಕ್ಷಾ ಸಂ: KA-21-7803ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವುದಾಗಿ ತೀರ್ಮಾನಿಸಿ ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/377/ಡಿಟಿಸಿಆರ್/2008-09, ದಿನಾಂಕ:18ನೇ ಜೂನ್, 2010

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪಾದೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ಮಂಗಳೂರು ಇವರು ದಿನಾಂಕ:28-4-2009ರಂದು ಪತ್ತೆ ಹಚ್ಚಿ ವರದಿ ಮಾಡಿರುವ ಪ್ರಕರಣಕ್ಕೆ ಪೊಲೀಸ್ ಉಪ ನಿರೀಕ್ಷಕರು, ವೇಣೂರು ಪೊಲೀಸ್ ಠಾಣೆ, ವೇಣೂರು ಇವರು ದಾಖಲಿಸಿರುವ ತಕ್ಷೀರು ಸಂಖ್ಯೆ:25/2009 ದಿನಾಂಕ:28-4-2009 ರಲ್ಲಿ ಜಪ್ತುಪಡಿಸಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ:KA-21-7803 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ:10-8-2009 ರಂದು ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ:KA-21-7803 ನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ ಭದ್ರತೆಯಾಗಿ ನೀಡಿರುವ ಬ್ಯಾಂಕ್ ಗ್ಯಾರಂಟಿ ಸಂಖ್ಯೆ: E54BGJGF09212000 ದಿ:31-7-2009 ಸಿಂಡಿಕೇಟ್ ಬ್ಯಾಂಕ್, ಬೆಳ್ತಂಗಡಿ ಶಾಖೆ, ಬೆಳ್ತಂಗಡಿ ಇದರ ಮೌಲ್ಯದ ಮೊತ್ತ ರೂ.16,000/- ವನ್ನು ಸರಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ. ಈ ಆದೇಶದ ಪಾಲನೆ ಹಾಗೂ ಸದ್ರಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನವನ್ನು ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರು ಪಡೆದುಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಆದೇಶಿಸಿದೆ.

ಈ ಆದೇಶವನ್ನು ದಿ:18-6-2010 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್
ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1- ಶ್ರೀ.ಪಾಪಯ್ಯ, ಪೊಲೀಸ್ ಉಪಾಧೀಕ್ಷಕರು,ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳ, ಪಶ್ಚಿಮ ವಲಯ, ಮಂಗಳೂರು.

ಪ್ರಾ.ಸಾ-2- ಶ್ರೀ.ಎಂ.ವಾಸುದೇವ ನಾಯ್ಕ್,ಸಹಾಯಕ ಪೊಲೀಸ್ ಉಪ ನಿರೀಕ್ಷಕರು, ವೇಣೂರು ಪೊಲೀಸ್ ಠಾಣೆ, ವೇಣೂರು.

ಪ್ರಾ.ಸಾ-3: ಶ್ರೀ.ಸಿ.ಹೆಚ್, ಸೋಮಶೇಖರ್ ಅಬಕಾರಿ ನಿರೀಕ್ಷಕರು,ಪುತ್ತೂರು ಉಪವಿಬಾಗ, ಪುತ್ತೂರು.

ಪ್ರಾ.ಸಾ-4: ಪಂಚ ಸಾಕ್ಷಿದಾರರಾದ ಶ್ರೀ.ಮಾರ್ಕ್ ಪಿರೇರಾ

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರ್ ಪ್ರತಿ

ನಿಶಾನೆ ಪಿ-1ಎ : ಮಹಜರ್‌ನಲ್ಲಿ ಪ್ರಾ.ಸಾ -1ರವರ ಸಹಿ

ನಿಶಾನೆ ಪಿ-2 : ಪ್ರಥಮ ಮಾಹಿತಿ ವರದಿ

ನಿಶಾನೆ ಪಿ-2ಎ : ಪ್ರಥಮ ಮಾಹಿತಿ ವರದಿಯಲ್ಲಿ ಪ್ರಾ.ಸಾ-2ರವರ ಸಹಿ

ನಿಶಾನೆ ಪಿ-3 : ಬಿ ಎಕ್ಸ್ ಟ್ರಾಕ್ಟ್ ವರದಿ

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

- ಇಲ್ಲ -

ನೂರ್ ಮಹಮ್ಮದ್ ಹುಸೇನ್
ಪಿ.ಆರ್.1091 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್
ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:174/2009-10, ದಿನಾಂಕ:29ನೇ ಏಪ್ರಿಲ್, 2010

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು:	**ವಿರುದ್ದ**	**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ, ಹುಣಸೂರು.		ಆರೋಪಿ ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:09.12.2009ರಂದು ಸಂಜೆ 5.30 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ ಇವರು ರತ್ನಪುರಿ ಕಾಲೋನಿಯಿಂದ ಹುಣಸೂರು ಪಟ್ಟಣಕ್ಕೆ ಬರುವ ರಸ್ತೆಯ ಪ್ರಾರಂಭದಲ್ಲಿನ ಅಡಿಕೆ ತೋಟದ ಹತ್ತಿರ ಎಂವೈಎಕ್ಸ್-3148 ನೋಂದಣಿ ಸಂಖ್ಯೆಯ ಎನ್‌ಫೀಲ್ಡ್ ಬುಲೆಟ್ ವಾಹನದಲ್ಲಿ ಅಕ್ರಮವಾಗಿ 128 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿಯನ್ನು ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿರುವುದಾಗಿ ಪ್ರಥಮ ಮಾಹಿತಿ ವರದಿ ಸಂಖ್ಯೆ:01/2009-10ರಲ್ಲಿ ಕರ್ನಾಟಕ

ಅಬಕಾರಿ ಕಾಯಿದೆ 1965ರ ಕಲಂ 11, 13, 14ರ ರೀತ್ಯಾ ಅಪರಾಧವಾಗಿದ್ದು, ವಿಧಿ 32, 38(ಎ) ಮತ್ತು 43(ಎ)ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಮೈಸೂರು ಪೂರ್ವ ಮತ್ತು ಪಶ್ಚಿಮ ಸಾರಿಗೆ ಪ್ರಾದೇಶಿಕ ಅಧಿಕಾರಿಗಳಿಗೆ ದಿನಾಂಕ:16.01.2010ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಸದರಿಯವರು ಬಿ ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಅದರಂತೆ ವಾಹನವು ಶ್ರೀ ಕೃಷ್ಣಸ್ವಾಮಿ ಬಿನ್ ಪಿ.ಎಂ. ಶ್ರೀನಿವಾಸ ಅಯ್ಯಂಗಾರ್, ಇನ್ಸ್‌ಪೆಕ್ಟರ್ ಆಫ್ ಓರಿಯಂಟಲ್ ಫೈರ್ ಅಂಡ್ ಜನರಲ್ ಇನ್ಸೂರೆನ್ಸ್ ಕಮ್., ಮಂಗಳೂರು ಇವರ ಒಡೆತನದಲ್ಲಿದ್ದು, ಕಲಂ 43(ಬಿ) ರಡಿಯಲ್ಲಿ ಕಾರಣ ಕೇಳುವ ನೋಟೀಸನ್ನು ನೀಡಲಾಗಿರುತ್ತದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:09.12.2009ರಂದು ಇವರು ರತ್ನಪುರಿ ಕಾಲೋನಿಯಿಂದ ಹುಣಸೂರು ಪಟ್ಟಣಕ್ಕೆ ಬರುವ ರಸ್ತೆಯ ಪ್ರಾರಂಭದಲ್ಲಿನ ಅಡಿಕೆ ತೋಟದ ಹತ್ತಿರ ಎಂವೈಎಕ್ಸ್-3148 ನೋಂದಣಿ ಸಂಖ್ಯೆಯ ಎನ್‌ಫೀಲ್ಡ್ ಬುಲೆಟ್ ವಾಹನದಲ್ಲಿ ಅಕ್ರಮವಾಗಿ 128 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಗಳು ಪರಾರಿಯಾಗಿರುತ್ತಾರೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 34ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಇದೂವರೆವಿಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯವು ವಾಹನ ಮಾಲೀಕನ ತಿಳುವಳಿಕೆಯಲ್ಲೇ ನಡೆದಿದೆ ಎಂಬುವುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣದಲ್ಲಿ ಆರೋಪಿಯು ಪರಾರಿಯಾಗಿದ್ದು ಇಂತಹ ಮೊಕದ್ದಮೆಗಳಲ್ಲಿ ಪ್ರಕರಣ ದಾಖಲಾದ ಒಂದು ತಿಂಗಳೊಳಗಾಗಿ ವಾಹನದ ಮಾಲೀಕತ್ವವನ್ನು ನಿರೂಪಿಸಲು ಯಾರೊಬ್ಬರೂ ಈ ಪ್ರಾಧಿಕಾರದ ಮುಂದೆ ಹಾಜರಾಗದಿದ್ದಲ್ಲಿ ಅಂತಹ ಅಬಕಾರಿ ವಸ್ತುಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (4) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/174/2009-10, ದಿನಾಂಕ:29ನೇ ಏಪ್ರಿಲ್, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)_ ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು, ಹುಣಸೂರು ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:01/2009-10, ದಿನಾಂಕ:09.12.2009ರಂದು ವಶಪಡಿಸಿಕೊಂಡ ಎಂವೈಎಕ್ಸ್-3148 ನೋಂದಣಿ ಸಂಖ್ಯೆಯ ಎನ್‌ಫೀಲ್ಡ್ ಬುಲೆಟ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಏಪ್ರಿಲ್ ತಿಂಗಳ 29ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.749

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ,
ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:215/2009-10, ದಿನಾಂಕ:15ನೇ ಏಪ್ರಿಲ್, 2010

ಉಪಸ್ಥಿತರು: ಡಾ॥ ವೈ. ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಅಬಕಾರಿ ನಿರೀಕ್ಷಕರು, ನಂಜನಗೂಡು ವಲಯ, ನಂಜನಗೂಡು.		ಬಿ.ಎಲ್. ಜಯಸಿಂಹ ಸಣ್ಣಮಾದಯ್ಯ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:07.01.2010ರಂದು ಬೆಳಿಗ್ಗೆ 9.30 ಗಂಟೆಯ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ನಂಜನಗೂಡು ವಲಯ ಇವರು ನಂಜನಗೂಡು ಟೌನ್‌ನ ನೀಲಕಂಠನಗರದ ಶ್ರೀ ವಿದ್ಯಾಗಣಪತಿ ಹಿರಿಯ ಪ್ರಾಥಮಿಕ ಶಾಲೆಯ ಮುಂಭಾಗದ ಮೈದಾನದಲ್ಲಿ ಕೆಎ-17/ಎಂ-1588 ನೋಂದಣಿ ಸಂಖ್ಯೆ ಮಾರುತಿ-800 ವಾಹನದಲ್ಲಿ ಅಕ್ರಮವಾಗಿ 75 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಪ್ರಥಮ ಮಾಹಿತಿ ವರದಿ ಸಂಖ್ಯೆ:03/2009-10ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 13, 14ರ ರೀತ್ಯಾ ಅಪರಾಧವಾಗಿದ್ದು, 32, 38(ಎ) ಮತ್ತು 43ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಬಿ.ಎಲ್. ಜಯಸಿಂಹ ಬಿನ್ ಲೇಟ್ ಎಂ.ಬಿ. ಲಿಂಗಯ್ಯ ಮತ್ತು ಸಣ್ಣಮಾದಯ್ಯ ಬಿನ್ ಲೇಟ್ ಮೊಳ್ಳಯ್ಯ, ನಂಜನಗೂಡು ಎಂಬ ಆರೋಪಿಗಳನ್ನು ದಸ್ತಗಿರಿ ಮಾಡಿರುವುದಾಗಿ ಮೊಕದ್ದಮೆ ದಾಖಲಿಸಿ, ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕರಾದ ಜಯಸಿಂಹ ಬಿನ್ ಲೇಟ್ ಲಿಂಗಯ್ಯ, ನಂಜನಗೂಡು ಇವರು ದಿನಾಂಕ:25.01.2010ರಂದು ಅರ್ಜಿ ಸಲ್ಲಿಸಿ ಜಪ್ತುಪಡಿಸಲಾದ ಮಾರುತಿ-800 ವಾಹನವನ್ನು ತನ್ನ ಮಧ್ಯಕಾಲಿನ ಸುಪರ್ದಿಗೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ದಾವಣಗೆರೆ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:22.02.2010ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಪ್ರಾದೇಶಿಕ ಸಾರಿಗೆ ಅದಿಕಾರಿಗಳು ಬಿ ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಕಳುಹಿಸಿರುತ್ತಾರೆ. ಅದರಂತೆ ಶ್ರೀ ಬಿ.ಎಲ್. ಜಯಸಿಂಹ ಬಿನ್ ಎಂ.ಬಿ. ಲಿಂಗಯ್ಯ, ದೇವೀರಮ್ಮನಹಳ್ಳಿ, ನಂಜನಗೂಡು ತಾ: ಇವರ ಒಡೆತನದಲ್ಲಿರುವುದು ದೃಢಪಟ್ಟಿರುತ್ತದೆ. ಸದರಿಯವರಿಗೆ ಈ ಪ್ರಾಧಿಕಾರದಿಂದ ದಿನಾಂಕ:22.03.2010ರಂದು ವಾಹನ ಮತ್ತು ಸೇಂದಿಯನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ)ರ ಅಡಿಯಲ್ಲಿ ಕಾರಣ ಕೇಳುವ ನೋಟೀಸ್‌ನ್ನು ನೀಡಲಾಗಿದ್ದು, ದಿನಾಂಕ:08.04.2010ರಂದು ಸಂಬಂಧಪಟ್ಟವರಿಗೆ ಜಾರಿಗೊಳಿಸಿ, ನಂಜನಗೂಡು ವಲಯದ ಅಬಕಾರಿ ನಿರೀಕ್ಷಕರು ದಿನಾಂಕ:22.03.2010ರಂದು ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ದಿನಾಂಕ:07.01.2010ರಂದು ನಂಜನಗೂಡು ಟೌನ್‌ನ ನೀಲಕಂಠನಗರದ ಶ್ರೀ ವಿದ್ಯಾಗಣಪತಿ ಹಿರಿಯ ಪ್ರಾಥಮಿಕ ಶಾಲೆಯ ಮುಂಭಾಗದ ಮೈದಾನದಲ್ಲಿ ಕೆಎ-17-ಎಂ-1588 ನೋಂದಣಿ ಸಂಖ್ಯೆಯ ಮಾರುತಿ-800 ವಾಹನದಲ್ಲಿ ಅಕ್ರಮವಾಗಿ 75 ಲೀ. ಸೇಂದಿಯನ್ನು ಹೊಂದಿ. ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿಗಳಾದ ಬಿ.ಎಲ್. ಜಯಸಿಂಹ ಮತ್ತು ಸಣ್ಣಮಾದಯ್ಯ ಇವರುಗಳನ್ನು ದಸ್ತಗಿರಿಗೊಳಿಸಲಾಗಿರುತ್ತದೆ. ಕೃತ್ಯ ನಡೆದ ದಿನದಂದು ವಾಹನ ಮಾಲೀಕರಾದ ಬಿ.ಎಲ್. ಜಯಸಿಂಹ ಇವರು ಅಕ್ರಮವಾಗಿ ಸೇಂದಿಯನ್ನು ಸಾಗಾಣಿಕೆ ಮಾಡುವ ಸಂಬಂಧ ಅಬಕಾರಿ ಅಧಿಕಾರಿಗಳಿಗೆ ವಾಹನ ಮತ್ತು ಸೇಂದಿಯೊಂದಿಗೆ ಸಿಕ್ಕಿಬಿದ್ದಿರುವುದರಿಂದ ಈತನ ತಿಳುವಳಿಕೆಯಲ್ಲೇ ಈ ಕೃತ್ಯವು ನಡೆದಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಹಾಗೂ ಈ ಪ್ರಕರಣದಲ್ಲಿ ದಿನಾಂಕ:25.01.2010ರಂದು ವಾಹನ ಮಾಲೀಕರು ವಾಹನವನ್ನು ತನ್ನ ಸುಪರ್ದಿಗೆ ಬಿಡುಗಡೆ ಮಾಡಿಕೊಡಬೇಕೆಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಾಹನ ಮಾಲೀಕ ಮತ್ತು ಆರೋಪಿ ಒಬ್ಬನೇ ಆಗಿರುವುದರಿಂದ ತನ್ನ ಮೇಲೆ ಬರತಕ್ಕಂತಹ ಜವಾಬ್ದಾರಿಯನ್ನು ಇದುವರೆವಿಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲವಾದರಿಂದ ಸದರಿ ವಾಹನವನ್ನು ಅರ್ಜಿದಾರರ ಸುಪರ್ದಿಗೆ ಬಿಡುಗಡೆ ಮಾಡುವುದು ಸಮಂಜಸವಲ್ಲವೆಂದು

ತೀರ್ಮಾನಿಸಿ, ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/215/2009-10, ದಿನಾಂಕ:29ನೇ ಏಪ್ರಿಲ್, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ) (2)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು, ನಂಜನಗೂಡು ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:03/2009-10, ದಿನಾಂಕ:07.01.2010ರಂದು ವಶಪಡಿಸಿಕೊಂಡ ಕೆಎ-17-ಎಂ-1588 ನೋಂದಣಿ ಸಂಖ್ಯೆಯ ಮಾರುತಿ-800 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಏಪ್ರಿಲ್ ತಿಂಗಳ 29ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.750

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ-4, ಬೆಂಗಳೂರು

ಸಂಖ್ಯೆ: ಎಎಲ್‌ಸಿ-4/ಪಿಜಿಎ/ಎಸ್.ಆರ್-162/2007-08

ಅರ್ಜಿದಾರರು:	**ವಿರುದ್ಧ**	**ಪ್ರತಿವಾದಿಗಳು**
ಶ್ರೀಮತಿ ಮುನಿಲಕ್ಷ್ಮಮ್ಮ ಕೋಂ ಲೇಟ್ ಗೋಪಾಲಪ್ಪ, ಮನೆ ನಂ.1488/1, ವಿನಾಯಕ ರಸ್ತೆ, ಅರೇಬಿಕ್ ಕಾಲೇಜು ಅಂಚೆ, ವೆಂಕಟೇಶಪುರಂ, ಬೆಂಗಳೂರು-45.		ಮುಖ್ಯ ಸಂಚಾರ ವ್ಯವಸ್ಥಾಪಕರು, ಬಿ.ಎಂ.ಟಿ.ಸಿ. ಕೇಂದ್ರ ಕಛೇರಿಗಳು, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-27.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:23.08.2007ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿ ಅವರ ಪತಿ ಗೋಪಾಲಪ್ಪ, ಇವರು ಪ್ರತಿವಾದಿ ಸಂಸ್ಥೆಯಲ್ಲಿ 28 ವರ್ಷಗಳ ಸೇವೆ ಸಲ್ಲಿಸಿ ದಿನಾಂಕ:31.08.2004 ರಂದು ಸೇವೆಯಿಂದ ನಿವೃತ್ತರಾಗಿ ತದನಂತರ, ದಿನಾಂಕ:15.10.2007ರಂದು ಮರಣ ಹೊಂದಿರುತ್ತಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ಉಪಧನವನ್ನು ಮೃತರ ವಾರಸುದಾರರಾದ ತಮಗೆ ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:14.07.2010

ಎ.ಹೆಚ್. ಉಮೇಶ
ಸಹಾಯಕ ಕಾರ್ಮಿಕ ಆಯುಕ್ತರು ಮತ್ತು
ನಿಯಂತ್ರಣಾಧಿಕಾರಿಗಳು, ಉಪಧನ ಪಾವತಿ
ಕಾಯ್ದೆ, ವಿಭಾಗ-4, ಬೆಂಗಳೂರು.

ಪಿ.ಆರ್.1081

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ತಳ ಮಹಡಿ, ಸಿಟಿ ಸಿವಿಲ್ ನ್ಯಾಯಾಲಯ ಸಂಕೀರ್ಣ, ಬೆಂಗಳೂರು–09

ನಂ.ಎಡಿಎಂ:180:2008 ಮತ್ತು ಎಡಿಎಂ:53:2009, ದಿನಾಂಕ:12ನೇ ಜುಲೈ, 2010

ಅನಧಿಕೃತ ಗೈರು ಹಾಜರಿ ಬಗ್ಗೆ ಅಂತಿಮ ನೋಟೀಸು

ಗೆ

ಶ್ರೀ ಎನ್. ಕಿಶೋರ್ ಕುಮಾರ್, ಪ್ರಥಮ ದರ್ಜೆ ಸಹಾಯಕ,
ಸಿವಿಲ್ ಜಡ್ಜ್ ನ್ಯಾಯಾಲಯ, ದೊಡ್ಡಬಳ್ಳಾಪುರ.
ವಾಸಸ್ಥಳ: ನಂ.ಎಫ್.ಬಿ.27, ಹೆಚ್.ಎ.ಎಲ್. ಕಾಲೋನಿ,
ವಿಮಾನಪುರ ಪೋಸ್ಟ್, ಬೆಂಗಳೂರು–560 017.

ಶ್ರೀ ಎನ್. ಕಿಶೋರ್ ಕುಮಾರ್, ಆದ ನೀವು ಪ್ರಥಮ ದರ್ಜೆ ಸಹಾಯಕರಾಗಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 11.02.2008 ರಿಂದ 04.11.2008 (ಆ ಘಟಕದಿಂದ ಕರ್ತವ್ಯದಿಂದ ಬಿಡುಗಡೆಗೊಂಡ ದಿನಾಂಕ) ರವರೆಗೆ ಯಾವುದೇ ರೀತಿಯ ರಜೆ ಕೋರದೆ ಅನಧಿಕೃತವಾಗಿ ಗೈರು ಹಾಜರಾಗಿರುತ್ತೀರಿ ಎಂದು ಜಿಲ್ಲಾ ನ್ಯಾಯಾಧೀಶರು, ರಾಮನಗರ ಜಿಲ್ಲೆ, ದಿನಾಂಕ:29.1.2008ರ ವರದಿಯಲ್ಲಿ ತಿಳಿಸಿರುತ್ತಾರೆ. ಈ ಬಗ್ಗೆ ಜಿಲ್ಲಾ ನ್ಯಾಯಾಲಯ, ರಾಮನಗರ ರವರಿಂದ ನೀಡಲಾದ ದಿನಾಂಕ:05.07.2008ರ ಕಾರಣ ಕೇಳಿ ನೋಟೀಸ್ ನಿಮಗೆ 11.07.2008ರಂದು ಜಾರಿಯಾಗಿದ್ದರೂ ಸಹ ನೀವು ಯಾವುದೇ ಉತ್ತರ ನೀಡಿರುವುದಿಲ್ಲ.

ಈ ಬಗ್ಗೆ ಈ ಕಛೇರಿಯಿಂದ ನಿಮ್ಮ ಮನೆಯ (ಲಭ್ಯವಿರುವ) ವಿಳಾಸಕ್ಕೆ ಕಳುಹಿಸಲಾದ ದಿನಾಂಕ:15.07.2009ರ ಕಾರಣ ಕೇಳಿ ನೋಟೀಸ್ ಹಾಲಿ ನೀವು ಸದರಿ ವಿಳಾಸದಲ್ಲಿ ವಾಸವಿಲ್ಲವೆಂದು ವಾಪಾಸ್ ಬಂದಿರುತ್ತದೆ.

ಘನ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಎಲ್.ಸಿ.ಎ.11.255:2007 ದಿನಾಂಕ:20.09.2008ರ ಅನುಸಾರ ರಾಮನಗರ ಜಿಲ್ಲಾ ಘಟಕದಿಂದ ಈ ಜಿಲ್ಲಾ ಘಟಕಕ್ಕೆ ಪುನರ್ ಹಂಚಿಕೆಯಾದ ನೀವು, ಈ ಕಛೇರಿಯ ಆದೇಶ ಸಂಖ್ಯೆ:ಎಡಿಎಂ:171:2007(98) ದಿನಾಂಕ:04.10.2008ರ ಪ್ರಕಾರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದೊಡ್ಡಬಳ್ಳಾಪುರಕ್ಕೆ ನಿಯುಕ್ತರಾಗಿರುತ್ತೀರಿ.

ಸಿವಿಲ್ ನ್ಯಾಯಾಧೀಶರು, ದೊಡ್ಡಬಳ್ಳಾಪುರರವರು ದಿನಾಂಕ:07.01.2009ರ ಪತ್ರದ ಮೂಲಕ ವರದಿ ಮಾಡಿರುವ ಪ್ರಕಾರ, ನೀವು ದಿನಾಂಕ:07.11.2008ರಂದು ಸಿವಿಲ್ ನ್ಯಾಯಾಲಯ, ದೊಡ್ಡಬಳ್ಳಾಪುರದಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದು, ನಂತರ ದಿನಾಂಕ:20.11.2008 ರಿಂದ ಅನಧಿಕೃತವಾಗಿ ಗೈರು ಹಾಜರಾಗಿರುತ್ತೀರಿ. ಈ ಬಗ್ಗೆ ಸಿವಿಲ್ ನ್ಯಾಯಾಲಯ ದೊಡ್ಡಬಳ್ಳಾಪುರರವರು ನೋಂದಾಯಿತ ಅಂಚೆ ಮೂಲಕ ಕಳುಹಿಸಿದ ದಿನಾಂಕ:06.12.2008ರ ಮೆಮೋ (ತಿಳುವಳಿಕೆ ಪತ್ರ) ಜಾರಿಯಾಗಿದ್ದರೂ ಸಹ ನೀವು ಯಾವುದೇ ಉತ್ತರ ನೀಡಿರುವುದಿಲ್ಲ.

ಈ ಬಗ್ಗೆ ಈ ಕಛೇರಿಯಿಂದ ನಿಮ್ಮ ಮನೆಯ (ಲಭ್ಯವಿರುವ) ವಿಳಾಸಕ್ಕೆ ದಿನಾಂಕ:15.07.2009ರ ಕಾರಣ ಕೇಳಿ ನೋಟೀಸ್ ನೋಂದಾಯಿತ ಅಂಚೆ ಮೂಲಕ ಮತ್ತು ದಿನಾಂಕ:10.11.2009ರ ಕಾರಣ ಕೇಳಿ ನೋಟೀಸ್ ಕಛೇರಿಯ ಸಿಬ್ಬಂದಿಯ ಮೂಲಕ ಕಳುಹಿಸಿದ್ದು, ನೀವು ಸದರಿ ವಿಳಾಸದಲ್ಲಿ ವಾಸವಿಲ್ಲವೆಂದು ವಾಪಸ್ ಬಂದಿರುತ್ತದೆ.

ನೀವು ಈ ರೀತಿ ಗೈರು ಹಾಜರಾಗಿರುವುದು ಸೇವಾ ನಿಯಮಾವಳಿಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ನಿಮ್ಮ ಗೈರು ಹಾಜರಿಯಿಂದ ನ್ಯಾಯಾಲಯದ ಕಛೇರಿಯು ಮತ್ತು ಸಾರ್ವಜನಿಕ ಕಾರ್ಯಗಳಿಗೆ ಅಡಚಣೆಯಾಗಿರುತ್ತದೆ. ಪರಿವೀಕ್ಷಣಾ ಅವಧಿಯಲ್ಲಿರುವ ನೀವು ಈ ರೀತಿ ದೀರ್ಘ ಕಾಲ ಅನಧಿಕೃತವಾಗಿ ಗೈರು ಹಾಜರಾಗಿರುವುದು ಮತ್ತು ಈ ಬಗ್ಗೆ ಕಛೇರಿಗೆ ಯಾವುದೇ ಮುನ್ಸೂಚನೆ: ಮಾಹಿತಿ ನೀಡದಿರುವುದು ಸರ್ಕಾರಿ ಸೇವೆಯ ಬಗ್ಗೆ ನಿಮಗಿರುವ ನಿರಾಸಕ್ತಿ ಮತ್ತು ಅಸೀಮ ನಿರ್ಲಕ್ಷ್ಯವನ್ನು ತೋರಿಸುತ್ತದೆ.

ಆದ್ದರಿಂದ ಈ ಸೂಚನೆಯು ಪ್ರಕಟಗೊಂಡ 15 ದಿನಗಳ ಒಳಗಾಗಿ ನೀವು ಕರ್ತವ್ಯಕ್ಕೆ ಹಾಜರಾಗಿ, ನಿಮ್ಮ ಅನಧಿಕೃತ ಗೈರು ಹಾಜರಿಯ ಬಗ್ಗೆ ಸೂಕ್ತ ಸಮಜಾಯಿಷಿಯನ್ನು ನೀಡತಕ್ಕದ್ದು, ತಪ್ಪಿದಲ್ಲಿ ನಿಮ್ಮ ವಿರುದ್ಧ ಸೂಕ್ತ ಶಿಸ್ತಿನ ಕ್ರಮವನ್ನು ನಿಯಮಾನುಸಾರ ಏಕಪಕ್ಷೀಯವಾಗಿ ತೆಗೆದುಕೊಳ್ಳಲಾಗುವುದು.

ಜಿಲ್ಲಾ ನ್ಯಾಯಾಧೀಶರು ಹಾಗೂ ಶಿಸ್ತು
ಪ್ರಾಧಿಕಾರ ಇವರ ಆದೇಶದ ಮೇರೆಗೆ
ಎಸ್.ಜಿ. ಇನಾಮದಾರ್
ಮುಖ್ಯ ಆಡಳಿತಾಧಿಕಾರಿ,
ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಪಿ.ಆರ್.1093

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:318/2009-10, ದಿನಾಂಕ:29ನೇ ಏಪ್ರಿಲ್, 2010

ಉಪಸ್ಥಿತರು: ಡಾ|| ವೈ. ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	**ವಿರುದ್ದ**	**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಟಿ. ನರಸೀಪುರ ವಲಯ, ಟಿ.ನರಸೀಪುರ.		ಆರೋಪಿ ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:21.03.2010ರಂದು ಬೆಳಿಗ್ಗೆ 6.45 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಟಿ.ನರಸೀಪುರ ವಲಯ ಇವರು ಟಿ.ನರಸೀಪುರ ತಾಲ್ಲೂಕು, ನಂಜನಗೂಡು ರಸ್ತೆ, ಹೆಳವರಹುಂಡಿ ಮಾರ್ಗದ ರಸ್ತೆಯಲ್ಲಿ ಕೆಎ-02-/ವೈ-4889 ನೋಂದಣಿ ಸಂಖ್ಯೆಯ ಟಿ.ವಿ.ಎಸ್. ಎಕ್ಸೆಲ್ ಸೂಪರ್ ವಾಹನದಲ್ಲಿ ಅಕ್ರಮವಾಗಿ 95 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿಯನ್ನು ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿರುವುದಾಗಿ ಪ್ರಥಮ ಮಾಹಿತಿ ವರದಿ ಸಂಖ್ಯೆ:16/2009-10ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 23 ಹಾಗೂ 11ರ ರೀತ್ಯಾ ಅಪರಾಧವಾಗಿದ್ದು, ವಿಧಿ 32, 38(ಎ) ಮತ್ತು 43(ಎ)ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಬೆಂಗಳೂರು ಪಶ್ಚಿಮ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:24.04.2010ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:21.03.2010ರಂದು ಇವರು ಟಿ.ನರಸೀಪುರ ತಾಲ್ಲೂಕು, ನಂಜನಗೂಡು ರಸ್ತೆ, ಹೆಳವರಹುಂಡಿ ಮಾರ್ಗದ ರಸ್ತೆಯಲ್ಲಿ ಕೆಎ-02/ವೈ-4889 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ಸೂಪರ್ ವಾಹನದಲ್ಲಿ ಅಕ್ರಮವಾಗಿ 95 ಲೀ. ಕಲಬೆರಕೆ ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದು, ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 34ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಇದೂವರೆವಿಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯವು ವಾಹನ ಮಾಲೀಕರ ತಿಳುವಳಿಕೆಯಲ್ಲೇ ನಡೆದಿದೆ ಎಂಬುವುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣದಲ್ಲಿ ಆರೋಪಿಯು ಪರಾರಿಯಾಗಿದ್ದು ಇಂತಹ ಮೊಕದ್ದಮೆಗಳಲ್ಲಿ ಪ್ರಕರಣ ದಾಖಲಾದ ಒಂದು ತಿಂಗಳೊಳಗಾಗಿ ವಾಹನದ ಮಾಲೀಕತ್ವವನ್ನು ನಿರೂಪಿಸಲು ಈ ಪ್ರಾಧಿಕಾರದ ಮುಂದೆ ಹಾಜರಾಗದಿದ್ದಲ್ಲಿ ಅಂತಹ ಅಬಕಾರಿ ವಸ್ತುಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (1) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/318/2009-10, ದಿನಾಂಕ:29ನೇ ಏಪ್ರಿಲ್, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು, ಟಿ.ನರಸೀಪುರ ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:16/2009-10, ದಿನಾಂಕ:21.03.2010 ರಂದು ವಶಪಡಿಸಿಕೊಂಡ ಕೆಎ-02/ವೈ-4899 ನೋಂದಣಿ ಸಂಖ್ಯೆಯ ಟಿ.ವಿ.ಎಸ್. ಎಕ್ಸೆಲ್ ಸೂಪರ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಏಪ್ರಿಲ್ ತಿಂಗಳ 29ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ|| ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.751

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:133/2009-10, ದಿನಾಂಕ:29ನೇ ಏಪ್ರಿಲ್, 2010

ಉಪಸ್ಥಿತರು: ಡಾ|| ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಫಿರ್ಯಾದುದಾರರು:	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ವಲಯ, ಹೆಚ್.ಡಿ. ಕೋಟೆ.		ಆರೋಪಿ ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:11.11.2009ರಂದು ಸಂಜೆ 6.30 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ವಲಯ ಇವರು ಹೆಚ್.ಡಿ. ಕೋಟೆ ತಾಲ್ಲೂಕು, ಅಂತರಸಂತೆ ಹೋಬಳಿ, ಸೋಗೇಹಳ್ಳಿಗೆ ಹೊಸಮಾಳ ರಸ್ತೆಯಲ್ಲಿ ಚಾರ್ಸಿಸ್ ಸಂ.A 407 F 930734 ಟಿ.ವಿ.ಎಸ್.50 ವಾಹನದಲ್ಲಿ ಅಕ್ರಮವಾಗಿ 110 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿಯನ್ನು ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿರುವುದಾಗಿ ಪ್ರಥಮ ಮಾಹಿತಿ ವರದಿ ಸಂಖ್ಯೆ:11/2009-10ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 14ರ ರೀತ್ಯಾ ಅಪರಾಧವಾಗಿದ್ದು, ವಿಧಿ 32, 38(ಎ) ಮತ್ತು 43(ಎ)ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಸೂಚಿಸಿ, ಹೆಚ್.ಡಿ. ಕೋಟೆ ವಲಯ ಅಬಕಾರಿ ನಿರೀಕ್ಷಕರಿಗೆ ದಿನಾಂಕ:17.12.2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿದ್ದು, ಇದೂವರೆವಿಗೂ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:11.11.2009ರಂದು ಇವರು ಹೆಚ್.ಡಿ. ಕೋಟೆ ತಾ: ಅಂತರಸಂತೆ ಹೋಬಳಿ, ಸೋಗೇಹಳ್ಳಿಗೆ ಹೊಸಮಾಳ ರಸ್ತೆಯಲ್ಲಿ ಚಾರ್ಸಿಸ್ ಸಂ. A 407 F 930734 ಟಿ.ವಿ.ಎಸ್.50 ವಾಹನದಲ್ಲಿ ಅಕ್ರಮವಾಗಿ 110 ಲೀ. ಸೇಂದಿಯನ್ನು ಹೊಂದಿ, ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 34ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಇದೂವರೆವಿಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯವು ವಾಹನ ಮಾಲೀಕನ ತಿಳುವಳಿಕೆಯಲ್ಲೇ ನಡೆದಿದೆ ಎಂಬುವುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣದಲ್ಲಿ ಆರೋಪಿಯು ಪರಾರಿಯಾಗಿದ್ದು ಇಂತಹ ಮೊಕದ್ದಮೆಗಳಲ್ಲಿ ಪ್ರಕರಣ ದಾಖಲಾದ ಒಂದು ತಿಂಗಳೊಳಗಾಗಿ ವಾಹನದ ಮಾಲೀಕತ್ವವನ್ನು ನಿರೂಪಿಸಲು ಈ ಪ್ರಾಧಿಕಾರದ ಮುಂದೆ ಹಾಜರಾಗದಿದ್ದಲ್ಲಿ ಅಂತಹ ಅಬಕಾರಿ ವಸ್ತುಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/133/2009-10, ದಿನಾಂಕ:29ನೇ ಏಪ್ರಿಲ್, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:11/2009-10, ದಿನಾಂಕ:11.11.2009 ರಂದು ವಶಪಡಿಸಿಕೊಂಡ ಚಾರ್ಸಿಸ್ ಸಂ.A 407 F 930734 ಟಿ.ವಿ.ಎಸ್.50 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಏಪ್ರಿಲ್ ತಿಂಗಳ 29ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.752

ಮಾನ್ಯ 8ನೇ ಎ.ಸಿ.ಎಂ.ಎಂ. ನ್ಯಾಯಾಲಯದ ನ್ಯಾಯಾಧೀಶರವರ ಸನ್ನಿದಾನಕ್ಕೆ ಬೆಂಗಳೂರು ನಗರ

ದಿನಾಂಕ:11ನೇ ಜೂನ್, 2010

ವಿಷಯ: ವಾರಸುದಾರರು ಇಲ್ಲದ ವಾಹನಗಳ ವಿವರವನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಅನುಮತಿ ನೀಡಲು ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯಾಲಯದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಸಂಜಯನಗರ ಪೊಲೀಸ್ ಠಾಣೆಯ ಈ ಕೆಳಕಂಡ ಮೊಕದ್ದಮೆ ಸಂಖ್ಯೆಗಳಲ್ಲಿ ಆರೋಪಿಗಳನ್ನು ದಸ್ತಗಿರಿ ಮಾಡಿ ದ್ವಿಚಕ್ರ ವಾಹನಗಳನ್ನು ಅಮಾನತ್ತುಪಡಿಸಿರುತ್ತೆ. ಸದರಿ ವಾಹನಗಳ ಪತ್ತೆಗಾಗಿ ಎಸ್.ಸಿ.ಆರ್.ಬಿ. ಹಾಗೂ ಬೆಂಗಳೂರು ನಗರದ ಎಲ್ಲಾ ಪೊಲೀಸ್ ಠಾಣೆಗಳಿಗೆ ಈ ಮೇಲ್ ಮುಖೇನ ಸಂದೇಶ ರವಾನಿಸಿದ್ದು ಹಾಗೂ ಸುತ್ತೋಲೆ ಹೊರಡಿಸಿದ್ದರು ಸಹ ವಾರಸುದಾರರು ಪತ್ತೆಯಾಗಿರುವುದಿಲ್ಲ. ಆದುದರಿಂದ ಈ ವಾಹನಗಳ ಮಾಲೀಕರ ಪತ್ತೆಗಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆ ಹೊರಡಿಸಲು ಅನುಮತಿ ನೀಡಲು ಕೋರಿದೆ.

ಗೆಜೆಟ್‌ನಲ್ಲಿ ಪ್ರಕಟಿಸಲು ಅನುಮತಿ ನೀಡಬೇಕಾಗಿರುವ ವಾಹನಗಳ ವಿವರ ಈ ಕೆಳಕಂಡಂತಿರುತ್ತದೆ.

ವಾಹನದ ವಿವರ

ಕ್ರ. ಸಂ.	ಮೊ.ಸಂ. & ಕಲಂ	ಪಿಎಫ್ ನಂ.	ವಾಹನದ ಹೆಸರು ರಿಜಿಸ್ಟ್ರೇಷನ್ ನಂ.	ಇಂಜಿನ್ & ಚಾಸಿಸ್ ನಂ.
1.	145/09 u/s 379 IPC	67/09	TVS XL Super No. Nil	F97888 MD621AD1971

ಕ್ರ. ಸಂ.	ಮೊ.ಸಂ. & ಕಲಂ	ಪಿಎಫ್ ನಂ.	ವಾಹನದ ಹೆಸರು ರಿಜಿಸ್ಟ್ರೇಷನ್ ನಂ.	ಇಂಜಿನ್ & ಚಾಸಿಸ್ ನಂ.
2.	232/09 u/s 379 IPC	89/09	Bajaj Pulsar KA-03-EG	OHUBMC54366, OHU6BMC53327
3.	232/09 u/s 379 IPC	90/09	Hero Honda CD 100 CKD8271	C1OF105393, CIOE105767
4.	232/09 u/s 379 IPC	90/09	Bajaj Pulsar KA-52-E-5571	MD2DH23NCM71670, DHG8NMO9220
5.	97/09 u/s 379 IPC	62/09	Bajaj Pulsar KA-41-E-1041	OHOME6037 DHJBME59198
6.	97/09 u/s 379 IPC	62/09	Yamaha Motor Cycle CKN640	IL 1070667, IL 1070667
7.	97/09 u/s 379 IPC	62/09	Bajaj Pulsar KL-07-Y-1288	DHUBKA7178, DHEBKA71196
8.	147/10 u/s 379 IPC	29/10	Honda Dio KA-01Y-293	JF11E0067909
9.	147/10 u/s 379 IPC	29/10	TVS Max-100 KA-04-EE-6261	C9302M534232 09382F478328
10.	147/10 u/s 379 IPC	29/10	Suzuki Samurai No. Nil	7112M153183 7112FO97836
11.	147/10 u/s 379 IPC	30/10	Bajaj Pulsar KA-03-EV-2328	DHGBMD89987, DHVBMD91282
12.	147/10 u/s 379 IPC	30/10	Suzuki Max No. Nil	3607M081958 3607FO75357
13.	168/10 u/s 379 IPC	34/10	Kinetic Honda KA-03-EE-3911	242D59
14.	168/10 u/s 379 IPC	34/10	Honda Activa KA-02-ES-4161	JFD8E111445 ME4JF87G58111451

Sub-Inspector of Police (Crime),
Sanjaynagar Police Station,
Bangalore-560 094.

PR-1103

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ,
ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:123/2009-10, ದಿನಾಂಕ:29ನೇ ಏಪ್ರಿಲ್, 2010

ಉಪಸ್ಥಿತರು: ಡಾ॥ ವೈ. ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ವಲಯ, ಹೆಚ್.ಡಿ. ಕೋಟೆ.		ಆರೋಪಿ ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:04.11.2009ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ವಲಯ ಇವರು ಹೆಚ್.ಡಿ. ಕೋಟೆ-ನಾಗನಹಳ್ಳಿ ರಸ್ತೆಯ ಪೆಟ್ಟಿಗೆ ಅಂಗಡಿಯ ಸಮೀಪದ ತಿರುವಿನಲ್ಲಿ ಟಿಎನ್-47/ಎ-4014 ನೋಂದಣಿ ಸಂಖ್ಯೆಯ ಟಿ.ವಿ.ಎಸ್.-50 ಎಕ್ಸೆಲ್ ವಾಹನದಲ್ಲಿ ಅಕ್ರಮವಾಗಿ 40 ಲೀ. ಸೇಂದಿಯನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಆರೋಪಿಯನ್ನು ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿರುವುದಾಗಿ ಪ್ರಥಮ ಮಾಹಿತಿ ವರದಿ ಸಂಖ್ಯೆ:10/2009-10ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 14ರ ರೀತ್ಯಾ ಅಪರಾಧವಾಗಿದ್ದು, ವಿಧಿ 32, 37, 38(ಎ) ಮತ್ತು 43(ಎ)ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಪ್ರಾದೇಶಿಕ ಆಯುಕ್ತರು, ಚೆನ್ನೈ, ತಮಿಳುನಾಡು ಅಧಿಕಾರಿಗಳಿಗೆ ದಿನಾಂಕ:17.12.2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಇದೂವರೆವಿಗೂ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:04.11.2009ರಂದು ಇವರು ಹೆಚ್.ಡಿ. ಕೋಟೆ-ನಾಗನಹಳ್ಳಿ ರಸ್ತೆಯ ಪೆಟ್ಟಿಗೆ ಅಂಗಡಿಯ ಸಮೀಪದ ತಿರುವಿನಲ್ಲಿ ಟಿಎನ್-47/ಎ-4014 ನೋಂದಣಿ ಸಂಖ್ಯೆಯ ಟಿವಿಎಸ್-50 ಎಕ್ಸೆಲ್ ವಾಹನದಲ್ಲಿ ಅಕ್ರಮವಾಗಿ 40 ಲೀ. ಸೇಂದಿಯನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದು, ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 34ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಇದೂವರೆವಿಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯವು ವಾಹನ ಮಾಲೀಕನ ತಿಳುವಳಿಕೆಯಲ್ಲೇ ನಡೆದಿದೆ ಎಂಬುವುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣದಲ್ಲಿ ಆರೋಪಿಯು ಪರಾರಿಯಾಗಿದ್ದು ಇಂತಹ ಮೊಕದ್ದಮೆಗಳಲ್ಲಿ ಪ್ರಕರಣ ದಾಖಲಾದ ಒಂದು ತಿಂಗಳೊಳಗಾಗಿ ವಾಹನದ ಮಾಲೀಕತ್ವವನ್ನು ನಿರೂಪಿಸಲು ಈ ಪ್ರಾಧಿಕಾರದ ಮುಂದೆ ಹಾಜರಾಗದಿದ್ದಲ್ಲಿ ಅಂತಹ ಅಬಕಾರಿ ವಸ್ತುಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)ರ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (5) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/123/2009-10, ದಿನಾಂಕ:29ನೇ ಏಪ್ರಿಲ್, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಸಿ)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:10/2009-10, ದಿನಾಂಕ:04.11.2009 ರಂದು ವಶಪಡಿಸಿಕೊಂಡ ಟಿಎನ್-47/ಎ-4014 ನೋಂದಣಿ ಸಂಖ್ಯೆಯ ಟಿ.ವಿ.ಎಸ್.50 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಏಪ್ರಿಲ್ ತಿಂಗಳ 29ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.753

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:317/2007-08, ದಿನಾಂಕ:18ನೇ ಮಾರ್ಚ್, 2010

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಅಬಕಾರಿ ನಿರೀಕ್ಷಕರು, ಮೈಸೂರು ವಲಯ ಸಂ-1, ಮೈಸೂರು.		ಆರೋಪಿ ಪರಾರಿ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:23.04.2008ರಂದು ಸಂಜೆ 6.00 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ಮೈಸೂರು ವಲಯ ಸಂ-1 ಇವರು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಆಲನಹಳ್ಳಿ ಗ್ರಾಮದಿಂದ ನಾಡನಹಳ್ಳಿ ಗ್ರಾಮಕ್ಕೆ ಹೋಗುವ 15 ಅಡಿ ಅಗಲದ ಡಾಂಬಾರು ರಸ್ತೆಯಲ್ಲಿ ಕೆಎ-09/ಇಎಚ್-7514 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ಸೂಪರ್ ವಾಹನದಲ್ಲಿ ಅಕ್ರಮವಾಗಿ 8.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿಯನ್ನು ಪತ್ತೆಹಚ್ಚಿ ದಸ್ತಗಿರಿ ಮಾಡಬೇಕಾಗಿರುವುದಾಗಿ ಪ್ರಥಮ ಮಾಹಿತಿ ವರದಿ ಸಂಖ್ಯೆ:04/2007-08ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 14ರ ರೀತ್ಯಾ ಅಪರಾಧವಾಗಿದ್ದು, ವಿಧಿ 32, 38(ಎ) ಮತ್ತು 43(ಎ)ರ ಪ್ರಕಾರ ಶಿಕ್ಷಾರ್ಹವಾದ್ದರಿಂದ ಮೊಕದ್ದಮೆ ದಾಖಲಿಸಿ, ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಶಪಡಿಸಿಕೊಂಡ ವಾಹನದ ಮಾಲೀಕರಾದ ಶ್ರೀ ಸಿದ್ದಪ್ಪ ಬಿನ್ ಡೊಳ್ಳಯ್ಯ, ಸಂ.871, ಮಲ್ಲಹಳ್ಳಿ ಗ್ರಾಮ, ಹಾರೋಹಳ್ಳಿ, ವರುಣಾ ಹೋಬಳಿ, ಮೈಸೂರು ತಾಲ್ಲೂಕು ಇವರು ತಮ್ಮ ವಕೀಲರ ಮುಖೇನ ವಾಹನ ದಾಖಲಾತಿ ಮತ್ತು ವಕಾಲತ್ತಿನೊಂದಿಗೆ ದಿನಾಂಕ:07.07.2008ರಂದು ಅರ್ಜಿಯನ್ನು ಸಲ್ಲಿಸಿ ವಾಹನಕ್ಕೆ ಅಗತ್ಯ ಭದ್ರತೆಯನ್ನು ಪಡೆದು ತನ್ನ ಸುಪರ್ದಿಗೆ ಬಿಡುಗಡೆ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ಮಾದರಿ ತೆಗೆಯಲಾದ ಮಾದಕ ದ್ರವ್ಯಗಳನ್ನು ಬೆಂಗಳೂರಿನ ಕೇಂದ್ರ ರಾಸಾಯನಿಕ ಪ್ರಯೋಗಾಲಯಕ್ಕೆ ಒಳಪಡಿಸಿ ಸದರಿ ಮಾದಕ ದ್ರವ್ಯಗಳು ಮಾನವ ಸೇವನೆಗೆ ಯೋಗ್ಯವೆಂದು ಹಾಗೂ ಇಥೇಲ್ ಆಲ್ಕೋಹಾಲ್ ಕಂಡು ಬಂದಿರುವುದಾಗಿ ರಾಸಾಯನಿಕ ತಜ್ಞರು ತಮ್ಮ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಮೈಸೂರು ಜಿಲ್ಲೆಯ ಸಾರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:21.07.2008ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಜಮೂನರೆಂಗೂ

ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಅರ್ಜಿದಾರರು ಹಾಜರುಪಡಿಸಿರುವ ಆರ್.ಸಿ. ಪುಸ್ತಕದ ನಕಲಿ ಪ್ರತಿಯನ್ವಯ ವಾಹನವು ಶ್ರೀ ಸಿದ್ದಪ್ಪ ಬಿನ್ ಡೊಳ್ಳಯ್ಯ, ಸಂ.871, ಮೆಲ್ಲಹಳ್ಳಿ ಗ್ರಾಮ, ಹಾರೋಹಳ್ಳಿ, ವರುಣಾ ಹೋಬಳಿ, ಮೈಸೂರು ತಾಲ್ಲೂಕು ಇವರ ಒಡೆತನದಲ್ಲಿರುತ್ತದೆ. ಸದರಿಯವರಿಗೆ ಈ ಪ್ರಾಧಿಕಾರದಿಂದ ದಿನಾಂಕ:22.07.2008ರಂದು ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ)ರ ಅಡಿಯಲ್ಲಿ ಕಾರಣ ಕೇಳುವ ನೋಟೀಸ್ ಜಾರಿಯಾಗಿ ದಿನಾಂಕ:22.11.2008ರಂದು ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ಸ್ವೀಕೃತವಾಗಿರುತ್ತದೆ. ಈ ಪ್ರಾಧಿಕಾರದಿಂದ ನೀಡಲಾದ ನೋಟೀಸಿಗೆ ಪ್ರತಿವಾದಿಗಳು ಪ್ರತಿಕ್ರಿಯಿಸಿ ಲಿಖಿತ ಮೂಲಕ ಪ್ರತ್ಯುತ್ತರವನ್ನು ಸಲ್ಲಿಸಲಾಗಿದ್ದು, ತಾನು ರೈತನಾಗಿದ್ದು ಸುಳ್ಳು ಆರೋಪ ಹೊರಿಸಿ ಸುಳ್ಳು ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಅಲ್ಲದೆ ತನಗೆ ತೊಂದರೆ ನೀಡುವ ಉದ್ದೇಶದಿಂದಲೇ ಮೊಕದ್ದಮೆಯನ್ನು ದಾಖಲಿಸಲಾಗಿದ್ದು ಈ ಕಾರಣ ಕೇಳುವ ನೋಟಿಸಿನಲ್ಲಿ ಯಾವುದೇ ಹುರುಳಿಲ್ಲದಿರುವುದರಿಂದ ಹೂಡಿರುವ ದಾವೆಯನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:24.04.2008ರಂದು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಆಲನಹಳ್ಳಿ ಗ್ರಾಮದಿಂದ ನಾಡನಹಳ್ಳಿ ಗ್ರಾಮಕ್ಕೆ ಹೋಗುವ 15 ಅಡಿ ಅಗಲದ ಡಾಂಬಾರು ರಸ್ತೆಯಲ್ಲಿ ಕೆಎ-09/ಇಎಚ್-7514 ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ಸೂಪರ್ ವಾಹನದಲ್ಲಿ ಅಕ್ರಮವಾಗಿ 8.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿ ಪರಾರಿಯಾಗಿರುತ್ತಾನೆ. ಪ್ರಕರಣ ದಾಖಲಾದ 3 ತಿಂಗಳ ತರುವಾಯ ವಕೀಲರ ಮೂಲಕ ಮನವಿಯನ್ನು ಸಲ್ಲಿಸಿ ವಾಹನವನ್ನು ತನ್ನ ವಶಕ್ಕೆ ಬಿಡುಗಡೆ ಮಾಡಿಕೊಡಬೇಕೆಂದು ಕೋರಲಾಗಿದ್ದು, ಈ ಪ್ರಕರಣದಲ್ಲಿ ನಾನು ಯಾವುದೇ ರೀತಿಯ ಮಾದಕ ದ್ರವ್ಯಗಳನ್ನು ವಾಹನದಲ್ಲಿ ಹೊಂದಿ ಸಾಗಾಣಿಕೆ ಮಾಡಿರುವುದಿಲ್ಲ ಎಂಬುದರ ಬಗ್ಗೆ ಯಾವುದೇ ಸಾಕ್ಷ್ಯ ಪುರಾವೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ತನ್ನ ಇರತಕ್ಕಂತಹ ಜವಾಬ್ದಾರಿಯನ್ನು ಈ ಪ್ರಾಧಿಕಾರದ ಮುಂದೆ ನಿರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (22) ತಿಂಗಳಿಗೂ ಹೆಚ್ಚು ಕಾಲ ಕಳೆದಿರುತ್ತದೆ. ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೆ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೆ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೆ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/317/2009-10, ದಿನಾಂಕ:18ನೇ ಮಾರ್ಚ್, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ) (2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು, ಮೈಸೂರು ವಲಯ-1 ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:04/2007-08, ದಿನಾಂಕ:24.04.2008ರಂದು ವಶಪಡಿಸಿಕೊಂಡ ಕೆಎ-09/ಇಎಚ್-7514, ನೋಂದಣಿ ಸಂಖ್ಯೆಯ ಟಿವಿಎಸ್ ಎಕ್ಸೆಲ್ ಸೂಪರ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಮಾರ್ಚ್ ತಿಂಗಳ 18ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ|| ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.923

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:140/2009-10, ದಿನಾಂಕ:13ನೇ ಮೇ, 2010

ರು: ಡಾ॥ ವೈ. ಮಂಜುನಾಥ್,

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು: ವಿರುದ್ಧ ಪ್ರತಿವಾದಿ/ ಆರೋಪಿ

ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ಮತ್ತು ಶೇಖರ ಜೆ. ಬಿನ್ ಜವರಪ್ಪ

ದಳ, ವಿಶೇಷ ಪೊಲೀಸ್ ಠಾಣೆ, ಮೈಸೂರು.

ದ ಮುಖ್ಯಾಂಶಗಳು:

ದಿನಾಂಕ:01.03.2010ರಂದು ರಾತ್ರಿ 6.30 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧ ದಳ, ವಿಶೇಷ ಪೊಲೀಸ್ ಠಾಣೆ, ಮೈಸೂರು ನಗರ ಇವರು ಮೈಸೂರು ನಗರ, ಎಸ್.ಡಿ. ಜಯರಾಂ ಣೆ, ಆಲನಹಳ್ಳಿ ಗೃಹ ನಿರ್ಮಾಣ ಸಂಘ, ಸಾತಗಳ್ಳಿ ಕಡೆಗೆ ಹೋಗುವ ರಿಂಗ್ ರಸ್ತೆಯಲ್ಲಿ ಕೆಎ-05/ಇಕ್ಯೂ-9953 ರಣಿ ಸಂಖ್ಯೆಯ ಕೈನೆಟಿಕ್ ಹೊಂಡಾ ವಾಹನದಲ್ಲಿ ಅಕ್ರಮವಾಗಿ 8.640 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿಯಾದ ಜೆ.ಶೇಖರ ಬಿನ್ ಜವರಪ್ಪ ರವನನ್ನು ದಸ್ತಗಿರಿ ಮಾಡಿರುವುದಾಗಿ ಮೊಕದ್ದಮೆ ಸಂಖ್ಯೆ:06/2010ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 4ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ರಿಸಲು ದಿನಾಂಕ:05.03.2010ರಂದು ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅಂತೆಯೇ :08.03.2010ರಂದು ಮೈಸೂರು ವಲಯ-1ರ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿರುತ್ತದೆ.

ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಬೆಂಗಳೂರು ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:10.03.2010ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ವರು ಬಿ ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಅದರಂತೆ ವಾಹನವು ಶ್ರೀ ಆನಂದ್ ಸಂತಾನಂ . ಸಂತಾನಂ, ಫ್ಲಾಟ್ ನಂ.201, 3ನೇ ಮಹಡಿ, 5ನೇ ಫೇಸ್, ರೋಸ್ ಪ್ಲಾಟಿನಂ ಎನ್‌ಕ್ಲೇವ್, 16ನೇ ಕ್ರಾಸ್, ಗರ, ಬೆಂಗಳೂರು ಇವರ ಒಡೆತನದಲ್ಲಿರುವುದು ದೃಢಪಟ್ಟಿರುತ್ತದೆ. ಅದರಂತೆ ಸದರಿ ವಾಹನ ಮಾಲೀಕರಿಗೆ ಕಲಂ ರಡಿಯಲ್ಲಿ ಕಾರಣ ಕೇಳುವ ನೋಟೀಸ್‌ನ್ನು ನೀಡಲಾಗಿದ್ದು, ನೋಟೀಸ್ ಜಾರಿಯಾಗದೇ ಅಂಚೆ ಇಲಾಖೆಯವರು ಈ ರಕ್ಕೆ ಹಿಂತಿರುಗಿಸಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:01.03.2010ರಂದು ಮೈಸೂರು ನಗರ, ಎಸ್.ಡಿ. ಂ ಬಡಾವಣೆ, ಆಲನಹಳ್ಳಿ ಗೃಹ ನಿರ್ಮಾಣ ಸಂಘ, ಸಾತಗಳ್ಳಿ ಕಡೆಗೆ ಹೋಗುವ ರಿಂಗ್ ರಸ್ತೆಯಲ್ಲಿ ಕೆಎ-05- -9953 ನೋಂದಣಿ ಸಂಖ್ಯೆಯ ಕೈನೆಟಿಕ್ ಹೊಂಡಾ ವಾಹನದಲ್ಲಿ ಅಕ್ರಮವಾಗಿ 8.640 ಲೀ. ಮದ್ಯವನ್ನು ಹೊಂದಿ, ಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಪ್ರಕರಣದಲ್ಲಿ ಶೇಖರ್ ಜೆ. ಬಿನ್ ಜವರಪ್ಪ ಎಂಬ ಆರೋಪಿಯನ್ನು ಮಾಡಲಾಗಿರುತ್ತದೆ. ವಾಹನ ಮಾಲೀಕರು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಹಾಗೂ ಈ ಕೃತ್ಯವು ತನ್ನ ಕೆಯಲ್ಲಿ ನಡೆದಿಲ್ಲ ಎಂಬುದರ ಬಗ್ಗೆ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಯಾವುದೇ ಸಾಕ್ಷ್ಯಾಧಾರಗಳನ್ನು ತು ಪಡಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (2) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಕರುಗಳಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ

ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/140/2008-09, ದಿನಾಂಕ:13ನೇ ಮೇ, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ) (2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ಮತ್ತು ನಿಷೇಧ ದಳ, ವಿಶೇಷ ಪೊಲೀಸ್ ಠಾಣೆ, ಮೈಸೂರು ನಗರ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:06/2010, ದಿನಾಂಕ:01.03.2010ರಂದು ವಶಪಡಿಸಿಕೊಂಡ ಕೆಎ-09/ಇಕ್ಯೂ-9953 ನೋಂದಣಿ ಸಂಖ್ಯೆಯ ಕೈನೆಟಿಕ್ ಹೊಂಡಾ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಮೇ ತಿಂಗಳ 13ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಪಿ.ಆರ್.957 ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:145/2009-10, ದಿನಾಂಕ:25ನೇ ಮಾರ್ಚ್, 2010

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ಕೆ.ಆರ್.ನಗರ ವಲಯ, ಕೆ.ಆರ್.ನಗರ.		ನಿಂಗರಾಜು ಬಿನ್ ಜವರೇಗೌಡ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:20.11.2009ರಂದು ಸಂಜೆ 6.15 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ಕೆ.ಆರ್.ನಗರ ವಲಯ ಇವರು ಕೆ.ಆರ್.ನಗರ ತಾ: ಚುಂಚನಕಟ್ಟೆ ಹೋಬಳಿ, ಅಬ್ಬೂರು ಗ್ರಾಮದ ಕಟ್ಟೆಪುರ ಏರಿಯ ಮೇಲೆ ಕೆಎ-09/ಎಲ್-5008 ನೋಂದಣಿ ಸಂಖ್ಯೆಯ ಹೀರೊ ಹೊಂಡಾ ಸಿಡಿ-100 ವಾಹನದಲ್ಲಿ ಅಕ್ರಮವಾಗಿ8.640 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಗೊಳಿಸಿ, ಪ್ರಥಮ ಮಾಹಿತಿ ವರದಿ ಸಂಖ್ಯೆ:07/2009-10ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14ರ ರೀತ್ಯಾ ಅಪರಾಧವಾಗಿದ್ದು, 32, 38(ಎ), 43 ಮತ್ತು 43(ಎ)ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ನಿಂಗರಾಜು ಬಿನ್ ಜವರೇಗೌಡ ಎಂಬ ಆರೋಪಿಯನ್ನು ದಸ್ತಗಿರಿ ಮಾಡಿರುವುದಾಗಿ ಮೊಕದ್ದಮೆ ದಾಖಲಿಸಿ, ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಮೈಸೂರು ಜಿಲ್ಲೆಯ ಪೂರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:17.12.2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಕೆ.ಆರ್.ನಗರ ವಲಯದ ಅಬಕಾರಿ ನಿರೀಕ್ಷಕರು ವಾಹನ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಸಂಬಂಧಪಟ್ಟ ಪ್ರಾದೇಶಿಕ ಅಧಿಕಾರಿಗಳಿಂದ ಪಡೆದು ದಿನಾಂಕ:22.02.2010ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಅದರಂತೆ ವಾಹನವು ಜವರೇಗೌಡ ಬಿನ್ ಲಕ್ಕೆಗೌಡ, ಕೊರಲಹೊಸಹಳ್ಳಿ, ಆಲನಹಳ್ಳಿ ಅಂಚೆ, ಪಿರಿಯಾಪಟ್ಟಣ ತಾ: ಇವರ ಒಡೆತನದಲ್ಲಿರುವುದು ದೃಢಪಟ್ಟಿರುತ್ತದೆ. ಸದರಿಯವರಿಗೆ ಈ ಪ್ರಾಧಿಕಾರದಿಂದ ದಿನಾಂಕ:26.02.2010ರಂದು ವಾಹನ ಮತ್ತು ಮದ್ಯವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ) ರ ಅಡಿಯಲ್ಲಿ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲು ಸದರಿ ಗ್ರಾಮಕ್ಕೆ ತೆರಳಿದಾಗ ಜವರೇಗೌಡ ಬಿನ್ ಲಕ್ಕೇಗೌಡ ಎಂಬುವವರು ದಿನಾಂಕ:08.04.2009ರಂದು ಮರಣ ಹೊಂದಿದ್ದು,

(ಮರಣ ದೃಢೀಕರಣ ಪತ್ರವನ್ನು ಲಗತ್ತಿಸಿರುತ್ತಾರೆ.) ಅವರ ಮಗನಾದ ಜೆ. ರಮೇಶ್ ಎಂಬುವವರಿಗೆ ಜಾರಿಗೊಳಿಸಿ ದಿನಾಂಕ:15.03.2010ರಂದು ಕೆ.ಆರ್.ನಗರ ವಲಯದ ಅಬಕಾರಿ ನಿರೀಕ್ಷಕರು ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:20.11.2009ರಂದು ಕೆ.ಆರ್.ನಗರ ತಾ: ಚುಂಚನಕಟ್ಟೆ ಹೋಬಳಿ, ಅಬ್ಬೂರು ಗ್ರಾಮದ ಕಟ್ಟೆಪುರ ಏರಿಯ ಮೇಲೆ ಕೆಎ-09/ಎಲ್-5008 ನೋಂದಣಿ ಸಂಖ್ಯೆಯ ಹೀರೊ ಹೊಂಡಾ ಸಿಡಿ-100 ವಾಹನದಲ್ಲಿ ಅಕ್ರಮವಾಗಿ 8.640 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿ ನಿಂಗರಾಜು ಬಿನ್ ಜವರೇಗೌಡ ಇವರನ್ನು ದಸ್ತಗಿರಿಗೊಳಿಸಲಾಗಿರುತ್ತದೆ. ವಾಹನಕ್ಕೆ ಸಂಬಂಧಪಟ್ಟ ಆರೋಪಿಗಳಾಗಲೀ/ ವಾಹನ ಮಾಲೀಕರು ಮೃತಪಟ್ಟಿದ್ದು, ಅವರ ಮಗನಾದ ರಮೇಶ್ ಎಂಬುವವರು ತಮ್ಮ ನಿಲುವು ಏನೆಂಬುದನ್ನು ಮತ್ತು ಮಾಲೀಕರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಇದುವರೆವಿಗೂ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (3) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರುಗಳಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/145/2009-10, ದಿನಾಂಕ:25ನೇ ಮಾರ್ಚ್, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ) (2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು, ಕೆ.ಆರ್.ನಗರ ವಲಯ ಇವರು ಹೂಡಲಾದ ಪ್ರ.ಮಾ. ವರದಿ ಸಂಖ್ಯೆ:07/2009-10, ದಿನಾಂಕ:13.01.2010ರಂದು ವಶಪಡಿಸಿಕೊಂಡ ಕೆಎ-09/ಎಲ್-5008 ನೋಂದಣಿ ಸಂಖ್ಯೆಯ ಹೀರೋ ಹೊಂಡಾ ಸಿಡಿ-100 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಮಾರ್ಚ್ ತಿಂಗಳ 25ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.958

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:169/2008-09, ದಿನಾಂಕ:13ನೇ ಮೇ, 2010

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	ವಿರುದ್ದ	ಪ್ರತಿವಾದಿ/ ಆರೋಪಿ
ಆರಕ್ಷಕ ಉಪ ನಿರೀಕ್ಷಕರು, ಹೆಚ್.ಡಿ.ಕೋಟೆ ಪೊಲೀಸ್ ಠಾಣೆ, ಹೆಚ್.ಡಿ. ಕೋಟೆ.		ಚಂದ್ರ ಬಿನ್ ಲೇ: ಕುಮಾರ್ ರಫೀಕ್ ಬಿನ್ ಅಬ್ದುಲ್ ಜಬ್ಬರ್

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:30.03.2009ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಲಾಟರಿ ಮತ್ತು ನಿಷೇಧ ದಳ, ಮೈಸೂರು ಜಿಲ್ಲೆ, ಇವರು ಹೆಚ್.ಡಿ. ಕೋಟೆ ತಾಲ್ಲೂಕಿನ ಗದ್ದಿಗೆ ರಸ್ತೆಯಲ್ಲಿ ಕೆಎ-20/ಎ ನೋಂದಣಿ ಸಂಖ್ಯೆಯ ಆಟೋ ವಾಹನದಲ್ಲಿ ಅಕ್ರಮವಾಗಿ 5.580 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಚಂದ್ರ ಬಿನ್ ಲೇ: ಕುಮಾರ ಮತ್ತು ರಫೀಕ್ ಬಿನ್ ಜಬ್ಬರ್ ಎಂಬ ಆರೋಪಿಗಳನ್ನು ದಸ್ತಗಿರಿ ಮಾಡಿ, ಮುಂದಿನ ಕ್ರಮ ಜರುಗಿಸಲು ಹೆಚ್.ಡಿ. ಕೋಟೆ ಪೊಲೀಸ್ ಠ ಠಾಣಾಧಿಕಾರಿಗಳಿಗೆ ಹಸ್ತಾಂತರಿಸಿ, ಠಾಣಾ ಮೊಕದ್ದಮೆ ಸಂಖ್ಯೆ:82/2009ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇ ಹಸ್ತಾಂತರಿಸಲು ದಿನಾಂಕ:11.06.2009ರಂದು ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅ ದಿನಾಂಕ:12.06.2009ರಂದು ಹೆಚ್.ಡಿ.ಕೋಟೆ ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅ ನೀಡಲಾಗಿರುತ್ತದೆ.

ವಾಹನದ ಮಾಲೀಕರಾದ ವಾಸು ಬಿನ್ ಮನೋಹರ್, 2ನೇ ಕ್ರಾಸ್, ಹೆಚ್.ಡಿ.ಕೋಟೆ ದಿನಾಂಕ:25.08.2009ರಂದು ತಮ್ಮ ವಕೀಲರ ಮುಖೇನ ವಕಾಲತಿನೊಂದಿಗೆ ಅರ್ಜಿ ಸಲ್ಲಿಸಿ, ಜಪ್ತುಪಡಿಸಲಾದ ಆಟೋ ವಾಹನವನ್ನು ತನ್ನ ಮಧ್ಯಕಾಲೀನ ಸುಪರ್ದಿಗೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಹುಣಸೂರು ತಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:17.09.2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಇದೂವರೆವಿಗೂ ಸದರಿಯವರಿಂದ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:30.03.2009ರಂದು ಇವರು ಹೆಚ್.ಡಿ. ತಾಲ್ಲೂಕಿನ ಗದ್ದಿಗೆ ರಸ್ತೆಯಲ್ಲಿ ಕೆಎ-20/ಎ-6436 ನೋಂದಣಿ ಸಂಖ್ಯೆಯ ಆಟೋ ವಾಹನದಲ್ಲಿ ಅಕ್ರಮವಾಗಿ 5.58 ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಪ್ರಕರಣದಲ್ಲಿ ಚಂದ್ರ ಬಿನ್ ಲೇ: ಕುಮಾರ ರಫೀಕ್ ಬಿನ್ ಅಬ್ದುಲ್ ಜಬ್ಬರ್ ಎಂಬ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಅರ್ಜಿದಾರರು ತಮ್ಮ ಅಜ ಸದರಿ ವಾಹನವನ್ನು ತಮ್ಮ ಮಧ್ಯಕಾಲಿನ ಸುಪರ್ಧಿಗೆ ಬಿಡುಗಡೆ ಮಾಡಿಕೊಡಬೇಕೆಂದು ಕೋರಿ ಅರ್ಜಿ ಸ ವಾಹನವನ್ನು ಬಿಡುಗಡೆ ಮಾಡಿದಲ್ಲಿ ಅರ್ಜಿದಾರರು ಮಾರಾಟ ಮಾಡುವ ಅಡಮಾನ ಮಾಡುವ, ಬಣ್ಣ ಬದಲಾ ಬಿಡಿಭಾಗಗಳನ್ನು ಬದಲಾಯಿಸುವ ಸಾಧ್ಯತೆಗಳಿದ್ದು, ಅಲ್ಲದೆ ಇಂತಹುದೇ ಕೃತ್ಯಕ್ಕೆ ಬಳಸುವ ಸಾಧ್ಯತೆಗಳಿರುವುದರಿಂದ ಕಲಂ 43(ಬಿ)(2)ರಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ/ ಜವ ಅರ್ಜಿದಾರರ ಮೇಲಿದ್ದು ಈ ಕಾರಣದಿಂದಾಗಿ ಆತ ನೇರವಾಗಿ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲದಿದ್ದರೂ ಕೂಡ ಪರೋ ಆತನೇ ಹೊಣೆಗಾರನಾಗಿರುತ್ತಾನೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (13) ತಿಂಗಳಿಗೂ ಹೆಚ್ಚು ಕಾಲ ಕಳೆದಿದ್ದು, ಅರ್ಜಿದಾರರು ಮಧ್ಯಂತರ ಬಿಡುಗಡೆಗೆ ಅರ್ಜಿಯನ್ನು ಸಲ್ಲಿಸಿರುವುದನ್ನು ಹೊರತುಪಡಿಸಿ, ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆ ಯಾವುದೇ ಪ್ರಯತ್ನ ನಡೆದಿರುವುದಿಲ್ಲ. ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಪರೋ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/169/2008-09, ದಿನಾಂಕ:13ನೇ ಮೇ, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿ ನಂತರ ಕಲಂ 43(ಎ) (2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಅಬಕಾರಿ ಜ ಮತ್ತು ಲಾಟರಿ ಮತ್ತು ನಿಷೇಧ ದಳ, ವಿಶೇಷ ಪೊಲೀಸ್ ಠಾಣೆ, ಮೈಸೂರು ಜಿಲ್ಲೆ, ಇವರು ಹೂಡಲಾದ ಪ್ರ.ಮಾ.ವ ಸಂಖ್ಯೆ:82/2009, ದಿನಾಂಕ:30.03.2009ರಂದು ವಶಪಡಿಸಿಕೊಂಡ ಕೆಎ-20/ಎ-6436 ನೋಂದಣಿ ಸಂಖ್ಯೆಯ ಆಟ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಮೇ ತಿಂಗಳ 13ನೇ ತಾರೀಖಿನಂದು ವಿಷಯ ನಿರ್ವಾಹಕ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈ
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.959

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:120/2009-10, ದಿನಾಂಕ:15ನೇ ಏಪ್ರಿಲ್, 2010

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಅಬಕಾರಿ ನಿರೀಕ್ಷಕರು, ಪಿರಿಯಾಪಟ್ಟಣ ವಲಯ, ಪಿರಿಯಾಪಟ್ಟಣ.		ಅಜ್ಗರ್ ಪಾಷಾ ಬಿನ್ ಮಹಮ್ಮದ್ ಪಾಷಾ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:03.11.2009ರಂದು ಬೆಳಿಗ್ಗೆ 9.15 ಗಂಟೆಯ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ಪಿರಿಯಾಪಟ್ಟಣ ವಲ ಇವರು ಪಿರಿಯಾಪಟ್ಟಣ ತಾಲ್ಲೂಕು, ಹಾರನಹಳ್ಳಿ ಹೋಬಳಿಗೆ ಸೇರುವ ದೊಡ್ಡ ಹರವೆ ಗ್ರಾಮದ 2ನೇ ಬ್ಲಾಕ್ ಊರುಗುಪ್ಪೆಯಲ್ಲಿಯ ಸರ್ಕಾರಿ ಶಾಲೆಯ ಮುಂಭಾಗದ ರಸ್ತೆಯಲ್ಲಿ ಕೆಎ-12/ಎ-0051 ನೋಂದಣಿ ಸಂಖ್ಯೆಯ ಆಟೋ ವಾಹನದಲ್ಲಿ ಅಕ್ರಮವಾಗಿ 25.920 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮ ಮದ್ಯವನ್ನು ಜಪ್ತುಗೊಳಿಸಿ, ಪ್ರಥಮ ಮಾಹಿತಿ ವರದಿ ಸಂಖ್ಯೆ:02/2009-10ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕ 11, 13(ಎ) ಮತ್ತು 14ರ ರೀತ್ಯಾ ಅಪರಾಧವಾಗಿದ್ದು, 32, 38(ಎ) ಮತ್ತು 43ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಅಜ್ಗರ್ ಪಾಷ ಬಿನ್ ಮಹಮದ್ ಮುಸ್ತಾಫ್ ಎಂಬ ಆರೋಪಿಯನ್ನು ದಸ್ತಗಿರಿ ಮಾಡಿರುವುದಾಗಿ ಮೊಕದ್ದಮೆ ದಾಖಲಿಸಿ, ಮುಂದಿ ಕ್ರಮಕ್ಕಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಕೊಡಗು ಜಿಲ್ಲೆಯ ಮಡಿಕೇರಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:09.11.2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಬಿ ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಕಳುಹಿಸಿರುತ್ತಾರೆ. ಅದರಂತೆ ಶ್ರೀ ಮಂಜು ಆರ ಬಿನ್ ರಾಮೇಗೌಡ, ಮುಳ್ಳುಸೋಗೆ ಗ್ರಾಮ ಮತ್ತು ಪೋಸ್ಟ್, ಕುಶಾಲನಗರ, ಸೋಮವಾರಪೇಟೆ ತಾಲ್ಲೂಕು, ಕೊಡಗು ಜ ಇವರ ಒಡೆತನದಲ್ಲಿರುವುದು ದೃಢಪಟ್ಟಿರುತ್ತದೆ. ಸದರಿಯವರಿಗೆ ಈ ಪ್ರಾಧಿಕಾರದಿಂದ ದಿನಾಂಕ:14.12.2009ರಂದು ವಾಹ ಮತ್ತು ಮದ್ಯವನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕಲಂ 43(ಬಿ) ರ ಅಡಿಯಲ್ಲಿ ಕಾರಣ ಕೇಳು ನೋಟೀಸನ್ನು ನೀಡಲಾಗಿದ್ದು, ದಿನಾಂಕ:08.03.2010ರಂದು ಸಂಬಂಧಪಟ್ಟವರಿಗೆ ಜಾರಿಗೊಳಿಸಿ, ಪಿರಿಯಾಪಟ್ಟಣ ವಲಯ ಅಬಕಾರಿ ನಿರೀಕ್ಷಕರು, ದಿನಾಂಕ:26.03.2010ರಂದು ಈ ಪ್ರಾಧಿಕಾರಕ್ಕೆ ವರದಿ ಮಾಡಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:03.11.2009ರಂದು ಪಿರಿಯಾಪಟ್ಟಣ ತಾಲ್ಲೂಕು ಹಾರನಹಳ್ಳಿ ಹೋಬಳಿಗೆ ಸೇರುವ ದೊಡ್ಡ ಹರವೆ ಗ್ರಾಮದ 2ನೇ ಬ್ಲಾಕ್‌ನ ಊರುಗುಪ್ಪೆಯಲ್ಲಿಯ ಸರ್ಕಾರಿ ಶಾಲೆಯ

ಮುಂಭಾಗದ ರಸ್ತೆಯಲ್ಲಿ ಕೆಎ-12/ಎ-0051 ನೋಂದಣಿ ಸಂಖ್ಯೆಯ ಆಟೋ ವಾಹನದಲ್ಲಿ ಅಕ್ರಮವಾಗಿ 25.920 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಸಂದರ್ಭದಲ್ಲಿ ಆರೋಪಿ ಅಜ್ಗರ್ ಪಾಷಾ ಬಿನ್ ಮಹಮದ್ ಮುಸ್ತಾಫ್ ಇವರನ್ನು ದಸ್ತಗಿರಿಗೊಳಿಸಲಾಗಿರುತ್ತದೆ. ವಾಹನಕ್ಕೆ ಸಂಬಂಧಪಟ್ಟ ಆರೋಪಿಗಳಾಗಲೀ/ ವಾಹನ ಮಾಲೀಕರಾಗಲೀ ತಮ್ಮ ನಿಲುವು ಏನೆಂಬುದನ್ನು ಮತ್ತು ಮಾಲೀಕರ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಇದುವರೆವಿಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಹಾಗೂ ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆದಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (6) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರುಗಳಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/120/2009-10, ದಿನಾಂಕ:15ನೇ ಏಪ್ರಿಲ್, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ) (2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬಕಾರಿ ನಿರೀಕ್ಷಕರು, ಪಿರಿಯಾಪಟ್ಟಣ ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:02/2009-10, ದಿನಾಂಕ:03.11.2009ರಂದು ವಶಪಡಿಸಿಕೊಂಡ ಕೆಎ-12/ಎ-0051 ನೋಂದಣಿ ಸಂಖ್ಯೆಯ ಆಟೋ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಏಪ್ರಿಲ್ ತಿಂಗಳ 15ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಪಿ.ಆರ್.960 ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:574/2008-09, ದಿನಾಂಕ:13ನೇ ಮೇ, 2010

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಆರಕ್ಷಕ ನಿರೀಕ್ಷಕರು, ಸರಸ್ವತಿಪುರಂ ಪೊಲೀಸ್ ಠಾಣೆ, ಮೈಸೂರು.		ಹೇಮಂತ್ ಬಿನ್ ಹೊನ್ನೇಗೌಡ

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:20.02.2009ರಂದು ಬೆಳಿಗ್ಗೆ 11.15 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಲಾಟರಿ ಮತ್ತು ನಿಷೇಧ ವಿಭಾಗ, ಮೈಸೂರು ನಗರ, ಇವರು ರಾಜಾಜಿನಗರದ ರಿಂಗ್ ರಸ್ತೆಯ ಬಳಿ ಶಾರದಾದೇವಿ ನಗರದ

ಕಡೆಯಿಂದ ಕೆಎ–09/ಇಎಂ–6430 ನೋಂದಣಿ ಸಂಖ್ಯೆಯ ಬಜಾಜ್ ಪಲ್ಸರ್ ವಾಹನದಲ್ಲಿ ಅಕ್ರಮವಾಗಿ 17.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಆರೋಪಿ ಹೇಮಂತ್ ಬಿನ್ ಹೊನ್ನೇಗೌಡ ಇವರನ್ನು ದಸ್ತಗಿರಿ ಮಾಡಿ ಮುಂದಿನ ಕ್ರಮ ಜರುಗಿಸಲು ಸರಸ್ವತಿಪುರಂ ಪೊಲೀಸ್ ಠಾಣೆಯ ಠಾಣಾಧಿಕಾರಿಗಳಿಗೆ ಹಸ್ತಾಂತರಿಸಿ, ಠಾಣಾ ಮೊಕದ್ದಮೆ ಸಂಖ್ಯೆ: 15/2009ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14, 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:18.05.2009 ರಂದು ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅಂತೆಯೇ ದಿನಾಂಕ:22.05.2009ರಂದು ಮೈಸೂರು ವಲಯ–3ರ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿರುತ್ತದೆ.

ಕೆ. ನಾಗರಾಜು ಬಿನ್ ಕೆಂಚೇಗೌಡ ಕೆ. ಸಾಲುಂಡಿ ಗ್ರಾಮ ಮತ್ತು ಹೋಬಳಿ, ಎಂ.ಕೆ. ಹಳ್ಳಿ ಅಂಚೆ, ಮೈಸೂರು ಇವರ ಪರ ವಕೀಲರು ವಕಾಲತ್ತಿನೊಂದಿಗೆ ಅರ್ಜಿಯನ್ನು ಸಲ್ಲಿಸಿ ವಾಹನವನ್ನು ತನ್ನ ಮಧ್ಯಕಾಲಿನ ಸುಪರ್ದಿಗೆ ನೀಡಬೇಕೆಂದು ಕೋರಿರುತ್ತಾರೆ. ಸದರಿ ವಾಹನ ಮಾಲೀಕರಿಗೆ ಈ ಪ್ರಾಧಿಕಾರದಿಂದ ಕಲಂ 43(ಬಿ)ರಡಿಯಲ್ಲಿ ಕಾರಣ ಕೇಳುವ ನೋಟಿಸ್‌ನ್ನು ನೀಡಲಾಗಿದ್ದು, ಕಾರಣ ಕೇಳುವ ನೋಟಿಸಿಗೆ ಪ್ರತಿಕ್ರಿಯಿಸಿ ಲಿಖಿತ ಮೂಲಕ ಉತ್ತರವನ್ನು ಸಲ್ಲಿಸಿ, ಆರೋಪವನ್ನು ಅಲ್ಲಗಳೆದಿರುತ್ತಾರೆ.

ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಮೈಸೂರು ಪೂರ್ವ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:23.05.2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಆದರೆ ಇಲ್ಲಿಯವರೆಗೆ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:20.02.2009ರಂದು ಮೈಸೂರು ನಗರದ ರಾಜಾಜಿನಗರದ ರಿಂಗ್ ರಸ್ತೆಯ ಬಳಿ ಶಾರದಾದೇವಿ ನಗರದ ಕಡೆಯಿಂದ ಕೆಎ–09/ಇಎಂ–6430 ನೋಂದಣಿ ಸಂಖ್ಯೆಯ ಬಜಾಜ್‌ಪಲ್ಸರ್ ವಾಹನದಲ್ಲಿ ಅಕ್ರಮವಾಗಿ 17.280 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಪ್ರಕರಣದಲ್ಲಿ ಹೇಮಂತ್ ಬಿನ್ ಹೊನ್ನೇಗೌಡ ಎಂಬ ಆರೋಪಿಯನ್ನು ದಸ್ತಗಿರಿ ಮಾಡಲಾಗಿರುತ್ತದೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಸದರಿ ವಾಹನವನ್ನು ತಮ್ಮ ಮಧ್ಯಕಾಲಿನ ಸುಪರ್ದಿಗೆ ಬಿಡುಗಡೆ ಮಾಡಿಕೊಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದು, ವಾಹನವನ್ನು ಬಿಡುಗಡೆ ಮಾಡಿದಲ್ಲಿ ಅರ್ಜಿದಾರರು ಮಾರಾಟ ಮಾಡುವ ಅಡಮಾನ ಮಾಡುವ, ಬಣ್ಣ ಬದಲಾಯಿಸುವ, ಬಿಡಿಭಾಗಗಳನ್ನು ಬದಲಾಯಿಸುವ ಸಾಧ್ಯತೆಗಳಿದ್ದು, ಅಲ್ಲದೆ ಇಂತಹುದೇ ಕೃತ್ಯಕ್ಕೆ ಬಳಸುವ ಸಾಧ್ಯತೆಗಳಿರುವುದರಿಂದ ಹಾಗೂ ಕಲಂ 43(ಬಿ)(2)ರಡಿಯಲ್ಲಿ ಕಾನೂನಿನಲ್ಲಿ ವಿವಿಧ ಜವಾಬ್ದಾರಿಗಳಿದ್ದು ಅದನ್ನು ನಿರ್ವಹಿಸುವ ಆದ್ಯ ಕರ್ತವ್ಯ/ ಜವಾಬ್ದಾರಿ ಅರ್ಜಿದಾರರ ಮೇಲಿದ್ದು ಈ ಕಾರಣದಿಂದಾಗಿ ಆತ ನೇರವಾಗಿ ಈ ಪ್ರಕರಣದಲ್ಲಿ ಭಾಗಿಯಾಗಿಲ್ಲದಿದ್ದರೂ ಕೂಡ ಪರೋಕ್ಷವಾಗಿ ಆತನೇ ಹೊಣೆಗಾರನಾಗಿರುತ್ತಾನೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (13) ತಿಂಗಳಿಗೂ ಹೆಚ್ಚು ಕಾಲ ಕಳೆದಿದ್ದು, ಅರ್ಜಿದಾರರು ವಾಹನ ಮಧ್ಯಂತರ ಬಿಡುಗಡೆಗೆ ಅರ್ಜಿಯನ್ನು ಸಲ್ಲಿಸಿರುವುದನ್ನು ಹೊರತುಪಡಿಸಿ, ವಾಹನ ಬಿಡುಗಡೆಗಾಗಿ ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆದಿರುವುದಿಲ್ಲ. ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/574/2008–09, ದಿನಾಂಕ:13ನೇ ಮೇ, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಬಿ)ರ ಪ್ರಕಾರ ಅನುಸರಿಸಬೇಕಾದ ಕ್ರಮಗಳನ್ನೆಲ್ಲಾ ಅನುಸರಿಸಿದ ನಂತರ ಕಲಂ 43(ಎ) (2) ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ಸರಸ್ವತಿಪುರಂ ಪೊಲೀಸ್ ಠಾಣೆ, ಮೈಸೂರು ನಗರ, ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:15/2009, ದಿನಾಂಕ:20.02.2009ರಂದು ವಶಪಡಿಸಿಕೊಂಡ ಕೆಎ–09/ಇಎಂ6430 ನೋಂದಣಿ ಸಂಖ್ಯೆಯ ಬಜಾಜ್ ಪಲ್ಸರ್ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಮೇ ತಿಂಗಳ 13ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಲೇಖಿನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಆರ್.968

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:437/2008-09, ದಿನಾಂಕ:18ನೇ ಮಾರ್ಚ್, 2010

ಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	**ವಿರುದ್ಧ**	**ಪ್ರತಿವಾದಿ/ ಆರೋಪಿ**
ರಕ್ಷಕ ನಿರೀಕ್ಷಕರು, ಮಂಡಿ ಪೊಲೀಸ್ ಠಾಣೆ, ಮೈಸೂರು.		ನಾಗರಾಜ ಬಿನ್ ಲೇ: ಲಿಂಗಪ್ಪ

ರಣದ ಮುಖ್ಯಾಂಶಗಳು:

ದಿನಾಂಕ:13.02.2009ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಆರಕ್ಷಕ ನಿರೀಕ್ಷಕರು, ಅಬಕಾರಿ ಜಾರಿ ಮತ್ತು ಚರಿ ಮತ್ತು ನಿಷೇಧ ವಿಭಾಗ, ಮೈಸೂರು ನಗರ, ಇವರು ಮೈಸೂರು ನಗರದ ಅಕ್ಬರ್ ರಸ್ತೆಯ ಮಂಡಿ ಮಾರ್ಕೆಟ್ ಬಳಿ -09/ಎಲ್-129 ನೋಂದಣಿ ಸಂಖ್ಯೆಯ ಟಿವಿಎಸ್-50 ವಾಹನದಲ್ಲಿ ಅಕ್ರಮವಾಗಿ 19.440 ಲೀ. ಮದ್ಯ 3.300 ಲೀ. ಯರನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ ಆರೋಪಿಯಾದ ಗರಾಜ ಬಿನ್ ಲೇ: ಲಿಂಗಪ್ಪ ಎಂಬುವವನನ್ನು ದಸ್ತಗಿರಿ ಮಾಡಿ ಮುಂದಿನ ಕ್ರಮ ಜರುಗಿಸಲು ಮಂಡಿ ಪೊಲೀಸ್ ಠಾಣೆಗೆ ಸ್ತಾಂತರಿಸಿ ಠಾಣಾ ಮೊಕದ್ದಮೆ ಸಂಖ್ಯೆ:25/2009ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14, 32, 34ರ ನ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಂಕ:21.02.2009 ರಂದು ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅಂತೆಯೇ ದಿನಾಂಕ:27.02.2009ರಂದು ಸೂರು ವಲಯ-1ರ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿರುತ್ತದೆ.

ವಶಪಡಿಸಿಕೊಂಡ ವಾಹನದ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಮೈಸೂರು ಜಿಲ್ಲೆಯ ರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:16.03.2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಯುವರೆವಿಗೂ ಯಾವುದೇ ಪ್ರತಿಕ್ರಿಯೆ ಇರುವುದಿಲ್ಲ.

ವಾಹನದ ಮಾಲೀಕರಾದ ಜಿ.ಚಂದ್ರ ಬಿನ್ ಕೆ.ಸಿ. ಗೋಪಾಲ್, ಕೆ.ಕೆ. ಹುಂಡಿ, ರಾಮನಹಳ್ಳಿ ಪೋಸ್ಟ್, ಮೈಸೂರು ಇವರು ತಮ್ಮ ವಕೀಲ ಮುಖೇನ ದಿನಾಂಕ:03.03.2009ರಂದು ವಕಾಲತ್ತಿನೊಂದಿಗೆ ಅರ್ಜಿ ಸಲ್ಲಿಸಿ ಜಪ್ತುಪಡಿಸಲಾದ ಎಸ್-50 ಸಂಖ್ಯೆ:ಕೆಎ-09/ಎಲ್-129 ವಾಹನಕ್ಕೆ ಅಗತ್ಯ ಭದ್ರತೆಯನ್ನು ಪಡೆದು ತಮ್ಮ ಮಧ್ಯಂತರ ಸುಪರ್ದಿಗೆ ಬಿಡುಗಡೆ ಡಬೇಕೆಂದು ಕೋರಿರುತ್ತಾರೆ.

ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು. ದಿನಾಂಕ:13.02.2009ರಂದು ಮೈಸೂರು ನಗರದ ಅಕ್ಬರ್ ಯ ಮಂಡಿ ಮಾರ್ಕೆಟ್ ಬಳಿ ಕೆಎ-09/ಎಲ್-129 ನೋಂದಣಿ ಸಂಖ್ಯೆಯ ಟಿವಿಎಸ್-50 ವಾಹನದಲ್ಲಿ ಅಕ್ರಮವಾಗಿ 440 ಲೀ. ಮದ್ಯ 3.300 ಲೀ. ಬಿಯರನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಈ ಪ್ರಕರಣದಲ್ಲಿ ಗರಾಜ ಬಿನ್ ಲೇ: ಲಿಂಗಪ್ಪ ಎಂಬ ಆರೋಪಿಯನ್ನು ದಸ್ತಗಿರಿ ಮಾಡಲಾಗಿರುತ್ತದೆ. ಈ ಬಗ್ಗೆ ಪ್ರತಿವಾದಿಗಳಾಗಲಿ ಅವರ ಲರಾಗಲಿ ವಾಹನ ಮಾಲೀಕರ ತಿಳುವಳಿಕೆಯಲ್ಲಿ ಈ ಕೃತ್ಯ ನಡೆದಿರುವುದಿಲ್ಲ ಎಂಬುದರ ಬಗ್ಗೆ ತನ್ನ ಮೇಲೆ ಇರತಕ್ಕಂತಹ ಬಾಬ್ದಾರಿಯನ್ನು ಇದೂವರೆಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತನ್ನ ನಿಲುವು ಏನೆಂಬುದನ್ನು ಸ್ಪಷ್ಟವಾಗಿ ರೂಪಿಸಿರುವುದಿಲ್ಲ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು 11 ತಿಂಗಳಿಗೂ ಹೆಚ್ಚು ಕಾಲ ಕಳೆದಿರುತ್ತದೆ. ಜಪ್ತಿಯಾದ ಹನವನ್ನು ಮಧ್ಯಂತರ ಬಿಡುಗಡೆಗಾಗಿ ವಕೀಲ ಮುಖೇನ ಅರ್ಜಿಯನ್ನು ಸಲ್ಲಿಸಲಾಗಿದ್ದು, ವಾಹನ ಬಿಡುಗಡೆಗಾಗಿ

ಪ್ರತಿವಾದಿಗಳ ಕಡೆಯಿಂದ ಯಾವುದೇ ಪ್ರಯತ್ನ ನಡೆದಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಅಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್/437/2008–09, ದಿನಾಂಕ:18ನೇ ಮಾರ್ಚ್, 2010

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ, 43(ಎ)(2)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ನಿರೀಕ್ಷಕರು, ಮಂಡಿ ಪೊಲೀಸ್ ಠಾಣೆ ಇವರು ಹೂಡಲಾದ ಪ್ರ.ಮಾ. ವರದಿ ಸಂಖ್ಯೆ:25/2009, ದಿನಾಂಕ:13.02.2009ರಂದು ವಶಪಡಿಸಿಕೊಂಡ ಕೆಎ–09/ಎಲ್–129 ನೋಂದಣಿ ಸಂಖ್ಯೆಯ ಟಿವಿಎಸ್–50 ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2010ನೇ ಇಸವಿ ಮಾರ್ಚ್ ತಿಂಗಳ 18ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್.969

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:219/2008–09, ದಿನಾಂಕ:17ನೇ ಡಿಸೆಂಬರ್, 2009

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು:	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ಮೇಟಗಳ್ಳಿ ಪೊಲೀಸ್ ಠಾಣೆ, ಮೈಸೂರು ನಗರ.		ರವಿ ಮತ್ತು ಇತರರು

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:05.08.2008ರ ಮಧ್ಯಾಹ್ನ 3.00 ಗಂಟೆಯ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು, ಮೇಟಗಳ್ಳಿ ಪೊಲೀಸ್ ಠಾಣೆ ಇವರು ಕರ್ತವ್ಯ ನಿರತ ಸಮಯದಲ್ಲಿ ಮೈಸೂರು ನಗರದ, ಮೈಸೂರು ಸಿಟಿ, ಬಿ.ಎಂ. ಶ್ರೀನಗರ, ಮನೆ ನಂ.151/ಎ, ಸರ್ವೆ ನಂ.115/1ರ ಮನೆಯ ಮುಂದೆ ತೆಂಗಿನಗರಿ ಮತ್ತು ಜಂಗ್‌ಶೀಟ್ ತಡಿಕೆಗಳಿಂದ ಸುಮಾರು ಏಳು ಅಡಿಗಳಷ್ಟು ಎತ್ತರದಲ್ಲಿ ಮರೆ ಮಾಡಿದ್ದು ಮತ್ತು ಪಕ್ಕದ ಸೈಟಿನಲ್ಲಿ ಔಟ್ ಹೌಸ್ ಇದ್ದು, ಇವುಗಳ ಮುಂಭಾಗದ ಬಾಗಿಲಿನ ಮುಂದೆ ಒಂದು ಬಿಳಿ ಬಣ್ಣದ ಮಾರುತಿ ಸುಜುಕಿ–800 ಡಿಎಕ್ಸ್ ಕೆಎ–03/ಎಂ–272 ನೋಂದಣಿ ಸಂಖ್ಯೆಯ ವಾಹನವು ನಿಂತಿದ್ದು, ಅದರ ಹಿಂಭಾಗದ ಡಿಕ್ಕಿ ಮೇಲಕ್ಕೆ ತೆರೆದುಕೊಂಡಿದ್ದು, ಸದರಿ ಡಿಕ್ಕಿಯಲ್ಲಿ ಒಬ್ಬ ಆಸಾಮಿ ಮದ್ಯದ ರಟ್ಟಿನ ಬಾಕ್ಸ್‌ಗಳನ್ನು ತಂದು ಇಟ್ಟು, ಮತ್ತೊಂದು ಬಾಕ್ಸ್‌ನ್ನು ತಂದು ಇಡುತ್ತಿದ್ದ ಸಂದರ್ಭದಲ್ಲಿ ಇಲಾಖಾಧಿಕಾರಿಗಳನ್ನು ನೋಡಿ ಪರಾರಿಯಾಗಿರುತ್ತಾನೆ. ತಕ್ಷಣ ಸದರಿ ಮನೆಯನ್ನು ಸುತ್ತುವರಿದು ಪರಿಶೀಲಿಸಲಾಗಿ ಕಾರಿನಲ್ಲಿ ಎರಡು ಮದ್ಯ ತುಂಬಿರುವ ಬಾಕ್ಸ್‌ಗಳಿದ್ದು, ಅದರಲ್ಲಿ 180 ಮಿಲಿಯ ತಲಾ 48 ಬಾಟಲ್‌ಗಳಂತೆ ಒರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲ್‌ನ ಮದ್ಯವಿರುತ್ತದೆ. ಅಲ್ಲದೆ ಒರಿಜಿನಲ್ ಚಾಯ್ಸ್ ಲೇಬಲ್‌ಗಳು, ಸ್ಟಿಕ್ಕರ್‌ಗಳು ಸಹ ಕಂಡುಬಂದಿರುತ್ತವೆ. ಹಾಗೆಯೇ ಕಾರಿನ ಪಕ್ಕ ಒಂದು ದ್ವಿಚಕ್ರ ವಾಹನ ಬಜಾಜ್ ಡಿಸ್ಕವರ್ ಇದ್ದು, ಅದನ್ನೂ ಸಹ ಪರಿಶೀಲಿಸಲಾಗಿ ಸಂಖ್ಯೆ: ಕೆಎ–09/ಇಕೆ–9803ಯಾಗಿದ್ದು,

ಟ್ಯಾಂಕಿನ ಮೇಲೆ ಇರುವ ಕವರಿನಲ್ಲಿ ಒರಿಜಿನಲ್ ಚಾಯ್ಸ್ ಸ್ಟಿಕ್ಕರ್ ಇದ್ದು, ನಂತರ ಮನೆಯ ಮುಂದಿನ ಗೋಡೆಯಲ್ಲಿ 151/ಎ, ಸರ್ವೆ ನಂ.115/1 ಎಂದು ಬರೆದಿರುತ್ತದೆ. ಸದರಿ ಮನೆಯನ್ನು ಇಣುಕಿ ನೋಡಲಾಗಿ ಹಾಲ್‌ನಲ್ಲಿ ರಟ್ಟಿನ ಪೆಟ್ಟಿಗೆಗಳನ್ನು ಜೋಡಿಸಲಾಗಿತ್ತು. ಒಳಗೆ ಪ್ರವೇಶಿಸಿದಾಗ 6 ಜನ ಆಸಾಮಿಗಳು ನಕಲಿ ಮದ್ಯ ತಯಾರಿಕೆ, ಪ್ಯಾಕಿಂಗ್ ಮತ್ತು ಲೇಬಲ್ ಅಂಟಿಸುವ ಕಾರ್ಯದಲ್ಲಿ ನಿರತರಾಗಿದ್ದು ವಿಚಾರ ಮಾಡಿದಾಗ ರವಿ ಬಿನ್ ನರಸಿಂಹೇಗೌಡ, ಸೋಮಶೇಖರ್ ಬಿನ್ ನರಸಿಂಹೇಗೌಡ, ಶಿವಶಂಕರ ಬಿನ್ ಗೋವಿಂದಶೆಟ್ಟಿ, ಸುಧಾಕರ ಬಿನ್ ನಾಗೇಗೌಡ, ಮಹದೇವ ಬಿನ್ ಬಳ್ಳಶೆಟ್ಟಿ, ಕುಮಾರ ಬಿನ್ ತಿಮ್ಮೇಗೌಡ ಇವರುಗಳಲ್ಲದೆ ಪರಾರಿಯಾದ ವ್ಯಕ್ತಿಯ ಹೆಸರು ಶರಣ್ ಸಾದನಹಳ್ಳಿ ಗ್ರಾಮ ಎಂದು ತಿಳಿದುಬಂದಿದ್ದರಿಂದ ಸ್ಥಳದಲ್ಲಿ ಲಭ್ಯವಿದ್ದ (1) ಮಾರುತಿ ವಾಹನ ಕೆಎ-03/ಎಂ-272, (2) ಬಜಾಜ್ ಡಿಸ್ಕವರ್ ಕೆಎ-09/ಇಕೆ-9803, (3) 17.280 ಲೀ. ನಕಲಿ ಮದ್ಯ (4) ರಬ್ಬರ್ ಬ್ಯಾಂಡ್ ಹಾಕಿರುವ ಒರಿಜಿನಲ್ ಚಾಯ್ಸ್ ಲೇಬಲ್‌ಗಳು, (5) ಸ್ಟಿಕರ್‌ಗಳು, (6) ಮೊಬೈಲ್ ನೋಕಿಯಾ 1100 ಪೋನ್, (7) 2112 ಖಾಲಿ ಬಾಟಲ್‌ಗಳು, (8) 95.040 ಲೀ. ಮದ್ಯ, (9) ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಡ್ರಮ್‌ನಲ್ಲಿ ಕೆಂಪು ಬಣ್ಣದ ಮದ್ಯವಿರುತ್ತದೆ. (10) 2 ಬಿಳಿ ಬಣ್ಣದ 30 ಲೀ. ಕ್ಯಾನ್‌ನಲ್ಲಿ ಕೆಂಪು ಬಣ್ಣದ ನಕಲಿ ಮದ್ಯ ತುಂಬಿದೆ. (11) 35 ಲೀ. ಕ್ಯಾನ್‌ನಲ್ಲಿ 3 ರಿಂದ 4 ಲೀ.ನಷ್ಟು ವೆನಿಲ್ಲಾ, (12) ಒಂದು ಬಿಳಿ ಬಣ್ಣದ 35 ಲೀ. ಕ್ಯಾನ್‌ನಲ್ಲಿ ಮದ್ಯಸಾರ ಹಾಗೂ ಇತರೆ ವಸ್ತುಗಳು, ಮೊಬೈಲ್‌ಗಳು ಮತ್ತು ನಕಲಿ ಮದ್ಯ ತಯಾರಿಕಾ ವಸ್ತುಗಳನ್ನು ಜಪ್ತುಪಡಿಸಿ ಕರ್ನಾಟಕ ಅಬಕಾರಿ 1965ರ 34, 36, 38(ಎ) ಪ್ರಥಮ ಮಾಹಿತಿ ವರದಿ ಸಂಖ್ಯೆ:141/2008ರಲ್ಲಿ ಜಪ್ತುಪಡಿಸಲಾದ ವಾಹನಗಳು, ಮಾದಕ ದ್ರವ್ಯ ಮತ್ತು ನಕಲಿ ಮದ್ಯ ತಯಾರಿಕಾ ವಸ್ತುಗಳನ್ನು ಮುಂದಿನ ಕ್ರಮಕ್ಕಾಗಿ ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:15.10.2008ರಂದು ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅಂತೆಯೇ ದಿನಾಂಕ:15.10.2008ರಂದು ಮೈಸೂರು ವಲಯ-2 ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿರುತ್ತದೆ.

ವಶಪಡಿಸಿಕೊಂಡ ವಾಹನಗಳ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಮೈಸೂರು ಪೂರ್ವ ಮತ್ತು ಬೆಂಗಳೂರು ಪೂರ್ವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:15.10.2008ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿದ್ದು, ಕೆಎ-03/ಎಂ-272 ವಾಹನದ 'ಬಿ' ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಕಳುಹಿಸಿರುತ್ತಾರೆ. ಇದನ್ನು ಪರಿಶೀಲಿಸಲಾಗಿ ಜೋಸೆಫ್ ಥಾಮಸ್, ನಂ.70(14), ಚರ್ಚ್ ಸ್ಟ್ರೀಟ್, ಬೆಂಗಳೂರು- ಇವರು ನೋಂದಣಿ ಮಾಲೀಕರಾಗಿದ್ದು, ಇದರ ತಿರುವಳಿ ಪತ್ರವನ್ನು ಜಯನಗರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಹಸ್ತಾಂತರಿಸಿರುವುದಾಗಿ ನಮೂದಿಸಿರುತ್ತಾರೆ.

ಈ ಪ್ರಾಧಿಕಾರದಿಂದ ದಿನಾಂಕ:24.09.2009ರಂದು ವಾಹನ ಮತ್ತು ಮಾದಕ ದ್ರವ್ಯಗಳನ್ನು ಸರ್ಕಾರಕ್ಕೆ ಏಕೆ ಮುಟ್ಟುಗೋಲು ಹಾಕಿಕೊಳ್ಳಬಾರದೆಂದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43(ಬಿ)ರ ಅಡಿಯಲ್ಲಿ ಕಾರಣ ಕೇಳುವ ನೋಟಿಸನ್ನು ವಾಹನ ಮಾಲೀಕರಾದ ಜೋಸೆಫ್ ಥಾಮಸ್, ಇವರಿಗೆ ಜಾರಿಗೊಳಿಸಲು ಆದೇಶಿಸಲಾಗಿರುತ್ತದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:05.08.2008ರಂದು ಮೈಸೂರು ಸಿಟಿ, ಬಿ.ಎಂ. ಶ್ರೀನಗರ, ಮನೆ ನಂ.151/ಎ, ಸರ್ವೆ ನಂ.115/1ರ ಮುಂಭಾಗದಲ್ಲಿ ಕೆಎ-03/ಎಂ-272 ನೋಂದಣಿ ಸಂಖ್ಯೆಯ ಮಾರುತಿ ವಾಹನದಲ್ಲಿ 17.280 ಲೀ.ನಕಲಿ ಮದ್ಯ, ಸ್ಟಿಕ್ಕರ್‌ಗಳು ಹಾಗೂ ಮತ್ತೊಂದು ವಾಹನ ಕೆಎ-09/ಇಕೆ-9803 ನೋಂದಣಿ ಸಂಖ್ಯೆಯ ಬಜಾಜ್ ಡಿಸ್ಕವರ್ ವಾಹನದಲ್ಲಿ ಸ್ಟಿಕ್ಕರ್‌ಗಳನ್ನು ಹೊಂದಿದ್ದು ಅಲ್ಲದೆ ಮನೆಯಲ್ಲಿಯೂ ಸಹ ಮದ್ಯಸಾರ, ನಕಲಿ ಮದ್ಯ ತಯಾರಿಕಾ ವಸ್ತುಗಳನ್ನು ಹೊಂದಿದ್ದುದ್ದು/ ಸಾಗಾಣಿಕೆ ಮಾಡುತ್ತಿದ್ದುದ್ದು ಕಂಡುಬಂದಿರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 34, 36ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಈ ಬಗ್ಗೆ ಪ್ರತಿವಾದಿಗಳು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಇದೂವರೆವಿಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯವು ವಾಹನ ಮಾಲೀಕನ ತಿಳುವಳಿಕೆಯಲ್ಲೇ ನಡೆದಿದೆ ಎಂಬುವುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

